# ಯುಗಶಕ್ತಿ

- ಇಸ್ಲಾಮ್ ಧರ್ಮದ ಬಗ್ಗೆ ಪೋಪರ ತಪ್ಪು ಕಲ್ಪನೆ
- ಪವಿತ್ರ ಖುರ್‌ಆನ್ - ಮಾನವರಿಗೆ ಪರಿಪೂರ್ಣ ಮಾರ್ಗದರ್ಶಕ ಗ್ರಂಥ
- ಪ್ರವಾದಿತ್ವ ಸಮಾಪ್ತಿಯ ನಿಜಸ್ಥಿತಿ
- ಧರ್ಮದ ನಾಮದಲ್ಲಿ ರಕ್ತಪಾತ

ಡಿಸೆಂಬರ್ 2006

ತ್ರೈಮಾಸಿಕ
ಬೆಲೆ ರೂ.5/-

(ಪ್ರವಾದಿಯೇ,) ಹೇಳು: "ಎಲೈ ಜನರೇ, ನಿಮ್ಮ ಪ್ರಭುವಿನ ಕಡೆಯಿಂದ ನಿಮಗೆ ಸತ್ಯ ಬಂದಿರುತ್ತದೆ. ಯಾರಾದರೂ ಸತ್ಪಥವನ್ನು ಅನುಸರಿಸುವನಾದರೆ, ಅವನು ತನ್ನ ಒಳಿತಿಗಾಗಿಯೇ ಸತ್ಪಥವನ್ನು ಅನುಸರಿಸುತ್ತಾನೆ. ಯಾರಾದರೂ ದಾರಿ ತಪ್ಪಿ ಹೋಗುವನಾದರೆ, ತನಗೆ ಹಾನಿಕಾರವಾಗಿಯೇ ಅವನು ದಾರಿತಪ್ಪುತ್ತಾನೆ. ನಾನು ನಿಮ್ಮ ಮೇಲ್ನೋಟಗಾರನಲ್ಲ."

ಪವಿತ್ರ ಖುರ್‌ಆನ್ (10:109)

# ಯುಗರಶ್ಮಿ

## ತ್ರೈಮಾಸಿಕ

10-23-1008/1, 1ನೇ ಮಹಡಿ, ಅನ್ಸಾರಿ ರಸ್ತೆ, ಬಂದರ್, ಮಂಗಳೂರು - 575 001

ಬಿಡಿ ಪ್ರತಿ : ರೂ.5/- ವಾರ್ಷಿಕ ಚಂದಾ : ರೂ.20/- ಅಂಚೆ ಮೂಲಕ : ರೂ.30/-

**ವಿಷಯ ಸೂಚಿಕೆ** **ಪುಟ**

★ ಹಜ್ಜ್ ಪುಣ್ಯ ಕರ್ಮದ ತತ್ವ 1
★ ಮುಹಮ್ಮದ್ ಪೈಗಂಬರರ(ಸ) ನುಡಿಮುತ್ತುಗಳು 2
★ ಇಸ್ಲಾಮ್ ಧರ್ಮದ ಬಗ್ಗೆ ಪೋಪರ ತಪ್ಪು ಕಲ್ಪನೆ 3
★ ಪವಿತ್ರ ಖುರ್‌ಆನ್- ಮಾನವರಿಗೆ ಪರಿಪೂರ್ಣ ಮಾರ್ಗದರ್ಶಕ ಗ್ರಂಥ 15
★ ಪ್ರವಾದಿತ್ವ ಸಮಾಪ್ತಿಯ ನಿಜಸ್ಥಿತಿ - 10 20
★ ನಿಧನ ವಾರ್ತೆಗಳು 26
★ ಪುಸ್ತಕ ವಿಭಾಗ : ಧರ್ಮದ ನಾಮದಲ್ಲಿ ರಕ್ತಪಾತ 27

## ಯುಗರಶ್ಮಿ ಸಮಿತಿ

ಮುಹಮ್ಮದ್ ಶಫೀಉಲ್ಲಾಹ್, ಅಮೀರ್ ಜಮಾಅತ್ ಅಹ್ಮದಿಯಾ ಕರ್ನಾಟಕ (ಉಮೂಮಿ ನಿಗ್ರಾನ್)

ಮುಹಮ್ಮದ್ ಯೂಸುಫ್ (ಸಂಪಾದಕ)

ಸಿದ್ದೀಖ್ ಅಶ್ರಫ್ ಅಲಿ

ಯು.ಎಸ್. ಮಾಹಿನ್ ಕುಞ್ಞಿ (ಪ್ರೆಸಿಡೆಂಟ್, ಜ.ಅ. ಮಂಗಳೂರು)

ಎಂ. ಉಬೈದುಲ್ಲಾ

ಎಂ. ಪಿ. ಇಬ್ರಾಹಿಂ

ರಶೀದ್ ಅಹ್ಮದ್ ಸಿದ್ದೀಖ್

ಝುಫರ್ ಅಹ್ಮದ್

ಎಂ.ಎ. ಬಶೀರ್ ಅಹ್ಮದ್ (ಪ್ರೆಸಿಡೆಂಟ್, ಜ.ಅ. ಮಡಿಕೇರಿ)

ಜೆ.ಎಂ. ಮುಹಮ್ಮದ್ ಶರೀಫ್ (ಖಾಯಿದ್, ಜ.ಅ. ಮಡಿಕೇರಿ)

بِسْمِ اللّٰهِ الرَّحْمٰنِ الرَّحِيْمِ

نَحْمَدُهٗ وَنُصَلِّيْ عَلٰى رَسُوْلِهِ الْكَرِيْمِ


# ಯುಗರಶ್ಮಿ

ಸಂಪಾದಕ : ಮುಹಮ್ಮದ್ ಯೂಸುಫ್

| ಆರಂಭ : 1975 | ಸಂಪುಟ : 23 | ಡಿಸೆಂಬರ್ 2006 | ಫತಹ್ 1385 | ಸಂಚಿಕೆ : 1-2 |
|---|---|---|---|---|


## ಹಜ್ಜ್ ಪುಣ್ಯಕರ್ಮದ ತತ್ವ

ಹಜ್ಜ್ ಎಂದರೆ ಒಬ್ಬನು ತನ್ನ ಮನೆಯಿಂದ ಹೊರಟು ಸಮುದ್ರದಾಚೆ ಯಾತ್ರೆಮಾಡಿ (ಅಲ್ಲಿ) ಆಚಾರಪರವಾದ ಕೆಲವು ವಚನಗಳನ್ನು ಉಚ್ಚರಿಸಿ, ಕೆಲವು ಆಚಾರಾನುಷ್ಠಾನಗಳನ್ನು ನಿರ್ವಹಿಸಿ ಮರಳಿ ಬರುವುದಲ್ಲ ಉದ್ದೇಶ. ಯಥಾರ್ಥವೇನೆಂದರೆ, ಹಜ್ಜ್ ಮಹೋನ್ನತವಾದ ಒಂದು ಅನುಷ್ಠಾನವಾಗಿದೆ. ಅದು ಪರಿಪೂರ್ಣವಾದ 'ಸುಲೂಕಿ'ನ (ಆಧ್ಯಾತ್ಮಿಕ ಸಂಚಾರದ) ಕೊನೆಯ ಸ್ಥಾನವೆಂದು ತಿಳಿದುಕೊಳ್ಳಿರಿ. ಮನುಷ್ಯನು ತನ್ನ ನಫ್ಸ್‌ನೊಡನಿರುವ (ಸ್ವ‌ಇಚ್ಛೆಯೊಡನಿರುವ) ಬಂಧವನ್ನು ವಿಚ್ಛೇದಿಸಬೇಕು; ಅಲ್ಲಾಹನೊಡನೆ ಮಾತ್ರವಿರುವ ಪ್ರೀತಿಯಲ್ಲಿ ಸ್ವಯಂ ಲೀನವಾಗಬೇಕೆಂದು ಅದರ ಅರ್ಥ. ದೇವಾನುರಕ್ತಿಗೂ ಅವನೊಡನಿರುವ ಪ್ರೀತಿಗೂ ಅತೀತವಾಗಿ ಯಾವುದೇ ಯಾತ್ರಾಕ್ಲೇಶವಾಗಲೀ ಜೀವದ ಕುರಿತು ಮತ್ತು ಸಂಪತ್ತಿನ ಕುರಿತು ಚಿಂತೆಯಾಗಲೀ ವ್ಯಾಕುಲತೆಯಾಗಲೀ ಬಂಧುಮಿತ್ರಾದಿಗಳನ್ನು ಬಿಟ್ಟು ಹೋಗುವುದರಲ್ಲಿ ಬೇಸರವಾಗಲೀ ದುಃಖವಾಗಲೀ ಇಲ್ಲದಿರಬೇಕಾಗಿದೆ. ಯಾವ ಪ್ರಕಾರ ಒಬ್ಬ ಪ್ರೇಮಿ ತನ್ನ ಪ್ರೇಮಭಾಜನಕ್ಕಾಗಿ ಜೀವವನ್ನು ಕೂಡ ಪರಿತ್ಯಜಿಸಲು ಸಿದ್ಧನಾಗುತ್ತಾನೋ ಅದೇ ಪ್ರಕಾರ ಹಜ್ಜ್ ಕರ್ಮಾನುಷ್ಠಾನಿ ಸಹ ಹಾಗೆ ಮಾಡಲು ಹಿಂಜರಿಯಬಾರದು. ಅದಕ್ಕಿರುವ ಒಂದು ಮಾದರಿ ಹಜ್ಜ್‌ನಲ್ಲಿದೆ. ಯಾವ ರೀತಿ ಒಬ್ಬ ಪ್ರೇಮಿ ತನ್ನ ಪ್ರೇಮಭಾಜನದ ಸುತ್ತಲೂ ಸುತ್ತುತ್ತಿರುತ್ತಾನೋ ಅದೇ ರೀತಿ ಹಜ್ಜ್‌ನಲ್ಲಿ ಸಹ ತವಾಫ್ (ಪ್ರದಕ್ಷಿಣೆ) ಮಾಡಲಾಗುತ್ತದೆ. ಇದು ಬಹಳ ಸೂಕ್ಷ್ಮವಾದ ತತ್ವವಾಗಿದೆ. ಬಾಹ್ಯವಾದ ಒಂದು ಬೈತುಲ್ಲಾದಂತೆ ಅದಕ್ಕೆ ಮಿಗಿಲಾಗಿ ಒಂದು ಬೈತುಲ್ಲಾ ಇದೆ. ಎಷ್ಟರವರೆಗೆ ಅದನ್ನು ತವಾಫ್ ಮಾಡುವುದಿಲ್ಲವೋ ಅಷ್ಟರವರೆಗೆ ಇದರ ತವಾಫ್‌ನಿಂದ ಪುಣ್ಯ ಲಭಿಸುವುದಿಲ್ಲ. ಬಾಹ್ಯವಾದ ರೀತಿಯಲ್ಲಿ ತವಾಫ್ ಮಾಡುವವರು ಕಡಿಮೆ ವಸ್ತ್ರಧಾರಣೆ ಮಾಡಿಕೊಂಡು ತವಾಫ್ ಮಾಡುವುದನ್ನು ನೀವು ಕಾಣುತ್ತೀರಿ. ಅದೇ ಪ್ರಕಾರ ಭೌತಿಕ ವಸ್ತ್ರಗಳನ್ನು ತ್ಯಜಿಸಿ ವಿನಯ ಮತ್ತು ವಿಧೇಯತೆಯಿಂದಲೂ ಪ್ರೇಮಾನುರಾಗದಿಂದಲೂ ತವಾಫ್ ಮಾಡಬೇಕಾಗಿದೆ. ತವಾಫ್ ದೇವಾನುರಕ್ತಿಯ ಚಿಹ್ನೆಯಾಗಿದೆ. ಇದರ ಅರ್ಥ ದೇವೇಚ್ಛೆ ಮತ್ತು ಅವನ ತೃಪ್ತಿಗೆ ಸುತ್ತಲೂ ತವಾಫ್ ಮಾಡುವುದಾಗಿದೆ. ಬೇರೆ ಯಾವ ಉದ್ದೇಶವೂ ಇರುವುದಿಲ್ಲ.

(ಮಲ್‌ಫೂಝಾತ್ ಸಂಪುಟ 9)

**ಹಝ್ರತ್ ಮಿರ್ಝಾ ಗುಲಾಂ ಅಹ್ಮದ್**

ಅಹ್ಮದಿಯಾ ಮುಸ್ಲಿಂ ಜಮಾಅತಿನ ಸ್ಥಾಪಕರು

# ಮುಹಮ್ಮದ್ ಪೈಗಂಬರರ(ಸ) ನುಡಿಮುತ್ತುಗಳು

- ಏಕದೇವ ಸಿದ್ಧಾಂತದಲ್ಲಿ ಅಧಿಷ್ಠಿತವಾದ ಸರಳವಾದ ಜೀವನ ರೀತಿಯು ಅಲ್ಲಾಹನಿಗೆ ಅತ್ಯಂತ ಮೆಚ್ಚಿಕೆಯಾದ ಧರ್ಮ.

- ಸದಾ ಅನುಷ್ಠಿಸುವ ಕರ್ಮಗಳು ಅಲ್ಲಾಹನಿಗೆ ಅತ್ಯಂತ ಇಷ್ಟಕರ.

- ನಿಮ್ಮ ಪೈಕಿ ಅತ್ಯಂತ ಒಳ್ಳೆಯ ಸ್ವಭಾವದವನು ನನಗೆ ಅತ್ಯಂತ ಮೆಚ್ಚಿಕೆಯವನು.

- ಒಂದು ಸಾಸಿವೆಯಷ್ಟು ಸತ್ಯ ವಿಶ್ವಾಸ ಹೃದಯದಲ್ಲಿರುವವನು (ಶಾಶ್ವತವಾಗಿ) ನರಕದಲ್ಲಿ ಪ್ರವೇಶಿಸಲಾರ. ಒಂದು ಸಾಸಿವೆಯಷ್ಟು ಅಹಂಭಾವ ಹೃದಯದಲ್ಲಿರುವವನು ಸ್ವರ್ಗದಲ್ಲೂ ಪ್ರವೇಶಿಸಲಾರ.

- ಹೆಚ್ಚು ಸಂಪತ್ತುಗಳಿಸುವುದು ಐಶ್ವರ್ಯವಲ್ಲ. ಬದಲು, ಮನಃಸಂತೃಪ್ತಿಯೇ ಐಶ್ವರ್ಯವಾಗಿದೆ.

- ಯಾರಾದರೂ ಅಲ್ಲಾಹನಲ್ಲೂ ಅಂತ್ಯದಿನದಲ್ಲೂ ವಿಶ್ವಾಸವಿಡುವುದಾದರೆ ಆತನು ತನ್ನ ಅತಿಥಿಯನ್ನು ಸತ್ಕರಿಸಲಿ. ಯಾರಾದರೂ ಅಲ್ಲಾಹನಲ್ಲೂ ಅಂತ್ಯದಿನದಲ್ಲೂ ವಿಶ್ವಾಸವಿಡುವುದಾದರೆ ತನ್ನ ನೆರೆಕರೆಯವನಿಗೆ ಉಪದ್ರ ಕೊಡದಿರಲಿ. ಯಾರಾದರೂ ಅಲ್ಲಾಹನಲ್ಲೂ ಅಂತ್ಯ ದಿನದಲ್ಲೂ ವಿಶ್ವಾಸವಿಡುವುದಾದರೆ ಅವನು ಒಳ್ಳೆಯ ಮಾತನ್ನು ಆಡಲಿ ಅಥವಾ ಮೌನ ಅವಲಂಬಿಸಲಿ.

- ಮನುಷ್ಯರೊಡನೆ ದಯೆ ತೋರಿಸದವರ ಮೇಲೆ ಅಲ್ಲಾಹನು ದಯೆ ತೋರಿಸಲಾರ.

- ಯಾರ ಉಪದ್ರಗಳ ಕುರಿತು ತನ್ನ ನೆರೆಕರೆಯವನು ನಿರ್ಭೀತನಾಗುವುದಿಲ್ಲವೋ ಅವನು ಸ್ವರ್ಗದಲ್ಲಿ ಪ್ರವೇಶಿಸಲಾರ.

- ನಾನು ಸ್ವರ್ಗವನ್ನು ಇಣುಕಿ ನೋಡಿದಾಗ ಅಲ್ಲಿ ಅಧಿಕವಾಗಿ ದರಿದ್ರರನ್ನು ಕಂಡೆನು. ನಾನು ನರಕವನ್ನು ಇಣುಕಿ ನೋಡಿದಾಗ ಅಲ್ಲಿ ಅಧಿಕವಾಗಿ ಸ್ತ್ರೀಯರನ್ನು ಕಂಡೆನು.

# ಇಸ್ಲಾಮ್ ಧರ್ಮದ ಬಗ್ಗೆ ಪೋಪರ ತಪ್ಪು ಕಲ್ಪನೆ

**ಜರ್ಮನಿನಲ್ಲಿ ಪೋಪ್‌ರವರು ಒಂದು ವಿಶ್ವವಿದ್ಯಾಲಯದಲ್ಲಿ ಮಾಡಿದ ಭಾಷಣದಲ್ಲಿ ಇಸ್ಲಾಮಿನ ವಿರುದ್ಧ ಮಾಡಿದ ಆಕ್ಷೇಪಾರ್ಹ ಹೇಳಿಕೆಗಳ ಬಗ್ಗೆ ಪ್ರತಿಕ್ರಿಯೆ.**

**ಅಹ್ಮದಿಯಾ ಜಮಾಅತಿನ ಪಂಚಮ ಖಲೀಫರಾದ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಸಾಹೇಬ್ 15-09-2006ರಂದು ಲಂಡನ್ ಬೈತುಲ್ ಫುತೂಹ್ ಮಸ್‌ಜಿದ್‌ನಲ್ಲಿ ನೀಡಿದ ಶುಕ್ರವಾರದ ಖುತ್‌ಬ ಪ್ರವಚನ.**

ಪೋಪ್‌ರವರು ಜರ್ಮನಿಯ ಒಂದು ವಿಶ್ವವಿದ್ಯಾಲಯದಲ್ಲಿ ಭಾಷಣ ಮಾಡುವಾಗ ಇಸ್ಲಾಮ್ ಧರ್ಮದ ಉಪದೇಶಗಳ ಬಗ್ಗೆ ಪ್ರಸ್ತಾಪಿಸಿದರೆಂದು ನಿನ್ನೆ ಒಂದು ಸಮಾಚಾರ ದೊರೆಯಿತು. ಪವಿತ್ರ ಖುರ್‌ಆನ್ ಮತ್ತು ಹಝ್ರತ್ ಮುಹಮ್ಮದ್ ಪೈಗಂಬರ್ (ಸಲ್ಲಲ್ಲಾಹು ಅಲೈಹಿ ವ ಸಲ್ಲಮ್) ರವರ ಕುರಿತು ಬೇರೆ ಯಾರೋ ಬರೆದುದನ್ನು ಉಲ್ಲೇಖಿಸಿ ಇಸ್ಲಾಮ್ ಧರ್ಮದೊಂದಿಗೆ ದೂರದ ಸಂಬಂಧ ಕೂಡ ಇರದಂತಹ ಮಾತುಗಳನ್ನು ಅವರು ಹೇಳಿದರು. ಇದು ಇಸ್ಲಾಮ್ ಧರ್ಮವನ್ನು ಆಕ್ಷೇಪಿಸಲು ಅವರು ಕೈಗೊಳ್ಳುವ ಒಂದು ಉಪಾಯವಾಗಿದೆ. ಅವರು ಬಹಳ ಚಾತುರ್ಯದಿಂದ ಬೇರೆಯವರ ಮಾತುಗಳನ್ನು ಉಲ್ಲೇಖಿಸಿ ತಮ್ಮನ್ನು ರಕ್ಷಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ಆದರೆ ಅದೇ ಸಮಯದಲ್ಲಿ ಆ ಮೂಲಕ ಅಭಿಪ್ರಾಯವನ್ನು ಸೂಚಿಸುತ್ತಾರೆ. ಪೋಪ್‌ರವರು ಪವಿತ್ರ ಖುರ್‌ಆನ್, ಇಸ್ಲಾಮ್ ಮತ್ತು ಹಝ್ರತ್ ಪೈಗಂಬರರ(ಸ) ಕುರಿತು ಹೇಳಿಕೆಗಳನ್ನು ನೀಡಿ ಎಂತಹ ತಪ್ಪು ಗ್ರಹಿಕೆ ಉಂಟಾಗುವಂತೆ ಪ್ರಯತ್ನಿಸಿರುವರೆಂದರೆ, ಅದರ ಪರಿಣಾಮವಾಗಿ ಮುಸ್ಲಿಮರಲ್ಲಿ ಅಶಾಂತಿ ಹರಡಿದೆ. ಆ ಹೇಳಿಕೆಗಳು ಇಸ್ಲಾಮಿನ ವಿರುದ್ಧ ಪೋಪ್‌ರವರ ಹೃದಯದಲ್ಲಿರುವ ಭಾವನೆಗಳನ್ನು ಬಹಿರಂಗಗೊಳಿಸುತ್ತವೆ. ಪೋಪ್‌ರವರು ಎಂತಹ ಉನ್ನತ ಸ್ಥಾನಮಾನಗಳನ್ನು ಹೊಂದಿರುವರೆಂದರೆ, ಅವರು ಬೇರೆಯವರ ಮಾತುಗಳನ್ನು ಉಲ್ಲೇಖಿಸಿ ಕೂಡ ಇಂತಹ ಹೇಳಿಕೆಗಳನ್ನು ಪ್ರಕಟಿಸಬಾರದಾಗಿತ್ತು.

ಈಗ ಲೋಕದಲ್ಲಿ ಮತ್ತು ವಿಶಿಷ್ಟವಾಗಿ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಯಾವುದಾದರೊಂದು ರೂಪದಲ್ಲಿ ಮುಸ್ಲಿಮರ ವಿರುದ್ಧ ದ್ವೇಷದ ಭಾವನೆಗಳನ್ನು ಪ್ರಚೋದಿಸಲಾಗುತ್ತಿರುವಾಗ ಪೋಪ್‌ರವರು ಹೀಗೆ ಮಾತನಾಡುವುದು ಉರಿಯುತ್ತಿರುವ ಬೆಂಕಿಗೆ ಎಣ್ಣೆ ಹೊಯ್ಯುವಂತಹ ಕೆಲಸವಾಗಿದೆ. ಅದಕ್ಕೆ ಬದಲಾಗಿ, ಕೆಡುಕನ್ನು ಪ್ರೀತಿಸುವ ಕೆಲವು ಇಸ್ಲಾಮೀ ಸಂಘಟನೆಗಳು ದೌರ್ಜನ್ಯ ಮಾಡುವವರಾಗಿದ್ದರೂ ಇಸ್ಲಾಮಿನ ಉಪದೇಶಗಳು ಅದಕ್ಕೆ ವಿರುದ್ಧವಾಗಿರುವುದಾಗಿ ತೋರುತ್ತವೆಂದೂ ಲೋಕದಲ್ಲಿ ಶಾಂತಿಯನ್ನು ಸ್ಥಾಪಿಸಲು ನಾವು ಪರಸ್ಪರ ಸಹಕರಿಸಿ ಕಾರ್ಯ ಪ್ರವೃತ್ತರಾಗಬೇಕೆಂದೂ ಹಾಗೆ, ನಿಷ್ಕಳಂಕರಾದ ಮಾನವರನ್ನು ನಾಶದಿಂದ ರಕ್ಷಿಸಲು ಪ್ರಯತ್ನಿಸಬೇಕೆಂದೂ ಅವರು ಹೇಳಬೇಕಾಗಿತ್ತು. ತದ್ವಿರುದ್ಧವಾಗಿ, ಇಸ್ಲಾಮಿನ ಬಗ್ಗೆ ತಾನು ಹೇಳುವುದೇ ಸರಿಯೆಂದು ಅವರು ತಮ್ಮ ಅನುಯಾಯಿಗಳಿಗೆ ಉಪದೇಶಿಸಲು ಪ್ರಯತ್ನಿಸಿದರು.

ಪೋಪ್‌ರವರು ಸಮಸ್ಯೆ ಪರಿಹರಿಸುವ ವ್ಯಕ್ತಿ ಎಂದೂ ಅವರು ವಿದ್ವಾಂಸರಾಗಿದ್ದು ಇಸ್ಲಾಮ್ ಬಗ್ಗೆ ಸ್ವಲ್ಪಮಟ್ಟಿಗಾದರೂ ತಿಳಿದವರಾಗಿದ್ದಾರೆ ಎಂದೂ ನಾನು ಭಾವಿಸಿದ್ದೆನು. ಆದರೆ ಪೋಪ್‌ರವರು ತಮ್ಮ ಮಾತುಗಳ ಮೂಲಕ ತಮ್ಮ ಅಜ್ಞಾನವನ್ನು ಪ್ರಕಟಿಸಿದ್ದಾರೆ. ಅವರು ಯಾವ ಮಸೀಹರ (ಯೇಸು ಕ್ರಿಸ್ತರ) ಪ್ರತಿನಿಧಿ ಎಂದು ವಾದಿಸುತ್ತಿರುವರೋ ಆ ಮಹಾನುಭಾವರ ಉಪದೇಶವನ್ನು ಕೃತಿರೂಪಕ್ಕೆ ಇಳಿಸಿ ಲೋಕದಲ್ಲಿ ಶಾಂತಿಯನ್ನು ಸ್ಥಾಪಿಸಲು ಪ್ರಯತ್ನಿಸಬೇಕಾಗಿತ್ತು. ಆ ಮಹಾನುಭಾವರು ಶತ್ರುವಿನೊಂದಿಗೆ ಸಹ ಒಳ್ಳೆಯ ರೀತಿಯಲ್ಲಿ ವರ್ತಿಸಲು ಉಪದೇಶಿಸಿದ್ದರು.

ಪೋಪ್‌ರವರು ತಪ್ಪು ಮಾತುಗಳನ್ನು ಹೇಳಿ ಮುಸ್ಲಿಮರ ಭಾವನೆಗಳನ್ನು ಕೆಣಕಿರುವರು. ಅದರ ಫಲವಾಗಿ ಭಾವನೆಗಳನ್ನು ನಿಯಂತ್ರಿಸಲು ಸಾಧ್ಯವಿಲ್ಲದವರು ಎಂತಹ ಪ್ರತಿಕ್ರಿಯೆಗಳನ್ನು ಬಹಿರಂಗಪಡಿಸುವರೆಂದರೆ ಮುಸ್ಲಿಮರ ವಿರುದ್ಧ ಹೆಚ್ಚಿನ ಅಪಪ್ರಚಾರ ಮಾಡಲು ಇವರಿಗೆ ಸಂದರ್ಭ ಸಿಗುವುದು. ಪೋಪ್‌ರವರ ಹೇಳಿಕೆಗಳ ಕಾರಣದಿಂದ ಅವರ ಅನುಯಾಯಿಗಳ ಮತ್ತು ಇಸ್ಲಾಮನ್ನು ಉಗ್ರವಾದಿ ಧರ್ಮವೆಂದು ಗಣಿಸುವ ಪಾಶ್ಚಿಮಾತ್ಯ ದೇಶಗಳ ಜನರ ಹೃದಯಗಳಲ್ಲಿ ಮುಸ್ಲಿಮರ ವಿರುದ್ಧ ಹೆಚ್ಚಿನ ದ್ವೇಷವು ಹಬ್ಬುವುದು. ಅಲ್ಲಾಹನು ದಯೆದೋರಲಿ. ಲೋಕವನ್ನು ಅಶಾಂತಿಯಿಂದಲೂ ಗಲಭೆಗೊಂದಲಗಳಿಂದಲೂ ಸಂರಕ್ಷಿಸಲಿ. ಅಹ್ಮದಿಯರು ಯಾವಾಗಲೂ ಹೀಗೆಯೇ ಪ್ರಾರ್ಥಿಸುತ್ತಾ ಇರಬೇಕು ಮತ್ತು ಪೋಪ್ ಪ್ರಕಟಿಸಿದ ಆಕ್ಷೇಪಗಳಿಗೆ ಎಲ್ಲಾ ದೇಶಗಳಲ್ಲಿ ಉತ್ತರಕೊಡಬೇಕು.

ನಮ್ಮ ಕೈಯಲ್ಲಿರುವ ಆಯುಧಗಳು ಇವೆರಡು ಮಾತ್ರವಾಗಿವೆ. ಇವುಗಳನ್ನು ಮಾತ್ರ ಉಪಯೋಗಿಸಬೇಕು. ಇವೆರಡರ ಹೊರತು ಬೇರೆ ಯಾವುದೇ ರೀತಿಯ ಪ್ರತಿಕ್ರಿಯೆ ಅಹ್ಮದಿಯರು ಹಿಂದೆ ಪ್ರಕಟಿಸಿಲ್ಲ; ಮುಂದೆಯೂ (ದೇವರಿಚ್ಛಿಸಿದರೆ) ಪ್ರಕಟಿಸಲಾರರು.

ಪೋಪ್‌ರವರು ಪವಿತ್ರ ಖುರ್‌ಆನ್ ಮತ್ತು ಹಝ್ರತ್ ಮುಹಮ್ಮದ್ ಪೈಗಂಬರ್ (ಸಲ್ಲಲ್ಲಾಹು ಅಲೈಹಿ ವ ಸಲ್ಲಮ್)ರವರ ಕುರಿತು ಮಾಡಿದ ಆಕ್ಷೇಪಗಳ ವಿವರಣೆಯನ್ನು ನಾನು ಜರ್ಮನಿಯಿಂದ ತರಿಸಿದ್ದೇನೆ. ಅವುಗಳ ಸಂಕ್ಷಿಪ್ತ ರೂಪ ಹೀಗಿದೆ: ಅವರು ಹೇಳುತ್ತಾರೆ: ನಾನು ಒಂದು ಲೇಖನ ಓದಿದೆ. ಅದು ಯುನಿವರ್ಸಿಟಿಯ ಒಬ್ಬ ಪ್ರೊಫೆಸರ್ ಪ್ರಕಟಿಸಿದುದಾಗಿದೆ. ಅಂಕಾರದಲ್ಲಿ ಮ್ಯಾನುವೇಲ್‌ನೆಂಬ ಖೈಸರ್ (ಬೈಝಾಂಟೈನ್) ರಾಜ ಮತ್ತು ಪರ್ಶಿಯಾದ ಒಬ್ಬ ಮುಸ್ಲಿಮ್ ವಿದ್ವಾಂಸರ ಮಧ್ಯೆ 1391ರಲ್ಲಿ ನಡೆದ ಒಂದು ವಾದವಿವಾದದ ವಿವರ ಒಬ್ಬ ಕ್ರೈಸ್ತ ವಿದ್ವಾಂಸ ಪ್ರಕಟಿಸಿದ್ದನು. ಕ್ರೈಸ್ತ ವಿದ್ವಾಂಸ ಪ್ರಕಟಿಸಿದುದರಿಂದ ಅದರಲ್ಲಿ ತನ್ನ ಮಾತನ್ನು ಹೆಚ್ಚಾಗಿ ಬರೆದಿರುವನೆಂದು ಸಹ ಅಂಗೀಕರಿಸಲಾಗಿದೆ. ಇದರಿಂದಲೇ ಆ ಕ್ರೈಸ್ತ ವಿದ್ವಾಂಸನ ಪ್ರಾಮಾಣಿಕತೆಯ ಮಟ್ಟವೇನೆಂದು ತಿಳಿಯುತ್ತದೆ. ಮುಸ್ಲಿಮ್ ಹೇಳಿದ ಮಾತುಗಳನ್ನು ಆ ಲೇಖನದಲ್ಲಿ ಕಡಿಮೆಯೇ ಪ್ರಸ್ತಾಪಿಸಲಾಗಿದೆ.

ಪೋಪ್ ತನ್ನ ಭಾಷಣದಲ್ಲಿ ಹೀಗೆ ಹೇಳುತ್ತಾರೆ:- ಖೈಸರ್‌ರಾಜ ಮ್ಯಾನುವೇಲ್ ಜಿಹಾದ್ ಕುರಿತು ಪ್ರಸ್ತಾಪಿಸಿದ್ದಾನೆ. ಖೈಸರ್ ರಾಜನಿಗೆ ಪವಿತ್ರ ಖುರ್‌ಆನ್ ವಚನ 256ರ ಕುರಿತು ತಿಳಿದಿತ್ತು- ಧರ್ಮದ ವಿಚಾರದಲ್ಲಿ ಇಸ್ಲಾಮ್ ಬಲಾತ್ಕಾರವನ್ನು ಅಂಗೀಕರಿಸುವುದಿಲ್ಲವೆಂದು. ಆದರೆ ಪವಿತ್ರ ಯುದ್ಧ ಅಥವಾ ಜಿಹಾದ್ ಬಗ್ಗೆ ಅನಂತರದ ಇಸ್ಲಾಮಿನ ಉಪದೇಶ ಏನೆಂದೂ ರಾಜನಿಗೆ ತಿಳಿದಿತ್ತು. ಗ್ರಂಥದ ಅನುಯಾಯಿಗಳೊಂದಿಗೆ ಮತ್ತು ಇತರ ಅವಿಶ್ವಾಸಿಗಳೊಂದಿಗೆ ಹೇಗೆ ವರ್ತಿಸಬೇಕೆಂಬ ಕುರಿತು ಪವಿತ್ರ ಖುರ್‌ಆನ್ ನೀಡಿದ ಉಪದೇಶವೂ ರಾಜನಿಗೆ ತಿಳಿದಿತ್ತು. ರಾಜನು ಆತಂಕ ಭರಿತ ಕಟು ಶಬ್ದಗಳೊಂದಿಗೆ ತನ್ನ ಎದುರು ವಾದಿಸುವವರೊಂದಿಗೆ ಒಂದು ಮೂಲಭೂತ ಪ್ರಶ್ನೆ ಕೇಳುತ್ತಾನೆ. ಧರ್ಮ ಮತ್ತು ಬಲಾತ್ಕಾರಗಳಿಗೆ ಪರಸ್ಪರ ಇರುವ ಸಂಬಂಧವಾದರೂ ಏನು? ನನಗೆ ತೋರಿಸಿಕೊಡಿರಿ- ಮುಹಮ್ಮದ್‌ರವರು ಹೊಸದಾಗಿ ತಂದುದಾದರೂ ಏನು? ನಿಮಗೆ ಕೆಟ್ಟ ಮತ್ತು ಅಮಾನವೀಯ ಉಪದೇಶಗಳು ಮಾತ್ರ ದೊರೆತಿವೆ. ಮುಹಮ್ಮದ್ ಅನಂತರ ಕಲಿಸಿದುದು ತನ್ನ ಧರ್ಮವನ್ನು ಖಡ್ಗ ಬಲದಿಂದ ಹರಡಬೇಕೆಂದಾಗಿದೆ. (ಇನ್ನಾಲಿಲ್ಲಾಹಿ....) ಪೋಪ್ ಹೇಳುತ್ತಾರೆ: ಅನಂತರ ರಾಜನು ಸವಿಸ್ತಾರವಾಗಿ ಹೀಗೆ ಪ್ರಸ್ತಾಪಿಸುತ್ತಾನೆ: ಧರ್ಮವನ್ನು ಖಡ್ಗ ಬಲದಿಂದ ಪ್ರಚಾರ ಮಾಡುವುದು ವಿವೇಕಕ್ಕೆ ವಿರುದ್ಧವಾದ ಸಂಗತಿಯಾಗಿದೆ. ಇದು ದೇವನ ಅಸ್ತಿತ್ವ ಮತ್ತು ಆತ್ಮದ ಸ್ಥಿತಿಗೆ ಅನುಯೋಜ್ಯವಾಗಿರುವುದಿಲ್ಲ. ದೇವನು ರಕ್ತಪಾತವನ್ನು ಇಷ್ಟಪಡುವುದಿಲ್ಲ. ಬುದ್ಧಿ ಮತ್ತು ಕೃತಿ ಪರಸ್ಪರ ಅನುಯೋಜ್ಯವಾಗಿರಬೇಕಾಗಿದೆ. ವಿಶ್ವಾಸವೆಂಬುದು ಆತ್ಮದ ಫಲವೇ ಹೊರತು ಶರೀರದ ಫಲವಲ್ಲ.

ಪೋಪ್ ಹೇಳುತ್ತಾರೆ: ಖೈಸರ್ ರಾಜನ ತರಬೇತಿ ಗ್ರೀಕ್ ದರ್ಶನ ಶಾಸ್ತ್ರ ಪ್ರಕಾರವಾಗಿತ್ತು. ಅವನು ಹೇಳಿದುದು ಸ್ಪಷ್ಟವಾದ ಒಂದು ಸತ್ಯವಾಗಿದೆ. ಇಸ್ಲಾಮ್ ಪ್ರಕಾರ ದೇವನೆಂದರೆ ಬೇರೆಯೇ ಒಂದು ಅಸ್ತಿತ್ವವಾಗಿದೆ. ಯಾವುದೇ ಲೌಕಿಕ ಮೌಲ್ಯಗಳಿಗೆ ಅವನು ಬದ್ಧನಲ್ಲ; ವೈಚಾರಿಕತೆಗೂ ಅವನು ಬದ್ಧನಲ್ಲ.

ಅನಂತರ ಪೋಪ್ ಇಸ್ಲಾಮಿನ ಕುರಿತು ಪರಿಣಿತನಾದ ಒಬ್ಬ ಫ್ರೆಂಚ್ ವಿದ್ವಾಂಸನ ಗ್ರಂಥದಿಂದ ಇಬ್ನು ಹಝುಮ್ ಹೇಳಿದ ಒಂದು ಮಾತನ್ನು ಹೀಗೆ ಉಲ್ಲೇಖಿಸುತ್ತಾರೆ: ನಮಗೆ ಸತ್ಯವನ್ನು ಪ್ರಕಟಿಸುವಂತೆ ದೇವನನ್ನು ನಿರ್ಬಂಧಿಸಲು ಯಾರಿಗೂ ಸಾಧ್ಯವಿಲ್ಲ. ಅವನು ಇಚ್ಛಿಸುವುದಾದರೆ ಮನುಷ್ಯನು ಮೂರ್ತಿ ಆರಾಧನೆಯನ್ನೂ ಮಾಡಬೇಕಾದೀತು. (ಹೀಗೆ ಇಬ್ನು ಹಝ್ಮ್ ಹೇಳಿರುವರೋ ಎಂಬುದು ನಮಗೆ ತಿಳಿಯದು. ಅದರ ಬಗ್ಗೆ ಆಕರ ಗ್ರಂಥವನ್ನು ಸೂಚಿಸಿಲ್ಲ)

ಪೋಪ್ ಹೇಳಿದರು: ದೇವನು ವಿವೇಕಕ್ಕೆ ವಿರುದ್ಧವಾಗಿ ಕೆಲಸ ಮಾಡಲಾರನು ಎಂಬುದು ಗ್ರೀಕ್ ವಿಶ್ವಾಸವೋ ಅಥವಾ ಶಾಶ್ವತವಾದ ಒಂದು ಸತ್ಯವೋ? ನನ್ನ ಅಭಿಪ್ರಾಯದಲ್ಲಿ ಗ್ರೀಕ್ ವಿಚಾರಧಾರೆ ಮತ್ತು ಬೈಬಲ್‌ನಲ್ಲಿರುವ ದೇವನಿಗೆ ಸಂಬಂಧಿಸಿದ ವಿಚಾರಗಳು ಪರಸ್ಪರ ಆಳವಾಗಿ ಹೊಂದಾಣಿಕೆ ಹೊಂದಿರುವುದು ಕಂಡು ಬರುತ್ತದೆ.

ಫಾರಸೀ ಮುಸ್ಲಿಮ್ ವಿದ್ವಾಂಸರಿಗೆ ಖೈಸರ್ ರಾಜ ನೀಡಿದ ಉತ್ತರಗಳು ಫಾರಸೀ ವಿದ್ವಾಂಸರು ನೀಡಿದ ಉತ್ತರಗಳಿಗಿಂತ ಹೆಚ್ಚು ವಿಸ್ತಾರವಾಗಿದೆ ಎಂಬ ಸಂಗತಿ ಪೋಪ್ ಮೊದಲೇ ಅಂಗೀಕರಿಸಿದ್ದಾರೆ. ಹೀಗಿರುವಾಗ ಈ ವಾದವಿವಾದದ ವಿವರಣೆಯನ್ನು ಬರೆದ ಕ್ರೈಸ್ತನು ತನ್ನ ಹಿರಿಮೆಯನ್ನು ಸೂಚಿಸಲು ತನ್ನ ಸಾಕ್ಷ್ಯಾಧಾರಗಳನ್ನು ಬಲಪಡಿಸಲು ಪ್ರಯತ್ನಿಸಿದುದು ಸ್ವಾಭಾವಿಕವಾಗಿದೆ. ಅದಕ್ಕೆ ವಿರುದ್ಧವಾಗಿ ಹೇಳಿದ ಉತ್ತರಗಳನ್ನು ಪೂರ್ಣವಾಗಿ ಉಲ್ಲೇಖಿಸದುದರಿಂದ ಈ ಬಗ್ಗೆ ನ್ಯಾಯಯುತವಾಗಿ ಪ್ರಸ್ತಾಪಿಸಲಾಗಿಲ್ಲವೆಂಬುದು ಸ್ಪಷ್ಟವಾಗಿದೆ.

ಮುಸ್ಲಿಮರಾದ ನಾವು, ಎಂದರೆ ಅಹ್ಮದಿಯರಾದ ನಾವು ಈ ಬಗ್ಗೆ ಯಾವ ಅಭಿಪ್ರಾಯ ಹೊಂದಿದ್ದೇವೆ ಎಂಬುದರ ಕುರಿತು ನಾನು ಪವಿತ್ರ ಖುರ್‌ಆನ್ ಮತ್ತು ಹಝ್ರತ್ ಮುಹಮ್ಮದ್ ಪೈಗಂಬರ್ (ಸಲ್ಲಲ್ಲಾಹು ಅಲೈಹಿ ವ ಸಲ್ಲಮ್)ರವರ ಜೀವನ ಚರಿತ್ರೆಯ ಆಧಾರದಿಂದ ಸಂಕ್ಷಿಪ್ತವಾಗಿ ವಿವರಿಸಲು ಬಯಸುತ್ತೇನೆ. ಪೋಪ್ ಎತ್ತಿದ ಪ್ರಶ್ನೆಗಳಿಗೆ ಸುದೀರ್ಘವಾದ ಉತ್ತರಗಳನ್ನು ಸಿದ್ಧಪಡಿಸಲಾಗುವುದು ಮತ್ತು ಅವರಿಗೆ ನೇರವಾಗಿ ತಲಪಿಸಲು ಪ್ರಯತ್ನಿಸಲಾಗುವುದು. ಹಾಗೆ, ಇಸ್ಲಾಮ್ ಧರ್ಮದ ಸರಿಯಾದ ಉಪದೇಶಗಳೇನೆಂದು ಅವರಿಗೆ ಇಷ್ಟರವರೆಗೆ ತಿಳಿದಿರಲಿಲ್ಲವಾದುದರಿಂದ ಅವರಿಗೆ ಅದರ ಮೂಲಕ ತಿಳಿಸಲಾಗುವುದು. ಅವರು ತಮ್ಮ ಸ್ಥಾನವನ್ನು ಮನವರಿಕೆ ಮಾಡಿಕೊಂಡು ನಮ್ಮ ಲೇಖನಗಳನ್ನು ಓದುವರೆಂದೂ ನ್ಯಾಯಯುತವಾಗಿ ಚಿಂತಿಸುವರೆಂದೂ ನಾವು ಆಶಿಸುತ್ತೇವೆ.

ನಮ್ಮ ಹೃದಯಗಳಲ್ಲಿ ಹಝ್ರತ್ ಈಸಾ ಅಲೈಹಿಸ್ಸಲಾಮ್ (ಯೇಸು ಕ್ರಿಸ್ತರ) ಬಗ್ಗೆ ಬಹಳ ಆದರವಿದೆ. ನಾವು ಅವರನ್ನು ಅಲ್ಲಾಹನ ಪ್ರವಾದಿ ಎಂದು ನಂಬುತ್ತೇವೆ. ಲೋಕದ ಪ್ರತಿಯೊಂದು ಜನಾಂಗದಲ್ಲಿ ಆಗಮಿಸಿದ ಎಲ್ಲಾ ಪ್ರವಾದಿಗಳನ್ನು ನಾವು ನಂಬುತ್ತೇವೆ ಮತ್ತು ಅವರಿಗೆ ಗೌರವವನ್ನು ಸೂಚಿಸುತ್ತೇವೆ. ಮುಸ್ಲಿಮರ ಭಾವನೆಗಳನ್ನು ಗೌರವಿಸಿ ಕ್ರೈಸ್ತರು ಸಹ ಹಝ್ರತ್ ಮುಹಮ್ಮದ್ ಪೈಗಂಬರ್ (ಸಲ್ಲಲ್ಲಾಹು ಅಲೈಹಿ ವ ಸಲ್ಲಮ್)ರವರನ್ನು ಗೌರವ ಭಾವದಿಂದ ಕಾಣಬೇಕಾಗಿದೆ. ಪೋಪ್ ಹೇಳುತ್ತಾರೆ: ಖೈಸರ್ ರಾಜನಿಗೆ ಪವಿತ್ರ ಖುರ್‌ಆನಿನ ಅಲ್‌ಬಖರ ಅಧ್ಯಾಯದ 256ನೇ ವಚನದ ಕುರಿತು ತಿಳಿದಿತ್ತು. ಅವರು ಹೇಳುತ್ತಾರೆ: ಇದು ಪವಿತ್ರಖುರ್‌ಆನಿನ ಆರಂಭದ ಕಾಲದ ಅಧ್ಯಾಯದಲ್ಲಿರುವ ವಚನವಾಗಿದೆ. (ಆದರೆ ಈ ವಚನ ಮದೀನದಲ್ಲಿ ಮೊದಲಿನ ಒಂದೆರಡು ವರ್ಷಗಳಲ್ಲಿ ಅವತೀರ್ಣವಾದುದಾಗಿದೆ.) ಖೈಸರ್ ರಾಜನಿಗೆ ಅನಂತರದ ಅಧ್ಯಾಯಗಳ ಬಗ್ಗೆ ಸಹ ತಿಳಿದಿತ್ತು. ಜಿಹಾದ್ ಕುರಿತು ಅನಂತರ ನೀಡಲಾದ ಉಪದೇಶಗಳ ಬಗ್ಗೆ ತಿಳಿದಿತ್ತು. (ಆತನಿಗೆ ತಿಳಿದಿತ್ತೋ ಇಲ್ಲವೋ ನಮಗೆ ತಿಳಿಯದು. ಆದರೆ ಆತನು ದ್ವೇಷ ಭರಿತನಾಗಿದ್ದನು ಎಂಬುದು ನಿಸ್ಸಂಶಯವಾಗಿದೆ.) ಪೋಪ್ ಹೇಳುತ್ತಾರೆ: ಪವಿತ್ರ ಖುರ್‌ಆನ್‌ನಲ್ಲಿ ಗ್ರಂಥಗಳ ಅನುಯಾಯಿಗಳೊಂದಿಗೆ ಮತ್ತು ಇತರ ಅವಿಶ್ವಾಸಿಗಳೊಂದಿಗೆ ಬೇರೆ ಬೇರೆ ರೀತಿ ವರ್ತಿಸಲು ಹೇಳಲಾಗಿದೆ. ಆದರೆ ಧರ್ಮದಲ್ಲಿ ಬಲಾತ್ಕಾರದ ಆಶಯವೇ ಇರುವುದಿಲ್ಲ. ಮುಹಮ್ಮದ್‌ರವರ ಉಪದೇಶದಲ್ಲಿ ಕೆಟ್ಟ ಮತ್ತು ಅಮಾನವೀಯ ಉಪದೇಶಗಳು ಮಾತ್ರ ದೊರಕುವುವು. ಅವುಗಳ ಹೊರತು ಬೇರೇನೂ ಸಿಗಲಾರದು. ಅವರು ಹೇಳುತ್ತಾರೆ: ಪ್ರವಾದಿ ಹೇಳಿದ ಪ್ರಕಾರ ಇಸ್ಲಾಮನ್ನು ಖಡ್ಗ ಬಲದಿಂದ ಪ್ರಚಾರಗೊಳಿಸಲಾಗಿದೆ.

ಇಸ್ಲಾಮ್ ಧರ್ಮದೊಂದಿಗೆ ದೂರದ ಸಂಬಂಧ ಸಹ ಇರದಂತಹ ಒಂದು ಮಾತನ್ನು ಇಸ್ಲಾಮಿಗೆ ಸಂಬಂಧಿಸಿದುದೆಂದು ಸ್ವತಃ ತಪ್ಪಾಗಿ ಹೇಳಿದ ನಂತರ ಅವರು ಹೇಳುತ್ತಾರೆ: ಇದು ಬುದ್ಧಿಗೆ ವಿರುದ್ಧವಾದ ಸಂಗತಿಯಾಗಿದೆ. ಇದು ದೇವನ ನ್ಯಾಯಯುತವಾದ ನಡೆವಳಿಕೆಗೆ ವಿರುದ್ಧವಾಗಿದೆ. ಒಬ್ಬ ಬುದ್ಧಿಶಾಲಿಯಾದ ಮನುಷ್ಯನಿಗೆ ಶಕ್ತಿ ಪ್ರಯೋಗ ಮತ್ತು ಬಲಾತ್ಕಾರದ ಆವಶ್ಯಕತೆಯಿಲ್ಲ. ಸರಿಯಾದ ಮಾತೇನೆಂದರೆ ಬುದ್ಧಿಶಾಲಿಯಾದ ಮನುಷ್ಯನಿಗೆ ಆಯುಧ ಮತ್ತು ಶಕ್ತಿ ಪ್ರಯೋಗದ ಆವಶ್ಯಕತೆ ಇರುವುದಿಲ್ಲ.

ಪೋಪ್ ಹೇಳಿದ ಈ ಮಾತು ಸತ್ಯವೇ ಆಗಿದೆ. ಆದರೆ ಅವರ ಮಹಾಶಕ್ತಿ ರಾಷ್ಟ್ರಗಳು ಸಾವಿರಾರು ಮೈಲು ದೂರದಲ್ಲಿರುವ ಜನಾಂಗಗಳ ಆಂತರಿಕ ವ್ಯವಹಾರದಲ್ಲಿ ಕೈ ಹಾಕಿ ಶಕ್ತಿ ಪ್ರಯೋಗ ಮಾಡುವುದಾದರೂ ಏಕೆ? ಇದರ ಉತ್ತರ ಅವರು ನೀಡಿಲ್ಲ. ಮೊದಲು ಪೋಪ್ ತನ್ನ ಜನರಿಗೆ ಮನವರಿಕೆ ಮಾಡಿಕೊಡಬೇಕು - ಅವರು ಮಾಡುವುದು ಯಾವುದು ಸರಿಯಾದುದು ಯಾವುದು ತಪ್ಪಾದುದು ಎಂದು.

ಕ್ರೈಸ್ತರ ಚರಿತ್ರೆಯನ್ನು ಪರಾಂಬರಿಸಿದರೆ ಅವರು ಪರಸ್ಪರ ಯುದ್ಧ ಮಾಡಿದುದು ಕಾಣಿಸುವುದಿಲ್ಲವೇ? ಆ ಯುದ್ಧಗಳನ್ನು ಯಾವ ಖಾತೆಯಲ್ಲಿ ಸೇರಿಸುತ್ತಾರೆ? ಅನಂತರ ಸ್ಪೈಯಿನ್ ದೇಶದಲ್ಲಿ ನಡೆದವುಗಳನ್ನು ಅವರು ಯಾವ ಖಾತೆಗೆ ಸೇರಿಸುತ್ತಾರೆ? ಸ್ಪೈಯಿನ್‌ನಲ್ಲಿ ನಡೆದ ಇನ್‌ಕ್ವಿಝಿಷನ್ ಕುರಿತು ಇಲ್ಲಿ ನಾನು ವಿವರಣೆ ನೀಡುವುದಿಲ್ಲ. ಅವುಗಳ ಬಗ್ಗೆ ಅವರಿಗೆಲ್ಲಾ ಗೊತ್ತಿದೆ. ಇಸ್ಲಾಮಿನ ಇತರ ಉಪದೇಶಗಳ ಬಗ್ಗೆ ಸಹ ಖೈಸರ್ ರಾಜನಿಗೆ ತಿಳಿದಿತ್ತೆಂದು ಪೋಪ್ ಹೇಳುತ್ತಾರೆ. ಆದರೆ ಧರ್ಮ ಪ್ರಚಾರದ ಬಗ್ಗೆ ಇಸ್ಲಾಮಿನ ಉಪದೇಶ ಏನು? ಹಝ್‌ರತ್ ಮುಹಮ್ಮದ್ ಪೈಗಂಬರರು (ಸಲ್ಲಲ್ಲಾಹು ಅಲೈಹಿ ವ ಸಲ್ಲಮ್) ಆ ಉಪದೇಶಗಳನ್ನು ಹೇಗೆ ಕೃತಿರೂಪಕ್ಕೆ ಇಳಿಸಿದರು? ಅವುಗಳ ಕುರಿತು ತಥಾಕಥಿತ ತಿಳುವಳಿಕೆ ಹೊಂದಿದವನಿಗೆ ತಿಳಿದಿರಲಿಲ್ಲ. ಅವುಗಳನ್ನು ನಾನು ವಿವರಿಸುತ್ತೇನೆ.

ಇಸ್ಲಾಮ್ ಧರ್ಮವು ಪ್ರಕೃತಿ ಸಹಜವಾದ ಧರ್ಮವಾಗಿದೆ. ಅದು, ನಿಮ್ಮ ಒಂದು ಕೆನ್ನೆಗೆ ಹೊಡೆದರೆ ನಿಮ್ಮ ಇನ್ನೊಂದು ಕೆನ್ನೆಯನ್ನು ತೋರಿಸಿರಿ ಎಂಬ ಉಪದೇಶವನ್ನು ಖಂಡಿತವಾಗಿಯೂ ನೀಡಿಲ್ಲ. ಈ ಉಪದೇಶವನ್ನು ಯಾರಿಗೆ ನೀಡಲಾಗಿದೆಯೋ ಅವರು ಈ ಉಪದೇಶವನ್ನು ಎಷ್ಟರ ಮಟ್ಟಿಗೆ ಅನುಸರಿಸುತ್ತಿದ್ದಾರೆ ಎಂದು ಹೇಳಲಿ. ಅವರ ಧರ್ಮದ ಉಪದೇಶಗಳ ಇಂತಹ ಅಸಂಬದ್ಧತೆಗಳೇ ಈ ಕಾಲದಲ್ಲಿ ಕ್ರೈಸ್ತ ಜನರನ್ನು ಕ್ರೈಸ್ತ ಧರ್ಮದಿಂದ ದೂರ ಸರಿಸಿದೆ. ಆದಿತ್ಯವಾರದ ನಂತರ ಒಂದುವಾರ ಕಳೆದು ಮುಂದಿನ ಆದಿತ್ಯವಾರ ಚರ್ಚ್‌ಗೆ ಹೋದರೆ ಸಾಕಾಗಿದ್ದರೂ ಆ ರೀತಿ ಸಹ ಈಗ ಮುದುಕರು ಮತ್ತು ಮುದುಕಿಯರ ಹೊರತು ಬೇರೆ ಯಾರೂ ಸದಾ ಚರ್ಚ್‌ಗೆ ಹೋಗುವುದಿಲ್ಲ. ಅವರು ಚರ್ಚ್‌ಗಳನ್ನು ಬೇರೆ ಕಾರ್ಯಕ್ರಮಗಳಿಗಾಗಿ ಬಾಡಿಗೆಗೆ ಕೊಡಲು ಪ್ರಾರಂಭಿಸಿದ್ದಾರೆ. ಪಾಶ್ಚಿಮಾತ್ಯ ದೇಶಗಳಲ್ಲಿ ಅಸಂಖ್ಯಾತ ಸ್ಥಳಗಳಲ್ಲಿ ಚರ್ಚ್‌ಗಳ ಮುಂದೆ FOR SALE (ಮಾರಾಟಕ್ಕಿದೆ) ಎಂಬ ಬೋರ್ಡ್ ಇರಿಸಲಾಗಿದೆ. ಅಮೇರಿಕದ ಒಬ್ಬ ಪ್ರೊಫೆಸರ್ ಎಡ್ವಿನ್ ಲೂವಿಸ್ ಹೀಗೆ ಬರೆದಿದ್ದಾರೆ: "ಇಪ್ಪತ್ತನೆಯ ಶತಮಾನದ ಜನರು ಯೇಸುವನ್ನು ದೇವನೆಂದು ನಂಬಲು ಸಿದ್ಧರಿಲ್ಲ."

ಆಕ್ಸ್‌ಫೋರ್ಡ್ ಸೈಂಟ್ ಜೋನ್ಸ್ ಕಾಲೇಜಿನ ಪ್ರಸಿಡೆಂಟ್ ಸರ್ ಸಾಯಿರಲ್ ಹೀಗೆ ಬರೆದಿದ್ದಾರೆ: "ಯುರೋಪ್ ಮತ್ತು ಅಮೇರಿಕದ ಪುರುಷರ ಮತ್ತು ಮಹಿಳೆಯರ ಒಂದು ದೊಡ್ಡ ವಿಭಾಗ ಈಗ ಕ್ರೈಸ್ತರಾಗಿ ಇರುವುದಿಲ್ಲ. ಅವರಲ್ಲಿ ಬಹುತೇಕ ಜನರು ಹಾಗೆ ಆಗಿರುವರೆಂದು ಹೇಳುವುದು ಸಹ ಪ್ರಾಯಶಃ ಸರಿಯಾಗಿರಬಹುದು." ಇದೇ ರೀತಿ ಆಫ್ರಿಕದ ಕ್ರೈಸ್ತರ ಬಗ್ಗೆ ಸಹ ಅವರು ವಿವಿಧ ಹೇಳಿಕೆ ನೀಡಿರುವರು. ಅವರೇ ಹೇಳುತ್ತಾರೆ: "ಕ್ರೈಸ್ತ ಧರ್ಮದ ಉಪದೇಶಗಳು ಕೊನೆಗೊಳ್ಳುತ್ತಾ ಇವೆ." ಆದುದರಿಂದ ಈ ಸಮಸ್ಯೆಗೆ ಪರಿಹಾರವಾಗಿ ಅವರಿಗಿರುವ ಏಕ ಮಾತ್ರ ಪರಿಹಾರ ಮಾರ್ಗ ಇಸ್ಲಾಮಿನ ವಿರುದ್ಧ ತಪ್ಪಾದ ಉಪಾಯಗಳನ್ನು ಹೂಡುವುದಾಗಿದೆ.

ಬಲಾತ್ಕಾರದ ಬಗ್ಗೆ ಇಸ್ಲಾಮಿನ ನಿಲುವನ್ನು ಪ್ರತಿಪಾದಿಸುವ ಈ ಮುಸ್ಲಿಮೇತರರು ನೀಡುವ ವಿವರಣೆ ಎಷ್ಟರ ಮಟ್ಟಿಗೆ ಸರಿಯಾಗಿದೆ? ಖೈಸರ್ ರಾಜನಿಗೆ ಇಸ್ಲಾಮ್ ಧರ್ಮದ ಕುರಿತು ಅರಿವಿತ್ತೆಂದು ಅವರು ಹೇಳುತ್ತಾರೆ. ಆದರೆ ಪವಿತ್ರ ಖುರ್‌ಆನ್ ಈ ಬಗ್ಗೆ ಏನು ಹೇಳುತ್ತದೆ ಎಂದು ನೋಡುವ. ಅಲ್ಲಾಹನು ಹೀಗೆ ಘೋಷಿಸಲು ಹಝ್‌ರತ್ ಮುಹಮ್ಮದ್ ಪೈಗಂಬರರಿಗೆ[ಸ] ಆದೇಶಿಸಿದನು: **"ಇಸ್ಲಾಮ್ ಸತ್ಯವಾಗಿದೆ. ಅದು ನಿಮ್ಮ ಪ್ರಭುವಿನಿಂದ ಬಂದುದಾಗಿದೆ. ಇಷ್ಟವಿರುವವರು ನಂಬಲಿ. ಇಷ್ಟವಿರುವವರು ನಿರಾಕರಿಸಲಿ."** (ಪವಿತ್ರ ಖುರ್‌ಆನ್ 18:30). ಏಕೆಂದರೆ: **"ಧರ್ಮದಲ್ಲಿ ಯಾವುದೇ ರೀತಿಯ ಬಲಾತ್ಕಾರವಿಲ್ಲ."** (2:257). ಖುರ್‌ಆನಿನಲ್ಲಿ ಮತ್ತೊಂದೆಡೆ ಅಲ್ಲಾಹನು ಹೇಳುತ್ತಾನೆ: **"(ಪ್ರವಾದಿಯೇ) ಹೇಳು: ಓ ಜನರೇ ನಿಮ್ಮ ಪ್ರಭುವಿನ ಕಡೆಯಿಂದ ನಿಮಗೆ ಸತ್ಯ ಬಂದಿರುತ್ತದೆ. ಯಾರಾದರೂ ಸತ್ಪಥವನ್ನು ಅನುಸರಿಸುವನಾದರೆ ಅವನು ತನ್ನ ಒಳಿತಿಗಾಗಿಯೇ ಸತ್ಪಥವನ್ನು ಅನುಸರಿಸುತ್ತಾನೆ. ಯಾರಾದರೂ ದಾರಿ ತಪ್ಪಿ ಹೋಗುವನಾದರೆ ತನಗೆ ಹಾನಿಕಾರವಾಗಿಯೇ ಅವನು ದಾರಿ ತಪ್ಪುತ್ತಾನೆ. ನಾನು ನಿಮ್ಮ ಮೇಲ್ನೋಟಗಾರನಲ್ಲ." (10:109)**

ಈ ಉಪದೇಶವನ್ನು ಹಝ್‌ರತ್ ಮುಹಮ್ಮದ್ ಪೈಗಂಬರರು[ಸ] ಅನುಷ್ಠಾನಕ್ಕೆ ತಂದುದು ಹೇಗೆಂದು ನೋಡಿರಿ. ಬನೂ ನಝೀರ್ ಗೋತ್ರದ ಜನರನ್ನು ಮದೀನದಿಂದ ಅವರ ಕೆಲವು ಕುಕೃತ್ಯಗಳ ಕಾರಣದಿಂದ ಶಿಕ್ಷೆಯ ರೂಪದಲ್ಲಿ ಗಡಿಪಾರು ಮಾಡಿದಾಗ ಮದೀನದ ನಿವಾಸಿಗಳಾದ ಅನ್‌ಸಾರ್‌ಗಳು ಬನೂ ನಝೀರ್ ಗೋತ್ರದ ಜನರಿಗೆ ನೀಡಲಾದ ತಮ್ಮ ಮಕ್ಕಳನ್ನು ಹಿಂದಕ್ಕೆ ಪಡೆಯಲು ಬಯಸಿದರು. ಆಗ ಹಝ್‌ರತ್ ಪೈಗಂಬರ್[ಸ] ಹೇಳಿದರು: "ನೀವು ಕೊಟ್ಟದ್ದನ್ನು ತಿರುಗಿ ಕೇಳಬೇಡಿರಿ. ಧರ್ಮದ ವಿಷಯದಲ್ಲಿ ಬಲಾತ್ಕಾರವಿಲ್ಲ. ನೀವು ಕೊಟ್ಟ ನಿಮ್ಮ ಮಕ್ಕಳು ಅವರ ಬಳಿಯಲ್ಲಿಯೇ ಇರಲಿ." ಹಝ್‌ರತ್ ಮುಹಮ್ಮದ್ ಪೈಗಂಬರರ[ಸ] ಈ ಉಪದೇಶವನ್ನು ಅವರ ಖಲೀಫರೂ ಶಿಷ್ಯರೂ ಅನುಸರಿಸುತ್ತಿದ್ದರು. ಹಝ್‌ರತ್ ಉಮರ್‌ರವರ[ರ] ಒಬ್ಬ ಗುಲಾಮ್ ಹೀಗೆ ಹೇಳುತ್ತಾರೆ: "ಹಝ್‌ರತ್ ಉಮರ್‌ರವರು, ನಾನು ಮುಸ್ಲಿಮನಾಗಬೇಕೆಂದು ಹಲವು ಸಲ ಹೇಳುತ್ತಿದ್ದರು. ನಾನು ನಿರಾಕರಿಸಿದಾಗೆಲ್ಲಾ ಅವರು ಹೇಳುತ್ತಿದ್ದರು: 'ಸರಿ ಇಸ್ಲಾಮ್‌ನಲ್ಲಿ ಬಲತ್ಕಾರವಿಲ್ಲ.' ಅವರು ಮೃತರಾಗುವ ಸಮಯದಲ್ಲಿ ಹೇಳಿದರು: 'ನಾನು ನಿನ್ನನ್ನು ಸ್ವತಂತ್ರಗೊಳಿಸುತ್ತೇನೆ. ನಿನಗಿಷ್ಟವಿರುವಲ್ಲಿಗೆ ಹೋಗು.'" ಇದು ಇಸ್ಲಾಮ್ ಧರ್ಮದಲ್ಲಿ ಧಾರ್ಮಿಕ ಸ್ವಾತಂತ್ರ್ಯದ ಪಾಠವಾಗಿದೆ.

ಈ ರೀತಿ ಅದರ ಪಾಲನೆಯಾಗುತ್ತಿದೆ. ಒಬ್ಬ ಗುಲಾಮನ ಮೇಲೆ ಕೂಡ ಬಲಾತ್ಕಾರ ನಡೆಯಲಿಲ್ಲ. ಆದರೆ ಪೋಪ್, ಇಸ್ಲಾಮ್ ಧರ್ಮದಲ್ಲಿ ದೌರ್ಜನ್ಯ ಮತ್ತು ಬಲಾತ್ಕಾರವಿದೆ ಎಂದು ಹೇಳುತ್ತಾರೆ.

ಪವಿತ್ರ ಖುರ್‌ಆನ್ ಪುನಃ ಹೀಗೆ ಹೇಳುತ್ತದೆ:

**"ಗ್ರಂಥ ನೀಡಲ್ಪಟ್ಟವರೊಡನೆ ಮತ್ತು ಅನಕ್ಷರಸ್ಥರೊಡನೆ 'ನೀವು ಸಹ ಅಲ್ಲಾಹನಿಗೆ ಸ್ವಯಂ ಅರ್ಪಿಸಿಕೊಂಡಿರುವಿರೋ?' ಎಂದು ಕೇಳು. ಅವರು ಹಾಗೆ ಅರ್ಪಿಸಿದರೆ ಅವರು ಸತ್ಪಥ ಹೊಂದಿದರು (ಎಂದು ತಿಳಿದುಕೋ). ಆದರೆ ಅವರು ಮುಖ ತಿರುಗಿಸಿದರೆ, ಸಂದೇಶವನ್ನು ತಲಪಿಸುವುದು ಮಾತ್ರ ನಿನ್ನ ಕರ್ತವ್ಯವಾಗಿದೆ. ಅಲ್ಲಾಹನು ತನ್ನ ದಾಸರ ಸ್ಥಿತಿಗತಿಗಳನ್ನು ಚೆನ್ನಾಗಿ ಕಾಣುತ್ತಾನೆ." (3:21)**

ಯಾರನ್ನು ಹಿಡಿಯಬೇಕು, ಯಾರಿಗೆ ಶಿಕ್ಷೆ ನೀಡಬೇಕು, ಯಾರೊಂದಿಗೆ ಹೇಗೆ ವರ್ತಿಸಬೇಕು ಎಂಬುದನ್ನು ನಿರ್ಧರಿಸಬೇಕಾದುದು ಅಲ್ಲಾಹನು. ಇದು ಅವನ ಕೆಲಸವಾಗಿದೆ.

ಪವಿತ್ರ ಖುರ್‌ಆನ್‌ನಿಂದ ಉಲ್ಲೇಖಿಸಿದ ಮೇಲಿನ ವಚನ ಅವತೀರ್ಣವಾದುದು ಮಕ್ಕವನ್ನು ಪ್ರವಾದಿಯವರು(ಸ) ಜಯಿಸಿದ ನಂತರವಾಗಿದೆ. ಆಗ ಇಸ್ಲಾಮ್ ಪ್ರಬಲವಾಗಿತ್ತು.

ಇಸ್ಲಾಮಿನ ವಿರುದ್ಧ ನಿರಾಧಾರ ಆಕ್ಷೇಪಗಳನ್ನು ಮಾಡುವುದಕ್ಕೆ ಬದಲಾಗಿ ಬುದ್ಧಿ ಮತ್ತು ನ್ಯಾಯವನ್ನು ಬಳಸಿ ತೀರ್ಮಾನಿಸಬೇಕು. ಇಸ್ಲಾಮ್ ಧರ್ಮ ಪ್ರಚಾರಕ್ಕಾಗಿ ಬಲಾತ್ಕಾರವನ್ನು ಬಳಸಿದ ಕುರಿತು ಒಂದು ಉದಾಹರಣೆ ಸಹ ದೊರಕುವುದಿಲ್ಲ.

ಹಝ್ರತ್ ಮುಹಮ್ಮದ್ ಪೈಗಂಬರರು(ಸ) ಧರ್ಮ ಪ್ರಚಾರಕ್ಕಾಗಿ ಬಲಾತ್ಕಾರ ಮಾಡಿದರೆಂದು ಆಕ್ಷೇಪಿಸಲಾಗುತ್ತಿದೆ. ಆದರೆ ಒಬ್ಬನು ಹೃತ್ಪೂರ್ವಕವಾಗಿ ನಂಬದೆ ಬರೇ ತೋರಿಕೆಗಾಗಿ ಇಸ್ಲಾಮ್ ಧರ್ಮವನ್ನು ಸ್ವೀಕರಿಸುವುದು ಅವರಿಗೆ ಸಹ್ಯವಾಗಿರಲಿಲ್ಲ, ಒಂದು ಘಟನೆ ಹೀಗೆ ವರದಿಯಾಗಿದೆ: ಒಬ್ಬ ಅವಿಶ್ವಾಸಿಯಾದ ಯುದ್ಧ ಕೈದಿಯನ್ನು ಹಝ್ರತ್ ಪೈಗಂಬರರ(ಸ) ಮುಂದೆ ಹಾಜರುಪಡಿಸಿದಾಗ ಆತನು ಹೇಳಿದನು: "ನಾನು ಮುಸ್ಲಿಮನಾಗಿದ್ದೇನೆ. ನನ್ನನ್ನು ಏಕೆ ಕೈದು ಮಾಡಿದಿರಿ?" ಆಗ ಹಝ್ರತ್ ಪೈಗಂಬರ್ (ಸ) ಹೇಳಿದರು: "ನೀನು ಮೊದಲೇ ಮುಸ್ಲಿಮನಾಗಿದ್ದರೆ ಸರಿಯಾಗುತ್ತಿತ್ತು. ಈಗ ಯುದ್ಧ ಕೈದಿಯಾದ ನಂತರ ನೀನು ವಿಮೋಚನೆಗಾಗಿ ಮುಸ್ಲಿಮನಾಗುತ್ತಿರುವೆ." ಅವರು ಅವನನ್ನು ಬಲಾತ್ಕಾರದಿಂದ ಮುಸ್ಲಿಮನನ್ನಾಗಿ ಮಾಡಲು ಬಯಸಲಿಲ್ಲ. ಹೃತ್ಪೂರ್ವಕವಾಗಿ ದೇವ ಸನ್ನಿಧಿಯಲ್ಲಿ ವಿಶ್ವಾಸವನ್ನು ಅರ್ಪಿಸಬೇಕಾಗಿದೆ ಎಂದು ಅವರು ಆಶಿಸಿದರು. ಅನಂತರ ಆ ಯುದ್ಧ ಕೈದಿಯನ್ನು, ಇಬ್ಬರು ಮುಸ್ಲಿಮ್ ಕೈದಿಗಳನ್ನು ಶತ್ರುಪಕ್ಷದವರಿಂದ ಬಿಡಿಸುವುದಕ್ಕೆ ಪ್ರತಿಯಾಗಿ ಬಿಡುಗಡೆಗೊಳಿಸಲಾಯಿತು.

ಇಸ್ಲಾಮ್ ಧರ್ಮದ ಪ್ರಕಾರ, ಶತ್ರುಗಳು ಯುದ್ಧ ಮಾಡುತ್ತಾ ಇರುವಾಗ ಮತ್ತು ಗಲಭೆ ಗೊಂದಲಗಳನ್ನು ಉಂಟುಮಾಡುತ್ತಿರುವಾಗ ಮಾತ್ರ ಪ್ರತಿಯುದ್ಧ ಮಾಡುವುದನ್ನು ಅನುಮತಿಸಲಾಗಿದೆ. ಶಾಂತ ಪರಿಸ್ಥಿತಿ ಉಂಟಾದಾಗ ಮತ್ತು ಕ್ಷೋಭೆ ಕೊನೆಗೊಂಡಾಗ ಯುದ್ಧ ಮಾಡುವ ಅಧಿಕಾರ ಮುಸ್ಲಿಮರಿಗೆ ಇರುವುದಿಲ್ಲ. ಈ ಬಗ್ಗೆ ಪವಿತ್ರ ಖುರ್‌ಆನ್ ಹೀಗೆ ಹೇಳಿದೆ:

**"ಫಿತ್ನ (ಶಾಂತಿಭಂಗ) ಇಲ್ಲದಂತಾಗಿ ಧರ್ಮ (ಸ್ವೀಕಾರ) ಅಲ್ಲಾಹನಿಗೋಸ್ಕರವಾಗುವವರೆಗೆ ನೀವು ಅವರೊಡನೆ ಯುದ್ಧ ಮಾಡಿರಿ. ಆದರೆ ಅವರು ವಿರಮಿಸಿದರೆ, (ಅರಿತು ಕೊಳ್ಳಿರಿ) ದುಷ್ಕರ್ಮಿಗಳಲ್ಲದವರ ಮೇಲೆ ಆಕ್ರಮಣ ಸಲ್ಲದು." (2:194)**

ದೇಶದಲ್ಲಿ ಅಶಾಂತಿ, ಅರಾಜಕತೆ ಕೊನೆಗೊಂಡು ಶಾಂತಮಯ ಪರಿಸ್ಥಿತಿ ಸ್ಥಾಪಿತವಾಗುವ ತನಕ ಶತ್ರುಗಳ ವಿರುದ್ಧ ಯುದ್ಧ ಮಾಡಿರಿ ಎಂಬ ಮೇಲಿನ ಆದೇಶಕ್ಕೆ ಸಂಬಂಧಿಸಿ ಹೀಗೆ ವರದಿಯಾಗಿದೆ: ಹಝ್ರತ್ ಇಬ್ನು ಉಮರ್(ರ) ಹೀಗೆ ಹೇಳುತ್ತಾರೆ: "ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಕಾಲದಲ್ಲಿ ಮುಸ್ಲಿಮರು ಕಡಿಮೆ ಸಂಖ್ಯೆಯಲ್ಲಿ ಇದ್ದಾಗ ಯಾರಾದರೂ ಮುಸ್ಲಿಮರಾದರೆ ಅವಿಶ್ವಾಸಿಗಳು ಅವರನ್ನು ಹಿಂಸಾಚಾರಕ್ಕೆ ಗುರಿಪಡಿಸುತ್ತಿದ್ದರು. ಕೆಲವರನ್ನು ಅವರು ಕೊಲ್ಲುತ್ತಿದ್ದರು. ಕೆಲವರನ್ನು ಸೆರೆಹಿಡಿಯುತ್ತಿದ್ದರು. ನಾವು ಶತ್ರುಗಳ ವಿರುದ್ಧ ಆ ಕಾಲದಲ್ಲಿ ಯುದ್ಧ ಮಾಡುತ್ತಾ ಇದ್ದೆವು. ಅನಂತರ ಮುಸ್ಲಿಮರ ಸಂಖ್ಯೆ ಹೆಚ್ಚಾಯಿತು. ನಾವು ಶಕ್ತಿಯುತರಾದೆವು. ಆಗ ಹೊಸದಾಗಿ ಮುಸ್ಲಿಮರಾಗುವವರು ಹಿಂಸೆಗೆ ಗುರಿಯಾಗುತ್ತಿರಲಿಲ್ಲ. ಅವಿಶ್ವಾಸಿಗಳ ಕಡೆಯಿಂದ ಹಿಂಸೆಯು ನಿಂತಾಗ ನಾವು ಸಹ ಪ್ರತಿಯುದ್ಧವನ್ನು ನಿಲ್ಲಿಸಿದೆವು."

ಪವಿತ್ರ ಖುರ್‌ಆನ್‌ನಲ್ಲಿ ಮತ್ತೊಂದೆಡೆ ಅಲ್ಲಾಹನು ಹೀಗೆ ಹೇಳುತ್ತಾನೆ:

**"ಓ ಸತ್ಯ ವಿಶ್ವಾಸಿಗಳೇ, ನೀವು ನ್ಯಾಯೋಚಿತವಾಗಿ ಸಾಕ್ಷ್ಯವಹಿಸುವವರಾಗಿದ್ದುಕೊಂಡು, ಅಲ್ಲಾಹನ ಮಾರ್ಗದಲ್ಲಿ ಸ್ಥಿರಚಿತ್ತರಾಗಿರಿ. ಒಂದು ಜನಾಂಗದವರ ಶತ್ರುತ್ವ ಅವರೊಡನೆ ಅನ್ಯಾಯವಾಗಿ ವರ್ತಿಸಲು ನಿಮ್ಮನ್ನು ಪ್ರೇರೇಪಿಸದಿರಲಿ. (ಸದಾ) ನೀವು ನ್ಯಾಯಯುತವಾಗಿ ವರ್ತಿಸಿರಿ. ಅದು ದೇವಭಕ್ತಿಗೆ ಅತಿ ಸಮೀಪವಾದುದು. ನೀವು ಅಲ್ಲಾಹನ ಭಯಭಕ್ತಿಯಿರಿಸಿಕೊಳ್ಳಿರಿ. ನಿಸ್ಸಂಶಯವಾಗಿಯೂ ಅಲ್ಲಾಹನು ನೀವು ಮಾಡುವುದನ್ನೆಲ್ಲಾ ಬಲ್ಲವನಾಗಿದ್ದಾನೆ." (5:9)**

ಇಂತಹ ನ್ಯಾಯಯುತವಾದ ನಡೆವಳಿಕೆ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಕಾಲದಲ್ಲಿ ಒಂದು ಕ್ರಾಂತಿಯನ್ನುಂಟುಮಾಡಿತು. ಅನಂತರ ಸಹ ಕ್ರಾಂತಿ ಉಂಟಾಯಿತು. ನೀವು ಪೈಗಂಬರ್ ಶಿಷ್ಯರ ಜೀವಿತವನ್ನು ನೋಡುವುದಾದರೆ ಅವರ ಜೀವಿತದಲ್ಲಿ ಉಂಟಾದ ಕ್ರಾಂತಿಯು ಬಲಾತ್ಕಾರದಿಂದ ಧರ್ಮವನ್ನು ಬದಲಾಯಿಸಿದುದರ ಮೂಲಕ ಉಂಟಾದ ಕ್ರಾಂತಿಯಲ್ಲ; ಅದು ಹೃದಯದ ಬದಲಾವಣೆಯಿಂದ ಉಂಟಾದ ಕ್ರಾಂತಿ ಎನ್ನುವುದು ಸ್ಪಷ್ಟವಾಗುವುದು. ಅವರ ಜೀವಿತದಲ್ಲಿ ಎಂತಹ ಕ್ರಾಂತಿ ಉಂಟಾಯಿತೆಂದರೆ ಅವರು ಶತ್ರುಗಳೊಡನೆ ಉತ್ತಮವಾಗಿ ವರ್ತಿಸಿದಾಗ ಶತ್ರುಗಳು ಸಹ ಮಿತ್ರರಾದರು. ಉದಾಹರಣೆಗೆ ಮಕ್ಕ ವಿಜಯದ ಸಂದರ್ಭವನ್ನು ನೋಡಿರಿ. ಇಕ್ರಿಮ ಇಸ್ಲಾಮಿನ ಕಠಿಣ ಶತ್ರುವಾಗಿದ್ದರು. ಅವರು ಆಗ ನಗರದಿಂದ ಓಡಿಹೋದರು. ಮುಸ್ಲಿಮಳಾದ ಅವರ ಪತ್ನಿ ಹಝ್ರತ್ ಮುಹಮ್ಮದ್ ಪೈಗಂಬರ್‌ರೊಡನೆ(ಸ) ಅವರ ಪರವಾಗಿ ಕ್ಷಮೆಯನ್ನು ಯಾಚಿಸಿ ಅವರನ್ನು ಮರಳಿ ತರಲು ಅನುಮತಿ ಕೇಳಿದಾಗ ಅನುಮತಿ ದೊರಕಿತು. ಇಕ್ರಿಮ ಮರಳಿ ಬಂದಾಗ ಅವರ ಜೀವಿತದಲ್ಲಿ ಎಂತಹ ಕ್ರಾಂತಿ ಉಂಟಾಯಿತೆಂದರೆ ಖಡ್ಗದ ಮೂಲಕ ಅಂತಹ ಕ್ರಾಂತಿ ಉಂಟಾಗಲು ಸಾಧ್ಯವಿರಲಿಲ್ಲ. ಅವರ ವಿಶ್ವಾಸದಲ್ಲಿ ಉಂಟಾದ ಪ್ರಗತಿಯು

ಪ್ರೀತಿಯ ಮೂಲಕವಲ್ಲದೆ ಸಾಧ್ಯವಿರಲಿಲ್ಲ. ಅವರ ಹೃದಯವು ಪ್ರೀತಿಯಿಂದ ತುಂಬಿರದಿರುತ್ತಿದ್ದರೆ ಅಂತಹ ನಿಷ್ಠೆಯು ಸಾಧ್ಯವಾಗುತ್ತಿರಲಿಲ್ಲ. ಅವರು ಇಸ್ಲಾಮ್ ಧರ್ಮದ ಅಭಿಮಾನದಿಂದ ಮಾಡಿದ ತ್ಯಾಗಭರಿತ ಕೃತ್ಯಗಳು ಅವರು ಇಸ್ಲಾಮ್ ಧರ್ಮ ತತ್ವಗಳನ್ನು ಮನವರಿಕೆ ಮಾಡದೆ ಸಾಧ್ಯವಾಗುತ್ತಿರಲಿಲ್ಲ. ಬೇರೆ ಪೈಗಂಬರ್ ಶಿಷ್ಯರು ಮಾಡಿದ ಕೃತ್ಯಗಳು ಸಹ ಅವರು ಇಸ್ಲಾಮ್ ಧರ್ಮ ತತ್ವಗಳನ್ನು ಮನವರಿಕೆ ಮಾಡಿದ ನಂತರ ಅದರ ಬಗ್ಗೆ ಪ್ರೀತಿ ಮತ್ತು ಅಭಿಮಾನವನ್ನು ಪ್ರದರ್ಶಿಸಲು ಮಾಡಿದ ಕೃತ್ಯಗಳೇ ಆಗಿವೆ. ಅಂತಹ ಘಟನೆಗಳಿಂದ ಇಸ್ಲಾಮ್ ಧರ್ಮದ ಚರಿತ್ರೆಯು ತುಂಬಿದೆ.

ನಾನು ಮೇಲೆ ಪ್ರಸ್ತಾಪಿಸಿದ ಇಕ್ರಿಮ(ರ) ಬಗ್ಗೆ ಹೇಳುವುದಾದರೆ, ಅವರು ಇಸ್ಲಾಮಿನ ವಿರುದ್ಧ ಮೊದಲು ಹೋರಾಟ ಮಾಡುತ್ತಾ ಇದ್ದರು. ಇಸ್ಲಾಮಿನ ನಾಶಕ್ಕಾಗಿ ಅವರು ತನ್ನ ಸಮಯವನ್ನು ವಿನಿಯೋಗಿಸುತ್ತಿದ್ದರು. ಆ ಬಳಿಕ ಮಕ್ಕಾ ವಿಜಯದ ನಂತರ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಅಧೀನದಲ್ಲಿ ಜೀವಿಸುವುದು ತನಗೆ ಅಪಮಾನಕರವೆಂದು ಭಾವಿಸಿದ ಇಕ್ರಿಮ(ರ) ಮಕ್ಕ ನಗರದಿಂದ ಓಡಿಹೋದರು.

ಆ ಬಳಿಕ, ಮುಸ್ಲಿಮರಾದ ನಂತರ ಅವರ ನಿಷ್ಠೆ ಹೇಗಿತ್ತೆಂದರೆ, ಹಝ್ರತ್ ಅಬೂಬಕರ್‌ರವರ(ರ) ಖಿಲಾಫತ್ ಕಾಲದಲ್ಲಿ ಅವರು ವಿದ್ರೋಹಿಗಳನ್ನು ನಿಗ್ರಹಿಸುವುದರಲ್ಲಿ ಅಪ್ರತಿಮ ಪರಾಕ್ರಮವನ್ನು ತೋರಿಸಿದರು. ಒಂದು ಘೋರ ಯುದ್ಧ ನಡೆಯುತ್ತಿದ್ದಾಗ, ಹುಲ್ಲು ಕುಡುಗೋಲಿನಿಂದ ಕತ್ತರಿಸಲ್ಪಡುವ ರೀತಿಯಲ್ಲಿ ಜನರು ಕೊಲ್ಲಲ್ಪಡುತ್ತಿದ್ದರು. ಆಗ ಇಕ್ರಿಮ(ರ) ತನ್ನ ಜನರೊಂದಿಗೆ ಸೈನ್ಯದ ಹೃದಯಭಾಗಕ್ಕೆ ಮುನ್ನುಗ್ಗಿದರು. ಆಗ ಯುದ್ಧ ಬಹಳ ಅಪಾಯಕರವಾಗಿ ನಡೆಯುತ್ತಿದ್ದ ಕಾರಣ ಆ ರೀತಿ ಸೈನ್ಯದೊಳಗೆ ನುಗ್ಗುವುದು ಸರಿಯಲ್ಲವೆಂದು ಕೆಲವರು ಅವರನ್ನು ತಡೆದರೂ ಅವರು ಹೀಗೆ ಹೇಳುತ್ತಾ ಮುಂದುವರಿದರು. "ನಾನು ಲಾತ್ ಮತ್ತು ಉಝ್ಝಾ ಪರವಾಗಿ ಮುಹಮ್ಮದ್(ಸ) ವಿರುದ್ಧ ಯುದ್ಧ ಮಾಡಿದ್ದೇನು. ಈಗ ನಾನು ಅಲ್ಲಾಹನ ಮಾರ್ಗದಲ್ಲಿ ಹೋರಾಡುತ್ತಿರುವಾಗ ಹಿಂದೆ ಸರಿಯಲಾರೆನು." ಯುದ್ಧ ಮುಗಿದ ನಂತರ ಅವರ ಮೃತ ಶರೀರ ದೊರಕಿದಾಗ ಅವರ ಶರೀರವು ಈಟಿ ಮತ್ತು ಖಡ್ಗಗಳ ಹೊಡೆತದಿಂದ ಉಂಟಾದ ಗಾಯಗಳಿಂದ ಆವೃತವಾಗಿತ್ತು.

ಅವರು ಮಾಡುತ್ತಿದ್ದ ಆರ್ಥಿಕ ತ್ಯಾಗಗಳ ಕುರಿತು ಹೇಳುವುದಾದರೆ, ಯುದ್ಧಗಳನ್ನು ಜಯಿಸಿದಾಗ ಅವರಿಗೆ ದೊರಕುತ್ತಿದ್ದ ಸಂಪತ್ತನ್ನು ಬಡಬಗ್ಗರಿಗೆ ಅವರು ದಾನ ಧರ್ಮ ಮಾಡುತ್ತಿದ್ದರು. ಅವರು ಧಾರ್ಮಿಕ ಕೆಲಸಗಳಿಗಾಗಿ ಸಂತೋಷದಿಂದ ಖರ್ಚು ಮಾಡುತ್ತಿದ್ದರು. ಹೃದಯಗಳಲ್ಲಿ ಉಂಟಾದ ಇಂತಹ ಬದಲಾವಣೆ ಬಲಾತ್ಕಾರದಿಂದ ಸಾಧ್ಯವಾಗಲಾರದು. (ಇಸಾಬ, ಅಸದುಲ್ ಗಾಬ, ಇಸ್ತೀಆಬ್ ಗ್ರಂಥಗಳನ್ನು ನೋಡಿರಿ)

ಬಲಾತ್ಕಾರದಿಂದ ಇಸ್ಲಾಮ್ ಧರ್ಮಕ್ಕೆ ಜನರನ್ನು ಸೇರಿಸಲಾಗುತ್ತಿತ್ತು ಎಂಬ ಆಕ್ಷೇಪ ಮುಸ್ಲಿಮೇತರರಿಂದ ಮಾಡಲಾಗುತ್ತಿದೆ. ಆದರೆ ಈ ಆಕ್ಷೇಪಗಳು ಸುಳ್ಳೆಂದು ಸಾಬೀತುಗೊಳಿಸುವ ಅನೇಕ ಸಂಭವಗಳು ಚರಿತ್ರೆಯಲ್ಲಿ ಉಲ್ಲೇಖಿತವಾಗಿವೆ.

ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಉಪದೇಶ ಹೇಗಿತ್ತೆಂದು ನಾವು ನೋಡಿದ್ದೇವೆ. ಒಂದು ಹದೀಸ್ ಹೀಗಿದೆ:

"ಇಸ್ಲಾಮೀ ರಾಜ್ಯದೊಳಗೆ ಯಾವುದಾದರೂ ಮೌಖಿಕ ಅಥವಾ ಲಿಖಿತ ಒಪ್ಪಂದದ ಪ್ರಕಾರ ಪ್ರವೇಶ ಪಡೆದಿರುವ ಮುಸ್ಲಿಮೇತರನನ್ನು ಮುಸ್ಲಿಮನೊಬ್ಬನು ಕೊಲೆ ಮಾಡಿದರೆ ಆ ಕೊಲೆಗಾರನಿಗೆ ಸರಕಾರದಿಂದ ಶಿಕ್ಷೆ ದೊರಕುವುದರೊಂದಿಗೆ ಅವನಿಗೆ ಸ್ವರ್ಗದ ಗಾಳಿಯ ಸುಖಾನುಭವವೂ ನಿಷಿದ್ಧಗೊಳಿಸಲ್ಪಡುವುದು."

ಇಸ್ಲಾಮ್ ಧರ್ಮದ ಖಲೀಫರ ನಡೆವಳಿಕೆ ಹೇಗಿತ್ತೆಂದು ನೋಡುವ:

ಒಂದು ಸ್ಥಳದಲ್ಲಿ ಮುಸ್ಲಿಮೇತರರಿಂದ ಜಿಝಿಯಾ ತೆರಿಗೆಯನ್ನು ಬಲಾತ್ಕಾರದಿಂದ ವಸೂಲು ಮಾಡುತ್ತಾ ಇರುವುದನ್ನು ಆ ಪ್ರದೇಶದಲ್ಲಿ ದಾಟಿ ಹೋಗುತ್ತಿದ್ದ ಹಝ್ರತ್ ಉಮರ್(ರ) ಕಂಡಾಗ ಅಲ್ಲಿ ನಿಂತು ಕೋಪದಿಂದ ಕೇಳಿದರು: "ಇಲ್ಲಿ ಏನು ನಡೆಯುತ್ತಿದೆ?" ಆಗ ತೆರಿಗೆ ವಸೂಲಿಗರು ಹೇಳಿದರು: ಈ ಜನರು ಜಿಝಿಯಾ ಕೊಡುತ್ತಾ ಇಲ್ಲ. ಅವರು ಹೇಳುತ್ತಾರೆ: ನಮಗೆ ತೆರಿಗೆ ಕೊಡುವ ಶಕ್ತಿಯಿಲ್ಲ. ಆಗ ಹಝ್ರತ್ ಉಮರ್(ರ) ಹೇಳಿದರು: " ತೆರಿಗೆ ಕೊಡಲು ಶಕ್ತಿಯಿಲ್ಲದವರಿಗೆ ಅದರ ಭಾರ ಹೊರಿಸುವ ಅಗತ್ಯವಿಲ್ಲ. ಅವರನ್ನು ಬಿಟ್ಟು ಬಿಡಿರಿ. ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಹೀಗೆ ಹೇಳಿದುದನ್ನು ನಾನು ಕೇಳಿದ್ದೇನೆ: ಜನರಿಗೆ ಯಾರು ಇಹ ಲೋಕದಲ್ಲಿ ಕಷ್ಟ ಕೊಡುತ್ತಾನೋ ಅವನು ಪರ ಲೋಕದಲ್ಲಿ ಅಲ್ಲಾಹನ ಶಿಕ್ಷೆಗೆ ಗುರಿಯಾಗುವನು." ಆ ಜನರಿಗೆ ಜಿಝಿಯಾ ತೆರಿಗೆಯಿಂದ ವಿನಾಯಿತಿ ನೀಡಲಾಯಿತು. (ಕಿತಾಬುಲ್ ಖರಾಜ್ ನೋಡಿರಿ)

ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಆದೇಶದ ಪ್ರಕಾರ ಹಝ್ರತ್ ಉಮರ್(ರ) ತನ್ನ ಮುಸ್ಲಿಮೇತರ ಪ್ರಜೆಗಳ ಬಗ್ಗೆ ಎಂತಹ ಕಾಳಜಿ ಹೊಂದಿದ್ದರೆಂದರೆ ಅವರು ತನ್ನ ಮೃತ್ಯು ಶಯ್ಯೆಯಲ್ಲಿ ಹೀಗೆ ತಾಕೀತು ಮಾಡಿದರು: ನನ್ನ ಅನಂತರ ಅಧಿಕಾರ ವಹಿಸಲಿರುವ ಖಲೀಫರಿಗೆ ನಾನು ಹೀಗೆ ಉಪದೇಶಿಸುತ್ತೇನೆ: ಮುಸ್ಲಿಮೇತರ ಪ್ರಜೆಗಳೊಂದಿಗೆ ಬಹಳ ಮೃದುವಾಗಿ ಮತ್ತು ಪ್ರೀತಿ ವಾತ್ಸಲ್ಯದಿಂದ ವರ್ತಿಸಬೇಕು. ಅವರೊಂದಿಗೆ ಮಾಡಿಕೊಂಡ ಒಪ್ಪಂದಗಳನ್ನು ಈಡೇರಿಸಬೇಕು. ಅವರನ್ನು ರಕ್ಷಿಸಬೇಕು. ಅವರ ಶತ್ರುಗಳ ವಿರುದ್ಧ ಅವರ ಪರವಾಗಿ ಹೋರಾಡಬೇಕು. ಅವರಿಗೆ ಹೊರಲು ಸಾಧ್ಯವಾಗದಂತಹ ಭಾರವನ್ನು ಅಥವಾ ಹೊಣೆಗಾರಿಕೆಯನ್ನು ಹೊರಿಸಬಾರದು. (ಕಿತಾಬುಲ್ ಖರಾಜ್ ಪುಟ 72)

ಮುಸ್ಲೀಮರೇತರರನ್ನು ಬಲಾತ್ಕಾರದಿಂದ ಮುಸ್ಲಿಮರನ್ನಾಗಿ ಮಾಡುತ್ತಿದ್ದರೆ ಹಝ್ರತ್ ಉಮರ್‌ರವರ(ರ) ವರ್ತನೆ ಹೀಗಾಗಲು ಹೇಗೆ ತಾನೆ ಸಾಧ್ಯ? ಖೈಬರ್ ಪ್ರದೇಶದ ಯಹೂದಿಯರೊಂದಿಗೆ ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಒಪ್ಪಂದ ಮಾಡಿಕೊಂಡ ಪ್ರಕಾರ ಫಸಲಿನ ಪಾಲನ್ನು ಪಡೆಯಲು ಅಬ್ದುಲ್ಲಾ ಬಿನ್ ರವಾಹ ಎಂಬ ಶಿಷ್ಯ ಹೋಗುತ್ತಿದ್ದರು. ಅವರು ಬಹಳ ಮೃದುವಾಗಿ ವರ್ತಿಸಿ ಫಸಲನ್ನು ಎರಡು ಪಾಲು ಮಾಡಿ ಒಂದು ಪಾಲನ್ನು ತೆಗೆದುಕೊಳ್ಳಲು ಯಹೂದಿಯರೊಂದಿಗೆ ಹೇಳುತ್ತಿದ್ದರು. ಉಳಿದ ಪಾಲನ್ನು ತಾನು ತೆಗೆದುಕೊಂಡು ಹೋಗುತ್ತಿದ್ದರು. (ಅಬೂ ದಾವೂದ್)

ನಾನು ಮೊದಲೇ ಹೇಳಿದ ಪ್ರಕಾರ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಉಪದೇಶ ಪಾಲಿಸುವುದರಲ್ಲಿ ಹಝ್ರತ್ ಉಮರ್(ರ) ಬಹಳ ನಿಗಾ ವಹಿಸುತ್ತಿದ್ದರು. ಇಸ್ಲಾಮೀ ಸರಕಾರದ ಮುಸ್ಲಿಮೇತರ ಪ್ರಜೆಗಳ ಹಕ್ಕುಗಳ ಮತ್ತು ಸೌಲಭ್ಯಗಳ ಬಗ್ಗೆ ಅವರಿಗೆ ಬಹಳ ಯೋಚನೆ ಇತ್ತು. ಅವರು ತನ್ನ ಸರಕಾರದ ಗವರ್ನರ್‌ಗಳಿಗೆ ಮುಸ್ಲಿಮೇತರರ ಬಗ್ಗೆ ವಿಶಿಷ್ಟವಾಗಿ ಕಾಳಜಿ ವಹಿಸಲು ಆದೇಶಿಸುತ್ತಿದ್ದರು. ಹಝ್ರತ್ ಉಮರ್(ರ) ಸ್ವತಃ ನೇರವಾಗಿ ಮುಸ್ಲಿಮೇತರ ಪ್ರಜೆಗಳ ಕಷ್ಟಕಾರ್ಪಣ್ಯಗಳ ಕುರಿತು ವಿಚಾರಿಸುತ್ತಿದ್ದರು.

ಒಮ್ಮೆ ಮುಸ್ಲಿಮೇತರರ ಒಂದು ಪ್ರತಿನಿಧಿ ಸಂಘ ಹಝ್ರತ್ ಉಮರ್‌ರವರನ್ನು(ರ) ಭೇಟಿಯಾಗಲು ಬಂದಾಗ ಅವರ ಪ್ರಥಮ ಪ್ರಶ್ನೆ ಇದಾಗಿತ್ತು: "ನಿಮಗೆ ಮುಸ್ಲಿಮರಿಂದ ಏನಾದರೂ ಉಪದ್ರವಿದೆಯೋ?" ಆಗ ದೊರೆತ ಉತ್ತರ ಹೀಗೆ ಇತ್ತು. "ನಾವು ಮುಸ್ಲಿಮರಿಂದ ಉತ್ತಮ ನಿಷ್ಠೆ ಮತ್ತು ಉತ್ತಮ ವರ್ತನೆ ಹೊರತು ಬೇರೇನನ್ನೂ ಕಾಣಲಿಲ್ಲ." (ತಬರಿ ಸಂಪುಟ 5)

ಸಿರಿಯಾ ದೇಶವನ್ನು ಜಯಿಸಿದಾಗ ಮುಸ್ಲಿಮರು ಸಿರಿಯಾ ದೇಶದ ಕ್ರೈಸ್ತರಿಂದ ತೆರಿಗೆ ವಸೂಲಿ ಮಾಡಿದರು. ಆದರೆ ಸ್ವಲ್ಪ ಸಮಯದ ನಂತರ ರೋಮ್ ಸರಕಾರದಿಂದ ಆಕ್ರಮಣದ ಅಪಾಯ ತಲೆದೋರಿತು. ಆಗ ಸಿರಿಯಾ ದೇಶದ ಇಸ್ಲಾಮೀ ಆಡಳಿತಾಧಿಕಾರಿಯಾಗಿದ್ದ ಹಝ್ರತ್ ಅಬೂ ಉಬೈದ್(ರ) ವಸೂಲು ಮಾಡಿದ ತೆರಿಗೆಯ ಎಲ್ಲಾ ಹಣವನ್ನು ಕ್ರೈಸ್ತರಿಗೆ ಮರಳಿಸಿ ಹೇಳಿದರು: "ಯುದ್ಧದ ಕಾರಣದಿಂದ ನಾವು ನಿಮ್ಮ ಹಕ್ಕುಗಳನ್ನು ಕಾಪಾಡಲಾರೆವು. ಆದುದರಿಂದ ಈ ತೆರಿಗೆಯ ಹಣವನ್ನು ನಮ್ಮ ವಶವಿರಿಸುವುದು ನಮಗೆ ನ್ಯಾಯಬದ್ಧವಾಗಿರುವುದಿಲ್ಲ." ಆಗ ಕ್ರೈಸ್ತರು ಇದನ್ನು ನೋಡಿ ಮುಸ್ಲಿಮರಿಗಾಗಿ ಪ್ರಾರ್ಥಿಸುತ್ತಾ ಹೇಳಿದರು: "ನೀವು ರೋಮನ್ನರ ಮೇಲೆ ಜಯಗಳಿಸಿ ಈ ದೇಶದ ಅಧಿಕಾರವನ್ನು ಪಡೆಯಲು ದೇವರು ಅನುಗ್ರಹಿಸಲಿ." (ಕಿತಾಬುಲ್ ಖಿರಾಜ್)

ಮುಸ್ಲಿಮರು ಸಿರಿಯಾ ದೇಶವನ್ನು ಪುನಃ ವಶಪಡಿಸಿದರು. ಅವರು ಸಿರಿಯಾ ದೇಶದಲ್ಲಿ ಪುನಃ ತೆರಿಗೆ ವಸೂಲಿ ಮಾಡತೊಡಗಿದರು. ಇದನ್ನು ಬಲಾತ್ಕಾರ ಎಂದು ಹೇಳಲು ಸಾಧ್ಯವೇ?

ಹಝ್ರತ್ ಮುಹಮ್ಮದ್ ಪೈಗಂಬರರನ್ನು(ಸ) ಆಕ್ಷೇಪಿಸುವವರು ನ್ಯಾಯಯುತವಾದ ದೃಷ್ಟಿಯಿಂದ ನೋಡಲಿ. ಅವರು ಚರಿತ್ರೆ ಓದುವುದಾದರೆ ಅವರಿಗೆ ಹಝ್ರತ್ ಮುಹಮ್ಮದ್ ಪೈಗಂಬರರು(ಸ) ಮುಸ್ಲಿಮೇತರರ ಕುರಿತು ಎಂತಹ ಸಹಾನುಭೂತಿ ಹೊಂದಿದ್ದರೆಂದು ಕಾಣಿಸುವುದು. ಅವರು ಇಸ್ಲಾಮಿಗೆ ಆಹ್ವಾನವನ್ನು ಮೃದುವಾಗಿ, ಪ್ರೀತಿಯಿಂದ ನೀಡುತ್ತಿದ್ದರು. ಅದು ಸಂಬೋಧಿತ ಜೀವಕ್ಕೆ ಹಿತಕಾರಿಯೆಂದು ಬಗೆದು ಆಹ್ವಾನಿಸುತ್ತದ್ದರು. ಒಂದು ಹದೀಸಿನಲ್ಲಿ ಹೀಗೆ ವರದಿಯಾಗಿದೆ: ಹಝ್ರತ್ ಮುಹಮ್ಮದ್ ಪೈಗಂಬರರು(ಸ) ಮತ್ತು ಅವರ ಶಿಷ್ಯರು ತಾವು ಅಧಿಕಾರದಲ್ಲಿದ್ದ ಕಾಲದಲ್ಲಿ ಕೂಡ ಮುಸ್ಲಿಮೇತರರ ಭಾವನೆಗಳ ಬಗ್ಗೆ ಬಹಳ ಜಾಗರೂಕರಾಗಿದ್ದರು. ಒಮ್ಮೆ ಮದೀನದ ಒಬ್ಬ ಯಹೂದಿ ತರುಣ ರೋಗಿಯಾದಾಗ ಅವನನ್ನು ಸಂದರ್ಶಿಸಲು ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಹೋದರು. ಅವನ ರೋಗದ ಸ್ಥಿತಿಯು ಬಹಳ ಕೆಟ್ಟದಾಗಿರುವುದನ್ನು ಕಂಡು ಅವನಿಗೆ ಹಝ್ರತ್ ಪೈಗಂಬರ್(ಸ) ಇಸ್ಲಾಮ್ ಧರ್ಮ ಸ್ವೀಕರಿಸಲಿಕ್ಕೆ ಆಹ್ವಾನ ನೀಡಿದರು. ಅವರ ಆಹ್ವಾನದಿಂದ ಪ್ರಭಾವಿತನಾದ ಆ ತರುಣ ಅಲ್ಲೇ ಇದ್ದ ತನ್ನ ಪಿತನ ಕಡೆಗೆ ಪ್ರಶ್ನಿಸುವ ರೀತಿಯಲ್ಲಿ ನೋಡಿದನು. ಆಗ ಆತನ ಪಿತ ಹೇಳಿದನು: "ನೀನು ಇಸ್ಲಾಮ್ ಧರ್ಮವನ್ನು ಸ್ವೀಕರಿಸಲು ಬಯಸುವುದಾದರೆ ಹಾಗೆಯೇ ಮಾಡು." ಆಗ ಆ ತರುಣನು ಕಲಿಮ ಉಚ್ಚರಿಸಿ ಮುಸ್ಲಿಮನಾದನು. ಆಗ ಹಝ್ರತ್ ಮುಹಮ್ಮದ್ ಪೈಗಂಬರರಿಗೆ(ಸ) ಬಹಳ ಸಂತೋಷವಾಯಿತು. ಅವರು ಹೇಳಿದರು: "ಒಂದು ಆತ್ಮವು ನರಕಾಗ್ನಿಯಿಂದ ರಕ್ಷಿಸಲ್ಪಟ್ಟದ್ದಕ್ಕಾಗಿ ಅಲ್ಲಾಹನನಿಗೆ ಕೃತಜ್ಞತೆಗಳು." (ಬುಖಾರಿ)

ದೌರ್ಜನ್ಯ ಮತ್ತು ಖಡ್ಗ ಪ್ರಯೋಗದಿಂದ ಇಸ್ಲಾಮ್ ಧರ್ಮ ಹರಡಿಸಲ್ಪಟ್ಟಿತೆಂಬ ಆಕ್ಷೇಪದ ನಿಜಸ್ಥಿತಿಯ ಬಗ್ಗೆ ನಾನು ಪವಿತ್ರ ಖುರ್‌ಆನ್ ಮತ್ತು ಹಝ್ರತ್ ಮುಹಮ್ಮದ್ ಪೈಗಂಬರರ(ಸ) ನಡೆವಳಿಕೆಯನ್ನು ಉಲ್ಲೇಖಿಸಿ ಕೆಲವು ಉದಾಹರಣೆಗಳನ್ನು ಇಷ್ಟರಲ್ಲಿಯೇ ನೀಡಿದ್ದೇನೆ. ಇಸ್ಲಾಮ್ ಹೇಗೆ ಹರಡಿತೆಂಬುದು ಸ್ಪಷ್ಟವಾಗಿ ಮನವರಿಕೆ ಆಗಿರಬಹುದು. ಸ್ಪೈನಿನಲ್ಲಿ ಏನು ನಡೆಯಿತು ಎಂದು ನಾನು ಆರಂಭದಲ್ಲಿ ಸೂಚಿಸಿದುದರಿಂದ ಆಕ್ಷೇಪಿಸುವವರ ನಿಜಸ್ಥಿತಿಯು ಸಹ ಬಹಿರಂಗವಾಯಿತು.

ನ್ಯಾಯಯುತವಾಗಿ ವರ್ತಿಸುವ ಕೆಲವು ಕ್ರೈಸ್ತ ಪೌರಸ್ತ್ಯ ಸಂಸ್ಕೃತಿ ಶಾಸ್ತ್ರಜ್ಞರು (Orientalists) ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಕುರಿತು ಏನು ಹೇಳುತ್ತಾರೆಂದು ನೋಡುವ:

ತೋಮಸ್ ಕಾರ್ಲೈಲ್ ಹೀಗೆ ಹೇಳುತ್ತಾರೆ:-

"ಮುಹಮ್ಮದ್ ವಂಚಕನೂ ಪ್ರವಾದಿತ್ವ ವಾದಿಸಿದ ಸುಳ್ಳುಗಾರನೂ ಎಂದು ಕ್ರೈಸ್ತರಾದ ನಮ್ಮಲ್ಲಿ ಪ್ರಖ್ಯಾತವಾಗಿದೆ. ಅವರ ಧರ್ಮವು ಹುಚ್ಚುತನ ಮತ್ತು ಊಹಾಪೋಹಗಳ ಭಂಡಾರವಾಗಿದೆ ಎಂದು ಭಾವಿಸಲಾಗುತ್ತಿದೆ. ಇವೆಲ್ಲಾ ತಪ್ಪು ಅಭಿಪ್ರಾಯಗಳೆಂದು ಜನರು ಮನಗಾಣುತ್ತಿದ್ದಾರೆ. ಈ ವ್ಯಕ್ತಿಯ (ಮುಹಮ್ಮದ್ ಪೈಗಂಬರರ) ಕುರಿತು ದ್ವೇಷಭರಿತವಾದ ಕ್ರೈಸ್ತರು ಸೃಜಿಸಿದ ಆಕ್ಷೇಪಗಳು ನಮ್ಮ ಅವಮಾನಕ್ಕೆ ಹೇತುಗಳಾಗಿವೆ. ಈ ವ್ಯಕ್ತಿಯ ಬಾಯಿಯಿಂದ ಹೊರಟ ಮಾತುಗಳು 18 ಕೋಟಿ ಜನರಿಗೆ 1200 ವರ್ಷಗಳಿಂದ ಮಾರ್ಗ ಸೂಚಿಗಳಾಗಿವೆ. (ಆಗ ಮುಸ್ಲಿಮರ ಜನಸಂಖ್ಯೆ 18 ಕೋಟಿ ಆಗಿತ್ತು.) ಇಂದಿನ ಕಾಲದಲ್ಲಿ ಎಷ್ಟು ಜನರು ಮುಹಮ್ಮದರ ಮಾತುಗಳನ್ನು ಹೇಗೆ ನಂಬುತ್ತಾರೋ ಅದಕ್ಕಿಂತ ಹೆಚ್ಚಿನ ಶ್ರದ್ಧೆಯಿಂದ ಬೇರೆ ಯಾರದಾದರೂ ಮಾತಿನ ಮೇಲೆ ಈ ಕಾಲದ ಜನರು ನಂಬಿಕೆಯನ್ನು ಇರಿಸಿಲ್ಲ. ಸುಳ್ಳುಗಾರನು ಈ ಧರ್ಮವನ್ನು ಪ್ರಚಾರ ಮಾಡಿದನು ಎಂದು ಹೇಳುವುದಕ್ಕಿಂತ ಹೆಚ್ಚು ಕೆಟ್ಟದಾದ ಮತ್ತು ನಾಸ್ತಿಕವಾದದ ಹೇಳಿಕೆ ನನ್ನ ದೃಷ್ಟಿಯಲ್ಲಿ ಬೇರೊಂದಿಲ್ಲ." (On Heros, Hero-Worship and the Heroic in History- Pages 43&44)

ಸರ್ ವಿಲ್‌ಯಮ್ ಮ್ಯೂರ್ ಇಸ್ಲಾಮಿನ ಕುರಿತು ದ್ವೇಷಭಾವ ಹೊಂದಿದ್ದು ಕೆಲವು ತಪ್ಪು ಹೇಳಿಕೆಗಳನ್ನು ನೀಡಿದ್ದರೂ ಸಹ ಅವರು ಹೀಗೆ ಹೇಳುತ್ತಾರೆ:

"ನಾವು ಯಾವುದೇ ಸಂಕೋಚವಿಲ್ಲದೆ ಅಂಗೀಕರಿಸುತ್ತೇವೆ. ಅರಬ್ ದೇಶದಲ್ಲಿ ಹಲವು ಕಾಲದಿಂದ ಹಬ್ಬಿದ್ದ ಬಹುತೇಕ ಅಂಧ ವಿಶ್ವಾಸಗಳ ಅಂಧಕಾರವನ್ನು ಮುಹಮ್ಮದ್ ಎಂದೆಂದಿಗೂ ನೆಲೆನಿಲ್ಲದಂತೆ ನಿರ್ನಾಮ ಮಾಡಿದರು. ಸಾಮಾಜಿಕ ವ್ಯವಸ್ಥೆಯ ದೃಷ್ಟಿಯಿಂದ ನೋಡಿದರೂ ಇಸ್ಲಾಮ್‌ನಲ್ಲಿರುವ ಒಳಿತುಗಳಿಗೇನೂ ಕೊರತೆಯಿಲ್ಲ. ಇಸ್ಲಾಮ್‌ನಲ್ಲಿ ಧರ್ಮ ನಿಷ್ಠೆಗೆ ಇರುವಂತಹ ಉನ್ನತ ಸ್ಥಾನ ಬೇರೆ ಯಾವುದೇ ಧರ್ಮದಲ್ಲಿ ಇಲ್ಲ ಎಂದು ಅಭಿಮಾನಪಡಲು ಅದಕ್ಕೆ ಸಾಧ್ಯವಿದೆ." (The life of Muhammad)

ಎಡ್ವರ್ಡ್ ಗಿಬ್ಬನ್ ಹೀಗೆ ಹೇಳುತ್ತಾರೆ: "ಮುಹಮ್ಮದರ ಜೀವಿತದ ಬಗ್ಗೆ ಕೊನೆಯದಾಗಿ ಯೋಚಿಸಬೇಕಾದ ಸಂಗತಿ ಇದಾಗಿದೆ: ಅವರ ಪ್ರವಾದಿತ್ವದಿಂದ ಜನರಿಗೆ ಪ್ರಯೋಜನ ದೊರಕಿತೆ ಅಥವಾ ಅವರಿಗೆ ಹಾನಿ ಉಂಟಾಯಿತೆ? ಮುಹಮ್ಮದ್‌ರವರ ಕಠಿಣ ಶತ್ರುಗಳು, ಕ್ರೈಸ್ತರು ಮತ್ತು ಯಹೂದಿಯರು ಅವರನ್ನು ಸತ್ಯ ಪ್ರವಾದಿ ಎಂದು ನಂಬದಿದ್ದರೂ ಒಂದು ಸಂಗತಿಯನ್ನು ನಿಶ್ಚಯವಾಗಿಯೂ ಅವರು ಅಂಗೀಕರಿಸುವರು. ಮುಹಮ್ಮದ್ ತನ್ನ ಪ್ರವಾದಿತ್ವವನ್ನು ವಾದಿಸಿದುದು ಒಂದು ಮುಖ್ಯ ಸಮಸ್ಯೆಯ ಕುರಿತು ಸದುಪದೇಶ ನೀಡಲಿಕ್ಕಾಗಿತ್ತು. ಮುಹಮ್ಮದರನ್ನು ಅಂಗೀಕರಿಸದವರು ನಮ್ಮ ಧರ್ಮವು ಸೂಚಿಸುವ ಪರಿಹಾರ ಉತ್ತಮವೆಂದು ಹೇಳಬಹುದಾದರೂ ನಮ್ಮ ಧರ್ಮ ಹೊರತು ಇತರ ಎಲ್ಲಾ ಧರ್ಮಗಳಿಗಿಂತ ಇಸ್ಲಾಮ್ ಧರ್ಮ ಉತ್ತಮವಾಗಿದೆ ಎಂದು ಹೇಳುವರು. ರಕ್ತದ ಹರಿಸುವಿಕೆಯ ಮೂಲಕ ಮಾಡಲಾಗುತ್ತಿದ್ದ ಪಾಪ ಪರಿಹಾರವನ್ನು ಮುಹಮ್ಮದರು ನಮಾಝ್, ಉಪವಾಸ ಮತ್ತು ದಾನ ಧರ್ಮಗಳಿಂದ ಬದಲಾಯಿಸಿದರು. ಅವರು ಸೂಚಿಸಿದ ಆರಾಧನೆಯ ವಿಧಾನ ಸರಳವೂ ಇಷ್ಟಕರವೂ ಆಗಿದೆ. ಮೂರ್ತಿಗಳ ಮುಂದೆ ಮಾಡಲಾಗುತ್ತಿದ್ದ ನರಬಲಿಯನ್ನು ಅವರು ನಿರ್ಮೂಲನೆ ಮಾಡಿದರು. ಅವರು ಮುಸ್ಲಿಮರಲ್ಲಿ ಸತ್ಕಾರ್ಯ ಮಾಡುವ ಮತ್ತು ಪ್ರೀತಿಸುವ ಒಂದು ಸ್ಫೂರ್ತಿಯನ್ನು ಉತ್ತೇಜಿಸಿದರು. ಪರಸ್ಪರ ಒಳಿತನ್ನು ಮಾಡುವ ಮಾರ್ಗದರ್ಶನ ಮಾಡಿದರು. ಸೇಡನ್ನು ತೀರಿಸುವ ಆಶೆ, ವಿಧವೆಯರ ಮೇಲೆ ಮತ್ತು ಅನಾಥರ ಮೇಲೆ ಮಾಡಲಾಗುತ್ತಿದ್ದ ದೌರ್ಜನ್ಯವನ್ನು ಅವರು ತಡೆದರು. ಪರಸ್ಪರ ಶತ್ರುಗಳಾಗಿದ್ದ ಜನಾಂಗಗಳು ವಿಶ್ವಾಸ ಮತ್ತು ಅನುಸರಣೆಯಲ್ಲಿ ಒಮ್ಮತವನ್ನು ಹೊಂದಿ ಆಂತರಿಕ ಹೋರಾಟಗಳಲ್ಲಿ ಅನಾವಶ್ಯಕವಾಗಿ ತೋರಿಸುತ್ತಿದ್ದ ಕಾರ್ಯವನ್ನು ಅತ್ಯಂತ ವ್ಯವಸ್ಥಿತವಾಗಿ ವಿದೇಶಿಯ ಶತ್ರುಗಳ ವಿರುದ್ಧ ಪ್ರಯೋಗಿಸಲು ಮುಂದಾದರು." (The History of Decline and Fall of Roman Empire Vol V Page 231)

ಜಾನ್ ಡೇವನ್‌ಪೋರ್ಟ್ ಹೀಗೆ ಹೇಳುತ್ತಾರೆ: "ಖುರ್‌ಆನ್‌ನಲ್ಲಿ ಯಾವ ವಿಶ್ವಾಸವನ್ನು ಉಪದೇಶಿಸಲಾಗಿದೆಯೋ ಅದರ ಪ್ರಚಾರವನ್ನು ಖಡ್ಗಬಲದಿಂದ ಮಾಡಲಾಯಿತು ಎಂದು ಯೋಚಿಸುವುದು ಬಹಳ ದೊಡ್ಡ ತಪ್ಪು ಆಗಿದೆ. ಯಾರ ಪ್ರಕೃತಿ ದ್ವೇಷದಿಂದ ಮುಕ್ತವಾಗಿದೆಯೋ ಅವರು ನಿಸ್ಸಂಕೋಚವಾಗಿ ಹೀಗೆ ಒಪ್ಪುತ್ತಾರೆ: ಮುಹಮ್ಮದರ ಧರ್ಮದ ಮೂಲಕ ನರಬಲಿಗೆ ಪ್ರತಿಯಾಗಿ ನಮಾಝ್ ಮತ್ತು ದಾನ ಧರ್ಮವನ್ನು ಜಾರಿಗೊಳಿಸಲಾಯಿತು. ಶತ್ರುತ್ವ ಮತ್ತು ನಿರಂತರ ಜಗಳಗಳ ಸ್ಥಾನದಲ್ಲಿ ಔದಾರ್ಯ ಮತ್ತು ಉತ್ತಮ ಸಾಮಾಜಿಕ ವ್ಯವಸ್ಥೆಯ ಆತ್ಮವನ್ನು ಜನರಲ್ಲಿ ಊದಲಾಯಿತು. ಈ ಧರ್ಮವು ಪೌರಾತ್ಯ ಲೋಕಕ್ಕೆ ಒಂದು ಅನುಗ್ರಹವಾಗಿತ್ತು. ಆದುದರಿಂದ ವಿಶಿಷ್ಟವಾಗಿ ಮುಹಮ್ಮದರಿಗೆ ರಕ್ತಪಾತ ನಡೆಸುವ ಆವಶ್ಯಕತೆ ಉಂಟಾಗಲಿಲ್ಲ. ಮೂಸಾ ಪ್ರವಾದಿ ಮೂರ್ತಿ ಪೂಜೆಯನ್ನು ನಿಗ್ರಹಿಸಲು ಯಾವುದೇ ವಿನಾಯಿತಿಯಿಲ್ಲದೆ ಖಡ್ಗ ಪ್ರಯೋಗದ ಮಾರ್ಗವನ್ನು ಅನುಸರಿಸಿದ್ದರು. ಶ್ರೇಷ್ಠ ಮಾರ್ಗವನ್ನು ಅವಲಂಬಿಸಿದ ಮುಹಮ್ಮದರನ್ನು ದೇವನೇ ಮನುಷ್ಯರ ಯೋಚನೆಗಳನ್ನು ಮತ್ತು ಸಮಸ್ಯೆಗಳ ಮೇಲೆ ದೀರ್ಘಕಾಲ ಪ್ರಭಾವ ಬೀರಲು ಸೃಷ್ಟಿಸಿರುವಾಗ ಅಪಮಾನಕರವಾಗಿ ಅವರ ಬಗ್ಗೆ ಟೀಕಿಸುವುದು ಮತ್ತು ಅಜ್ಞಾನದಿಂದ ಖಂಡಿಸುವುದು ಎಂತಹ ನೀಚ ಕೃತ್ಯವಾಗಿದೆ." (An Apology for Muhammad and the Quran)

ಎಡ್ವರ್ಡ್‌ಗಿಬ್ಬನ್ ಬೇರೊಂದು ಕಡೆ ಹೀಗೆಯೂ ಹೇಳಿದ್ದಾರೆ: "ಮುಸ್ಲಿಮರು ಮಾಡುವ ಯುದ್ಧಗಳನ್ನು ಅವರ ಪ್ರವಾದಿ ಪವಿತ್ರ ಯುದ್ಧಗಳೆಂದು ಹೇಳಿದ್ದರು. ಆದರೆ ಪ್ರವಾದಿ ಮಾಡಿದ ವಿವಿಧ ಉಪದೇಶಗಳು ಮತ್ತು ಅವರ ನಡೆವಳಿಕೆಗಳು ಎಂತಹ ಮಾದರಿಗಳಾಗಿದ್ದವು ಎಂದರೆ ಅವರ ಉತ್ತರಾಧಿಕಾರಿಗಳಾಗಿದ್ದ ಖಲೀಫರು ಆ ಮಾದರಿಗಳಿಂದ ಪ್ರಭಾವಿತರಾಗಿ ಅನ್ಯ ಧರ್ಮೀಯರಿಗೆ ಸ್ವಾತಂತ್ರ್ಯ ನೀಡುವ ಪಾಠವನ್ನು ಕಲಿತರು. ಅರಬ್ ದೇಶದಲ್ಲಿ ಮುಹಮ್ಮದರ ದೇವನ ಆರಾಧನಾಲಯವಿದ್ದಿತ್ತು ಮತ್ತು ಆ ದೇಶವನ್ನು ಅವರು ಅಧೀನಕ್ಕೊಳಪಡಿಸಿದ್ದರು. ಮುಹಮ್ಮದ್ ಇಚ್ಛಿಸಿರುತ್ತಿದ್ದರೆ ಆ ದೇಶ ವಾಸಿಗಳಾಗಿದ್ದ ಬಹುದೈವಾರಾಧಕರನ್ನು ನಾಶಗೊಳಿಸಬಹುದಾಗಿತ್ತು. ಆದರೆ ಮುಹಮ್ಮದ್ ನ್ಯಾಯಯುತವಾಗಿ ನಡೆದುಕೊಂಡರು ಮತ್ತು ಬಹಳ ವಿವೇಚನೆಯಿಂದ ವರ್ತಿಸಿದರು." (The History of Decline & Fall of Roman Empire - Vol. V Page 315)

ಕೌಂಟ್ ಟಾಲ್‌ಸ್ಟಾಯಿ ಹೀಗೆ ಬರೆದಿರುತ್ತಾರೆ: "ಮುಹಮ್ಮದ್ ಬಹಳ ಉನ್ನತ ಪದವಿಯನ್ನು ಹೊಂದಿದ ಒಬ್ಬ ಸುಧಾರಕರಾಗಿದ್ದರು ಎಂಬುದರ ಕುರಿತು ಯಾವುದೇ ಸಂಶಯವಿಲ್ಲ. ಅವರು ಮಾನವರ ಸೇವೆ ಮಾಡಿದರು. ಅವರು ತನ್ನ ಸಮುದಾಯವನ್ನು ಸತ್ಯದ ಬೆಳಕಿನ ಕಡೆಗೆ ಕರೆದುಕೊಂಡು ಹೋದರು ಮತ್ತು ಆ ಸಮುದಾಯವು ಶಾಂತಿ ಮತ್ತು ಸಮಾಧಾನವನ್ನು ಇಚ್ಛಿಸುವವರನ್ನಾಗಿ ಮಾಡಿದರೆಂಬುದು ಅವರಿಗೆ ಕಡಿಮೆ ಅಭಿಮಾನಾರ್ಹವಾದ ಸಂಗತಿಯೇನೂ ಅಲ್ಲ. ಅವರ ಸಮುದಾಯ ಧರ್ಮನಿಷ್ಠೆ ಮತ್ತು ಭಯಭಕ್ತಿಗೆ ಆದ್ಯತೆ ನೀಡತೊಡಗಿತು. ಮುಹಮ್ಮದರು ಜನರ ರಕ್ತಪಾತ ಮಾಡುವುದನ್ನು ತಡೆಗಟ್ಟಿದರು. ಅವರು ತನ್ನ ಸಮುದಾಯಕ್ಕೆ ನಿಜವಾದ ಪ್ರಗತಿ ಮತ್ತು ಸಂಸ್ಕೃತಿಯ ಮಾರ್ಗಗಳನ್ನು ತೆರೆದರು. ಇದು ಎಂತಹ ವೈಭವಶಾಲಿ ಕೃತ್ಯವಾಗಿದೆ ಎಂದರೆ ಇಂತಹ ಕೆಲಸವನ್ನು ಯಾವುದಾದರೂ ರಹಸ್ಯಶಕ್ತಿಯ ನೆರವಿನಿಂದ ಮಾತ್ರ ಒಬ್ಬ ವ್ಯಕ್ತಿಗೆ ಮಾಡಲು ಸಾಧ್ಯವಾಗುವುದು. ಇಂತಹ ವ್ಯಕ್ತಿ ನಿಶ್ಚಯವಾಗಿಯೂ ಸಾರ್ವತ್ರಿಕವಾಗಿ ಗೌರವಿಸಲ್ಪಡಲು ಅರ್ಹರಾಗಿದ್ದಾರೆ." ( Count Tolstoy. Islamic Network. http:/www.islam.net/main/)

ಬರ್ನಾಡ್ ಶಾ ಹೇಳುತ್ತಾರೆ: "ಮಧ್ಯಕಾಲದಲ್ಲಿ ಕ್ರೈಸ್ತ ಪಾದರಿಗಳು ತಮ್ಮ ಅಜ್ಞಾನ ಮತ್ತು ದ್ವೇಷದ ಕಾರಣದಿಂದ ಇಸ್ಲಾಮ್ ಧರ್ಮದ ಕುರಿತು ಬಹಳ ಭಯಾನಕ ಚಿತ್ರವನ್ನು ಬರೆದಿದ್ದಾರೆ. ಅಷ್ಟೇ ಅಲ್ಲ; ಅವರು ಮುಹಮ್ಮದರನ್ನು ಒಳ್ಳೆಯ ಶಬ್ದಗಳನ್ನು ಬಳಸಿ ಸ್ಮರಿಸಲಿಲ್ಲ. ನಾನು ಈ

ಸಂಗತಿಗಳ ಕುರಿತು ಬಹಳ ಗಾಢವಾಗಿ ಅಧ್ಯಯನ ಮಾಡಿರುವೆನು. ನಾನು ಮಾಡಿದ ತೀರ್ಮಾನವೇನೆಂದರೆ, ಮುಹಮ್ಮದ್ ಬಹಳ ಘನವೆತ್ತ ಮಹಾನುಭಾವರಾಗಿದ್ದರು. ಅವರು ಸರಿಯಾದ ಅರ್ಥದಲ್ಲಿ ಮಾನವರ ವಿಮೋಚಕರಾಗಿದ್ದರು." (The Genuine Islam Vol. I No.8)

ಒಬ್ಬ ಕ್ರೈಸ್ತ ಚರಿತ್ರಗಾರರಾಗಿದ್ದ ರೆವರೆಂಡ್ ಬೋಸ್‌ವರ್ತ್ ಸ್ಮಿಥ್ ಹೇಳುತ್ತಾರೆ: "ಧರ್ಮ ಮತ್ತು ಸರಕಾರದ ಮಾರ್ಗದರ್ಶಕ ಮತ್ತು ಆಡಳಿತಗಾರ ಎಂಬ ರೀತಿಯಲ್ಲಿ ಕಾರ್ಯವನ್ನು ನಿಭಾಯಿಸಿದ ಮುಹಮ್ಮದರು ಪೋಪ್ ಮತ್ತು ಖೈಸರ್ ರಾಜನೆಂಬ ಎರಡು ವ್ಯಕ್ತಿತ್ವವನ್ನು ಒಬ್ಬ ವ್ಯಕ್ತಿಯಲ್ಲಿ ಅಳವಡಿಸಿಕೊಂಡ ಮಹಾನುಭಾವರಾಗಿದ್ದರು. ಅವರು ಪೋಪರಾಗಿದ್ದರು; ಆದರೆ ಪೋಪರು ಹೊಂದಿರುವ ಬಾಹ್ಯ ಆಡಂಭರಗಳು ಅವರಿಗಿರಲಿಲ್ಲ. ಅವರು ಖೈಸರ್ ರಾಜರಾಗಿದ್ದರು; ಆದರೆ ಖೈಸರ್ ರಾಜನ ವೈಭವ ಮತ್ತು ದರ್ಪ ಅವರಿಗಿರಲಿಲ್ಲ. ಸೈನ್ಯವಿಲ್ಲದೆ, ಅರಮನೆಯಿಲ್ಲದೆ, ತೆರಿಗೆ ವಸೂಲಿಯಿಲ್ಲದೆ ಕೇವಲ ದೇವ ನಾಮದಲ್ಲಿ ಲೋಕದಲ್ಲಿ ಶಾಂತಿ ಮತ್ತು ವ್ಯವಸ್ಥೆ ಸ್ಥಾಪಿಸಿರುವೆನೆಂದು ಹೇಳುವ ಹಕ್ಕು ಯಾರಿಗಾದರೂ ಇರುವುದಾದರೆ ಅದು ಮುಹಮ್ಮದ್‌ರವರಿಗೆ ಮಾತ್ರವಾಗಿದೆ. ಅವರಿಗೆ ಈ ಎಲ್ಲಾ ಸಾಮಗ್ರಿ ಸರಂಜಾಮುಗಳಿಲ್ಲದೆ ಎಲ್ಲಾ ಶಕ್ತಿಗಳು ಲಭಿಸಿದ್ದುವು." (Muhammad and Muhammadanism - Page 262)

ಪ್ರಿಂಗಲ್ ಕೆನಡಿ ಹೀಗೆ ಬರೆದಿದ್ದಾರೆ: "ಸ್ಪಷ್ಟವಾಗಿ ಹೇಳುವುದಾದರೆ ಮುಹಮ್ಮದ್ ಅವರ ಕಾಲದ ಘನವೆತ್ತ ಮಹಾನುಭಾವರಾಗಿದ್ದರು. ಆಶ್ಚರ್ಯಕರವಾದ ಅವರ ವಿಜಯದ ಬಗ್ಗೆ ಮನಗಾಣಲು ಅವರ ಕಾಲದ ಸ್ಥಿತಿಗಳನ್ನು ಪರಿಶೀಲಿಸಬೇಕಾಗಿದೆ. ಯೇಸು ಕ್ರಿಸ್ತರು ಜನಿಸಿ ಐದೂವರೆ ಶತಮಾನಗಳ ನಂತರ ಅವರು ಜನ್ಮತಾಳಿದರು. ಆ ಕಾಲದಲ್ಲಿ ಗ್ರೀಸ್, ರೋಮ್ ಮತ್ತು ಅರಬ್ ಪ್ರದೇಶಗಳ ಒಂದುನೂರ ಒಂದು ದೇಶಗಳ ಎಲ್ಲಾ ಪುರಾತನ ಧರ್ಮಗಳು ತಮ್ಮ ಉಪಯುಕ್ತತೆಯನ್ನು ಕಳೆದುಕೊಂಡಿದ್ದುವು. ಅವುಗಳಿಗೆ ಬದಲಾಗಿ ರೋಮನ್ ಸರಕಾರದ ದರ್ಪವು ಒಂದು ಜೀವಂತ ವಾಸ್ತವಿಕತೆಯ ರೂಪಧಾರಣೆ ಮಾಡಿತ್ತು. ರೋಮ್ ಚಕ್ರವರ್ತಿಯ ಪ್ರಕಾರ ಆಯಾಕಾಲದ ಸರಕಾರದ ಪೂಜೆ ಮತ್ತು ಅನುಸರಣೆ ರೋಮ್ ಸರಕಾರದ ಧರ್ಮವಾಗಿ ಪರಿಣಮಿಸಿದ್ದಿತು. ಆಗ ಬೇರೆ ಧರ್ಮಗಳು ಸಹ ಇದ್ದುದು ಸತ್ಯವಾಗಿದೆ. ಆದರೆ ಜನರು ತಮ್ಮ ಧರ್ಮಗಳಿಗೆ ಪ್ರತಿಯಾಗಿ ಹೊಸ ಸಾಮಾಜಿಕ ನಡೆವಳಿಕೆಗೆ ಬದ್ಧರಾಗಿದ್ದರು. ಆದರೆ ರೋಮಿನ ಚಕ್ರಾಧಿಪತ್ಯ ಲೋಕಕ್ಕೆ ಶಾಂತಿ ದಯಪಾಲಿಸಲಿಲ್ಲ. ಪೌರಾತ್ಯ ಧರ್ಮಗಳು, ಈಜಿಪ್ಟ್, ಸಿರಿಯಾ ಮತ್ತು ಇರಾನಿನ ಅಂಧ ವಿಶ್ವಾಸಗಳು ರೋಮನ್ ಸಾಮ್ರಾಜ್ಯದ ಒಳಗೆ ನುಸುಳಲು ತೊಡಗಿದ್ದುವು ಮತ್ತು ಧಾರ್ಮಿಕ ಭಾವನೆ ಹೊಂದಿದ ಜನರ ಬಹುತೇಕ ಭಾಗವನ್ನು ಪ್ರಭಾವಿಸಿತು. ಆ ಎಲ್ಲಾ ಮತ ಧರ್ಮಗಳ ವಿನಾಶಕರ ಕೆಡುಕು ಏನಾಗಿತ್ತೆಂದರೆ ಹಲವಾರು ನಿಟ್ಟಿನಲ್ಲಿ ನಾಚಿಕೆಪಡುವ ರೀತಿಯಲ್ಲಿ ಅವು ಅಧಃಪತನ ಹೊಂದಿದ್ದುವು. ಕ್ರೈಸ್ತ ಧರ್ಮವು ನಾಲ್ಕನೆಯ ಶತಮಾನದಲ್ಲಿ ರೋಮನ್ನು ಗೆದ್ದುದರಿಂದ ರೋಮನ್ ಪ್ರಭುತ್ವವನ್ನು ತನ್ನದಾಗಿಸಿತ್ತು. ಆಗ ಕ್ರೈಸ್ತ ಧರ್ಮವು ಮೂರು ಶತಮಾನ ಹಿಂದಿನ ಪರಿಶುದ್ಧ ಉಪದೇಶಗಳನ್ನು ಕೈಬಿಟ್ಟಿತ್ತು. ಅದು ಸಂಪೂರ್ಣವಾಗಿ ಆಧ್ಯಾತ್ಮಿಕ ಮೌಲ್ಯಗಳನ್ನು ಕೈಬಿಟ್ಟು ಧನಸಂಪತ್ತನ್ನು ಪ್ರೀತಿಸುವ ಲೌಕಿಕವಾದಿ ಧರ್ಮವಾಗಿ ಪರಿವರ್ತನೆಗೊಂಡಿತ್ತು. ಅನಂತರ ಕೆಲವೇ ವರ್ಷಗಳಲ್ಲಿ ಈ ಪರಿಸ್ಥಿತಿಯಲ್ಲಿ ವಿಪ್ಲವಕರ ಪರಿವರ್ತನೆ ಉಂಟಾದುದು ಹೇಗೆ? ಇದಾಗಲು ಕಾರಣವೇನೆಂದರೆ 650 ನೇ ಇಸವಿಯ ನಂತರ ಲೋಕದ ಬಹಳ ದೊಡ್ಡ ಪ್ರದೇಶದಲ್ಲಿ ಮೊದಲಿಗಿಂತ ವ್ಯತ್ಯಾಸಗೊಂಡ ಒಂದು ಬೇರೆಯೇ ಲೋಕವು ಅಸ್ತಿತ್ವಕ್ಕೆ ಬಂದಿತು. ನಿಸ್ಸಂಶಯವಾಗಿ ಇದು ಮನುಷ್ಯಚರಿತ್ರೆಯ ಬಹಳ ಉಜ್ವಲವಾದ ಒಂದು ಅಧ್ಯಾಯವಾಗಿದೆ. ಅನಂತರ ಈ ವಿಪ್ಲವವು ಮುಂದೆ ಸಾಗಿತು.... ಮೂಲಭೂತವಾದಿ ಕ್ರೈಸ್ತರು ಮತ್ತು ಪೌರಸ್ತ್ಯ ಸಂಸ್ಕೃತಿ ಶಾಸ್ತ್ರಜ್ಞರು ವಿರುದ್ಧಾಭಿಪ್ರಾಯಗಳನ್ನು ಹೊಂದಿದ್ದರೂ ಮುಹಮ್ಮದ್ ತನ್ನ ಜೀವಿತದ ಮೂಲಕ ಲೋಕಚರಿತ್ರೆಗೆ ಉಂಟುಮಾಡಿದ ಪ್ರಭಾವಗಳಲ್ಲಿ ಯಾವುದೇ ಕೊರತೆ ಉಂಟಾಗಲಾರದು. ಅವರು ಮನುಷ್ಯರಲ್ಲಿ ಉಂಟುಮಾಡಿದ ಉನ್ನತ ಶ್ರೇಣಿಯ ಕ್ರಾಂತಿಯ ಉದಾಹರಣೆಯಾಗಿದ್ದಾರೆಂದು ಒಪ್ಪಲೇಬೇಕಾಗಿದೆ." (Arabian Society at the time of Muhammad - Pages 8,10,18,21)

ಎಸ್. ಪಿ. ಸ್ಕಾಟ್ ಬರೆಯುತ್ತಾರೆ: "ಧರ್ಮದ ಉದ್ದೇಶ ಸುಸ್ವಭಾವಗಳ ಸ್ಥಾಪನೆ, ಕೆಡುಕಿನ ನಿವಾರಣೆ, ಮನುಷ್ಯರ ಸಂತೋಷ ಮತ್ತು ನೆಮ್ಮದಿಯ ಅಭಿವೃದ್ಧಿ ಹಾಗೂ ಮನುಷ್ಯನ ಬುದ್ಧಿ ವಿಕಾಸ ಆಗಿದ್ದರೆ ಒಳ್ಳೆಯ ಕೃತ್ಯಗಳ ಪ್ರತಿಫಲ ಪರಲೋಕದಲ್ಲಿ ಒಂದು ಮಹತ್ವಪೂರ್ಣ ದಿನದಂದು ದೇವನ ಮುಂದೆ ಜನರು ಹಾಜರುಗೊಳಿಸಲ್ಪಡುವ ಅಂದು ದೊರಕುವುದು. ಹೀಗಿದ್ದರೆ ಮುಹಮ್ಮದ್ ನಿಸ್ಸಂಶಯವಾಗಿ ದೇವನ ಸಂದೇಶವಾಹಕರಾಗಿದ್ದರೆಂಬುದು ಖಂಡಿತವಾಗಿಯೂ ಆಧಾರರಹಿತ ಮತ್ತು ಸಾಕ್ಷ್ಯಾಧಾರ ವಿರಹಿತ ವಾದವಲ್ಲ." (History of the Moorish Empire in Europe - Page 126)

ರುತ್ ಕ್ರಾನ್‌ಸ್ಟನ್ ಹೀಗೆ ಬರೆಯುತ್ತಾರೆ: "ಮುಹಮ್ಮದ್ ಎಂದೂ ಯುದ್ಧ ಅಥವಾ ರಕ್ತಪಾತವನ್ನು ಸ್ವತಃ ಪ್ರಾರಂಭಿಸಲಿಲ್ಲ. ಅವರು ಮಾಡಿದ ಪ್ರತಿಯೊಂದು ಯುದ್ಧವು ಆತ್ಮರಕ್ಷಣೆಗಾಗಿತ್ತು. ಅವರು ತನ್ನನ್ನು ಸಂರಕ್ಷಿಸಲಿಕ್ಕಾಗಿ ಆ ಕಾಲದ ಆಯುಧಗಳನ್ನು ಮತ್ತು ರೀತಿನೀತಿಯನ್ನು ಬಳಸಿಕೊಂಡು ಯುದ್ಧ ಮಾಡಿದರು. ಒಂದು ಮಾತನ್ನು ನಿಖರವಾಗಿ ಹೇಳಬಹುದು: ಹದಿನಾಲ್ಕು ಕೋಟಿ ಕ್ರೈಸ್ತರಲ್ಲಿ (ಕ್ರಿ.ಶ. 1950) ಇತ್ತೀಚಿಗೆ ಒಂದು ಲಕ್ಷದ ಇಪ್ಪತ್ತು ಸಾವಿರ ಜನರನ್ನು ಒಂದು ಬಾಂಬಿನಿಂದ ಹತ್ಯೆಗೈದಿರುವಾಗ ಯಾವುದೇ ಜನಾಂಗಕ್ಕೆ ಮುಹಮ್ಮದರಂತಹ ನಾಯಕರ ವಿರುದ್ಧ ಸಂಶಯ ದೃಷ್ಟಿ ಬೀರಲು ಅರ್ಹತೆಯಿಲ್ಲ. ಮುಹಮ್ಮದ್ ಮಾಡಿದ ಯುದ್ಧಗಳಲ್ಲಿ ಅತ್ಯಂತ ಕೆಟ್ಟ ಪರಿಸ್ಥಿತಿಯಲ್ಲಿ ಕೇವಲ ಐನೂರು ಅಥವಾ ಆರುನೂರು ಜನರು ಮಾತ್ರ ರಣರಂಗದಲ್ಲಿ ಹತರಾಗಿದ್ದರು. ಏಳನೆಯ ಶತಮಾನದ ಅಂಧಕಾರದ ಕಾಲದಲ್ಲಿ, ಒಬ್ಬರು ಇನ್ನೊಬ್ಬರ ರಕ್ತ ಕುಡಿಯುವ ದಾಹವನ್ನು ಹೊಂದಿದ್ದ ಆ ಕಾಲದಲ್ಲಿ, ಪರಸ್ಪರ ಉಂಟುಮಾಡಿದ ನಾಶಕ್ಕೆ ಹೋಲಿಸಿದರೆ ಅರಬ್ ದೇಶದ ಪ್ರವಾದಿಯ ಕೈಯಿಂದ ಆದ ನಾಶವನ್ನು ಇಂದಿನ ಇಪ್ಪತ್ತನೆಯ ಶತಮಾನದ ನಾಶಗಳಿಗೆ ಹೋಲಿಸಿ ಹೇಳುವುದು ತಿಳಿಗೇಡಿತನವಲ್ಲದೆ ಬೇರೇನೂ ಅಲ್ಲ. ಇನ್‌ಕ್ವಿಝಿಷನ್ ಮತ್ತು ಕ್ರುಸೇಡ್ ಯುದ್ಧಗಳ ಕಾಲದಲ್ಲಿ ಸಂಭವಿಸಿದ ಹತ್ಯೆಗಳನ್ನು ವಿವರಿಸಲು ನಾನು ಬಯಸುವುದಿಲ್ಲ. ಆ ಕಾಲದ ಕ್ರೈಸ್ತ ಹೋರಾಟಗಾರರು ಹೀಗೆ ದಾಖಲಿಸಿರುವರು:

ಆ ಧರ್ಮರಹಿತ ಮುಸ್ಲಿಮರ ತುಂಡರಿಸಿದ ಶವಗಳ ಮಧ್ಯೆ ಮೊಣಕಾಲು ಮಟ್ಟದ ರಕ್ತದ ಹೊಳೆಯಲ್ಲಿ ನಾವು ಕುಣಿದಾಡುತ್ತಿದ್ದೆವು."(World Faith- Page 155)

ಡೇವನ್‌ಪೋರ್ಟ್ ಹೀಗೆಯೂ ಬರೆದಿದ್ದಾರೆ: "ಒಂದು ಸಂಗತಿಯನ್ನು ದೃಢವಾಗಿಯೂ ಸತ್ಯವಾಗಿಯೂ ಹೇಳಬಹುದು. ಮುಸ್ಲಿಮ್ ಹೋರಾಟಗಾರರ ಮತ್ತು ತುರ್ಕಿಯವರ ಸ್ಥಾನದಲ್ಲಿ ಪಾಶ್ಚಿಮಾತ್ಯ ರಾಜರು ಅಧಿಕಾರದಲ್ಲಿರುತ್ತಿದ್ದರೆ ಮುಸ್ಲಿಮರು ಕ್ರೈಸ್ತರೊಂದಿಗೆ ವರ್ತಿಸಿದ ರೀತಿಯ ಸೌಹಾರ್ದಪೂರ್ಣ ವರ್ತನೆಯನ್ನು ಅವರು ಮುಸ್ಲಿಮರೊಡನೆ ಮಾಡುತ್ತಿರಲಿಲ್ಲ. ಏಕೆಂದರೆ ಕ್ರೈಸ್ತ ಧರ್ಮವು ಅನ್ಯಧರ್ಮಗಳನ್ನು ಅತ್ಯಂತ ದ್ವೇಷದಿಂದ ಕಾಣುತ್ತಿದ್ದು ಅವರನ್ನು ತಮ್ಮೊಂದಿಗಿರುವ ಧಾರ್ಮಿಕ ಭಿನ್ನಾಭಿಪ್ರಾಯಗಳ ಕಾರಣ ದೌರ್ಜನ್ಯಕ್ಕೆ ಗುರಿಪಡಿಸುತ್ತದೆ." (An Apology for Muhammad and the Quran)

ಅಹ್ಮದಿಯಾ ಜಮಾಅತಿನ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ (ಅಲೈಹಿಸ್ಸಲಾಮ್) ಹೇಳುತ್ತಾರೆ:

"ಜನರನ್ನು ಬಲಾತ್ಕಾರದಿಂದ ಮುಸ್ಲಿಮರನ್ನಾಗಿ ಮಾಡಬೇಕೆಂದು ಪವಿತ್ರ ಖುರ್‌ಆನಿನಲ್ಲಿದೆ ಎಂದು ಯಾರೋ ಆಕ್ಷೇಪಿಸಿರುವನು. ಈ ವ್ಯಕ್ತಿಗೆ ಸ್ವತಃ ಬುದ್ಧಿಯಾಗಲೀ ಜ್ಞಾನವಾಗಲೀ ಇಲ್ಲವೆಂದು ತಿಳಿಯುತ್ತದೆ. ಇದು ಪಾದರಿಗಳ ಆಕ್ಷೇಪವಾಗಿದೆ. ದ್ವೇಷಾಸೂಯೆಭರಿತರಾದ ಪಾದರಿಗಳು ತಮ್ಮ ಸ್ವಭಾವ ಪ್ರಕಾರ ಕೇವಲ ಸುಳ್ಳು ಸೃಜಿಸಿ ತಮ್ಮ ಗ್ರಂಥಗಳಲ್ಲಿ, ಬಲಾತ್ಕಾರದಿಂದ ಜನರನ್ನು ಮುಸ್ಲಿಮರನ್ನಾಗಿ ಮಾಡುವ ಆಜ್ಞೆ ಇಸ್ಲಾಮಿನಲ್ಲಿದೆ ಎಂದು ಬರೆದರು. ಆದುದರಿಂದ ಈ ವ್ಯಕ್ತಿ ಮತ್ತು ಆತನ ಬೇರೆ ಸಹೋದರರು ಯಾವುದೇ ಪರಿಶೀಲನೆ ಮಾಡದೆ ಪಾದರಿಗಳ ಸುಳ್ಳು ಹೇಳಿಕೆಗಳನ್ನು ಇಸ್ಲಾಮಿನ ವಿರುದ್ಧ ಆಕ್ಷೇಪಗಳ ರೂಪದಲ್ಲಿ ಮುಂದಿರಿಸಿದರು. ಪವಿತ್ರ ಖುರ್‌ಆನಿನಲ್ಲಿ ಸ್ಪಷ್ಟವಾಗಿ ಹೀಗೆ ಬರೆದಿದೆ. 'ಧರ್ಮದಲ್ಲಿ ಯಾವುದೇ ರೀತಿಯ ಬಲಾತ್ಕಾರವಿಲ್ಲ. ಖಂಡಿತವಾಗಿಯೂ ಸನ್ಮಾರ್ಗವು ದುರ್ಮಾರ್ಗದಿಂದ ಭಿನ್ನವಾಗಿದೆ.' (2:257) ಧರ್ಮದ ವಿಷಯದಲ್ಲಿ ಬಲಾತ್ಕಾರವಿಲ್ಲವೆಂದು ಇಷ್ಟು ಸ್ಪಷ್ಟವಾಗಿ ಪವಿತ್ರ ಖುರ್‌ಆನ್ ಪ್ರಸ್ತಾಪಿಸುತ್ತಾ ಇರುವಾಗ ಈ ಜನರು ಆಕ್ಷೇಪಿಸುವುದು ಆಶ್ಚರ್ಯಕರವಾಗಿದೆ. ಅವರ ಹೃದಯ ಶತ್ರುತ್ವ ಮತ್ತು ಅಸೂಯೆಯಿಂದ ಕಪ್ಪಾಗುತ್ತಿದೆ. ಅವರು ಅಲ್ಲಾಹನ ವಚನಗಳ ಕುರಿತು ಅನ್ಯಾಯದಿಂದ ಆಕ್ಷೇಪ ಮಾಡುತ್ತಾರೆ.

"ನಾವು ಇನ್ನೊಂದು ವಚನವನ್ನು ನಿಮ್ಮ ಮುಂದಿರಿಸಿ ನ್ಯಾಯವಂತರಿಂದ ನ್ಯಾಯವನ್ನು ಬಯಸುತ್ತೇವೆ. ಅವರು ದೇವನಿಗೆ ಹೆದರಿ ನಮಗೆ ತಿಳಿಸಲಿ. ಪವಿತ್ರ ಖುರ್‌ಆನ್‌ನಲ್ಲಿರುವ ಈ ವಚನದಿಂದ ಬಲಾತ್ಕಾರ ಸಾಬೀತಾಗುತ್ತದೆಯೋ ಅಥವಾ ಬಲಾತ್ಕಾರವನ್ನು ನಿಷಿದ್ಧಗೊಳಿಸಿದುದು ಸಾಬೀತಾಗುತ್ತದೆಯೋ ಎಂಬುದನ್ನು. ಪವಿತ್ರ ಖುರ್‌ಆನ್ ವಚನ ಹೀಗಿದೆ: 'ಬಹುದೇವಾರಾಧಕರಲ್ಲಿ ಯಾರಾದರೂ ನಿನ್ನೊಡನೆ ಅಭಯ ಯಾಚಿಸಿದರೆ, ಅವನಿಗೆ ಆಶ್ರಯ ನೀಡು. ಹಾಗೆ ಅವನು ಅಲ್ಲಾಹನ ವಚನ ಆಲಿಸುವಂತಾಗಲಿ. ಅನಂತರ ಅವನನ್ನು ಅವನ ಸುರಕ್ಷಿತ ಸ್ಥಳಕ್ಕೆ ತಲಪಿಸು. ಇದು (ಈ ರಿಯಾಯಿತಿ) ಅವರು ತಿಳುವಳಿಕೆಯಿಲ್ಲದ ಜನರಾದುದರಿಂದಾಗಿದೆ.' (9:6)

"ಪವಿತ್ರ ಖುರ್‌ಆನ್ ಬಲಾತ್ಕಾರವನ್ನು ಅಂಗೀಕರಿಸಿರುತ್ತಿದ್ದರೆ ಈ ಆಜ್ಞೆಯನ್ನು ನೀಡುತ್ತಿರಲಿಲ್ಲವೆಂದು ಸ್ಪಷ್ಟವಾಗುತ್ತದೆ. ಪವಿತ್ರ ಖುರ್‌ಆನ್ ಆಲಿಸಲು ಇಷ್ಟವಿರುವವರಿಗೆ ಅದನ್ನು ಓದಿ ಹೇಳಿರಿ. ಪವಿತ್ರ ಖುರ್‌ಆನ್ ಆಲಿಸಿದ ನಂತರ ಸಹ ಆಲಿಸಿದವ ಮುಸ್ಲಿಮನಾಗದಿದ್ದರೆ ಅವನನ್ನು ಸುರಕ್ಷಿತ ಸ್ಥಳಕ್ಕೆ ತಲಪಿಸಿರಿ ಎಂದು ಹೇಳುವುದಕ್ಕೆ ಪ್ರತಿಯಾಗಿ ಅಂತಹ ಅವಿಶ್ವಾಸಿಯನ್ನು ಸ್ವಾಧೀನಕ್ಕೆ ತೆಗೆದುಕೊಂಡರೆ ಕೂಡಲೇ ಮುಸ್ಲಿಮನನ್ನಾಗಿ ಮಾಡಿರಿ ಎಂದು ಪವಿತ್ರ ಖುರ್‌ಆನ್ ಆಜ್ಞಾಪಿಸುತ್ತಿತ್ತು." (ಚಶ್ಮಯೆ ಮಅರಿಫತ್ - ರೂಹಾನಿ ಖಝಾಯಿನ್ ಸಂಪುಟ 23, ಪುಟ 232 -233)

ಪೋಪ್ ಉಲ್ಲೇಖಿಸಿದ ಇನ್ನೊಂದು ಆಕ್ಷೇಪವೇನೆಂದರೆ, ಇಸ್ಲಾಮಿನ ದೇವ ಎಂತಹ ದೇವನೆಂದರೆ, ಅವನನ್ನು ಬುದ್ಧಿಯು ಅಂಗೀಕರಿಸಲಾರದು ಎಂದಾಗಿದೆ.

ಆದರೆ ಇಸ್ಲಾಮ್ ಎಂತಹ ದೇವನ ಬಗ್ಗೆ ಹೇಳುತ್ತದೆ ಎಂದರೆ ಆ ದೇವನು ತನ್ನ ಅಸ್ತಿತ್ವವನ್ನು ಅಂಗೀಕರಿಸಲಿಕ್ಕಾಗಿ ಜನರನ್ನು ಬುದ್ಧಿಯ ಕಡೆಗೆ ಆಹ್ವಾನಿಸುತ್ತಾನೆ. ದೇವನು ಭೂಮ್ಯಾಕಾಶಗಳನ್ನು ಸೃಷ್ಟಿಸಿದವನೆಂದೂ ಅವನು ಅವುಗಳ ಒಡೆಯನೆಂದೂ ಅಂಗೀಕರಿಸುವುದಾದರೆ ಅವನು ಎಲ್ಲಾ ಶಕ್ತಿಗಳ ಒಡೆಯನೆಂದೂ ಅಂಗೀಕರಿಸಬೇಕು. ದೇವನ ಬಗ್ಗೆ ಇಸ್ಲಾಮಿನ ನಿಲುವನ್ನು ಬುದ್ಧಿ ಉಪಯೋಗಿಸಿ ಅಧ್ಯಯನ ಮಾಡಬೇಕೇ ಹೊರತು ಅಪಹಾಸ್ಯ ಮಾಡಬಾರದು.

ಅಹ್ಮದಿಯಾ ಜಮಾಅತಿನ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್<sup>(ಅ)</sup> ಹೇಳುತ್ತಾರೆ: "ನಿಸರ್ಗ ನಿಯಮಗಳ ದರ್ಪಣಗಳ ಮೂಲಕ ಮತ್ತು ಪ್ರಕೃತಿಯ ಹಾಳೆಗಳ ಮೂಲಕ ದೃಶ್ಯನಾಗುವ ದೇವನೇ ಇಸ್ಲಾಮಿನ ದೇವನಾಗಿದ್ದಾನೆ. ಇಸ್ಲಾಮ್ ಯಾವುದೇ ಹೊಸ ದೇವನನ್ನು ನಮ್ಮ ಮುಂದಿರಿಸಿಲ್ಲ. ಮನುಷ್ಯನ ಹೃದಯದ ಬೆಳಕು, ಮನುಷ್ಯನ ಮನಸ್ಸಾಕ್ಷಿ ಮತ್ತು ಭೂಮ್ಯಾಕಾಶಗಳು ಯಾವ ದೇವನನ್ನು ನಮ್ಮ ಮುಂದಿರಿಸುತ್ತದೆಯೋ ಅದೇ ದೇವನನ್ನು ಇಸ್ಲಾಮ್ ನಮಗೆ ತಿಳಿಸಿಕೊಡುತ್ತದೆ." (ತಬ್ಲೀಗೆ ರಿಸಾಲತ್ ಸಂಪುಟ 6, ಪುಟ 15)

ಅವರು ಹೀಗೆಯೂ ಬರೆದಿರುತ್ತಾರೆ:

"ಪವಿತ್ರ ಖುರ್‌ಆನ್ ಅಲ್ಲಾಹನ ಕುರಿತು ಹೀಗೆ ವಿವರಿಸಿದೆ:

"ಆರಾಧನೆಗೂ ಅನುಸರಣೆಗೂ ಅರ್ಹನಾಗಿರುವ, ಭಾಗೀದಾರನಿಲ್ಲದ ಏಕನಾಗಿರುವವನೇ ದೇವನು." (59:23)

"ಈ ವಚನದಲ್ಲಿ ದೇವನಿಗೆ ಭಾಗೀದಾರನಿಲ್ಲವೆಂದು ಹೇಳಿರುವುದೇಕೆಂದರೆ, ಅವನು ನಿಸ್ತುಲನೂ ಏಕನೂ ಅಲ್ಲವೆಂದಾದರೆ ಅವನ ಶಕ್ತಿ ಒಂದೊಮ್ಮೆ ಭಾಗೀದಾರನಿಗೆ ಅಧೀನವಾಗಿ ಅವನ ದೇವತ್ವ ನಷ್ಟಹೊಂದಲು ಹೇತುವಾಗುವುದು. ಮಾತ್ರವಲ್ಲ, ಅವನ ಹೊರತು ಆರಾಧನೆಗರ್ಹನು ಇನ್ನಾರೂ ಇಲ್ಲವೆಂದು ಹೇಳಿರುವುದು ಅವನು ಸಕಲಗುಣ ಸಂಪೂರ್ಣನೆಂದು ಸ್ಪಷ್ಟೀಕರಿಸಲಿಕ್ಕಾಗಿದೆ. ಗುಣವೈಶಿಷ್ಟ್ಯಗಳ ಧಾರಾಳತ್ವವನ್ನು ಆಧಾರವಾಗಿರಿಸಿ ಸೃಷ್ಟಿಗಳಲ್ಲಿ ಒಂದನ್ನು ದೇವರೆಂದು ಆರಿಸಲು ಭಾವಿಸುವುದಾದರೆ, ದೇವರಿಗಿರಬೇಕಾದ ಪರಮ ಶ್ರೇಷ್ಠ ಗುಣಗಳು ಆ ಸೃಷ್ಟಿಯಲ್ಲಿವೆಯೆಂದು ಊಹಿಸುವುದಾದರೆ, ಅದೆಂದಿಗೂ ಸಕಲ ಶ್ರೇಷ್ಠಗುಣಗಳಿಂದಲೂ ವಿಶೇಷಣಗಳಿಂದಲೂ ವಿಭೂಷಿತನಾಗಿರುವ ಸ್ವಯಂ

ಪರಿಪೂರ್ಣನೂ ಅತ್ಯುನ್ನತನೂ ಆಗಿರುವ ನಿಜವಾದ ದೇವನಿಗೆ ಸಮಾನವಾಗಿರಲಾರದು. ಸೃಷ್ಟಿಕರ್ತನಿಗೆ ಮಾತ್ರ ಸಲ್ಲಿಸಲ್ಪಡಬೇಕಾದ ಆರಾಧನಾದಿ ಭಕ್ತಿಶ್ರದ್ಧೆಗಳಿಗೆ ಸೃಷ್ಟಿಗಳಲ್ಲಿ ಯಾರನ್ನಾದರೂ ಪಾಲುಗಾರನನ್ನಾಗಿ ಮಾಡುವುದು ಬಹು ದೊಡ್ಡ ಅನ್ಯಾಯವಾಗಿದೆ."

ಇಸ್ಲಾಮ್ ಧರ್ಮ ಎಲ್ಲ ವಿಧ ಬಹುದೇವಾರಾಧನೆಯಿಂದ ಮುಕ್ತವಾಗಿದೆ. ಕ್ರೈಸ್ತರಾದರೋ ದೇವನ ಓರ್ವ ಸಂದೇಶವಾಹಕರಿಗೆ ದೇವರ ಸ್ಥಾನಕೊಟ್ಟು ಅನ್ಯಾಯ ಮಾಡುತ್ತಿದ್ದಾರೆ.

ಮೇಲೆ ಸೂಚಿಸಿದ ಪವಿತ್ರ ಖುರ್‌ಆನ್ ವಾಕ್ಯದಲ್ಲಿ ದೇವನ ಕುರಿತು "ಆಲಿಮುಲ್‌ಗೈಬ್" ಎಂದು ಸಹ ಹೇಳಲಾಗಿದೆ. ಎಂದರೆ ಅವನು "ತನ್ನ ಅಸ್ತಿತ್ವವನ್ನು ತಾನು ಮಾತ್ರ ತಿಳಿಯುವ ಅಂತರ್ಯಾಮಿ" ಆಗಿದ್ದಾನೆ. ಅವನ ಅಸ್ತಿತ್ವವನ್ನು ಪರಿಮಿತವಾದ ಮನುಷ್ಯ ಶಕ್ತಿಗೆ ಪೂರ್ಣವಾಗಿ ಗ್ರಹಿಸಲು ಸಾಧ್ಯವಿಲ್ಲ. ಸೂರ್ಯ, ಚಂದ್ರ ಮತ್ತಿತರ ದೇವ ಸೃಷ್ಟಿಗಳ ಸ್ವರೂಪವನ್ನು ತಿಳಿದುಕೊಳ್ಳಲು ನಮಗೆ ಸಾಧ್ಯವಿದೆ. ಆದರೆ ಸೃಷ್ಟಿಕರ್ತನಾದ ದೇವನ ಸತ್ತೆಯನ್ನು ಸಮಗ್ರವಾಗಿ ಗ್ರಹಿಸಲಿಕ್ಕೆ ಸಾಧ್ಯವಿಲ್ಲ.

ಮೇಲಿನ ವಾಕ್ಯದಲ್ಲಿ ದೇವನನ್ನು "ಆಲಿಮುಶ್ಶಹಾದತ್" ಎಂದು ಸಹ ಹೇಳಲಾಗಿದೆ. ಎಂದರೆ "ತನಗೆ ಯಾವುದೂ ಗೋಪ್ಯವಾಗಿರದೆ ಸಕಲವನ್ನೂ ಸ್ಪಷ್ಟವಾಗಿ ತಿಳಿಯುವವನು". ಸೃಷ್ಟಿಸಲಾದ ವಸ್ತುಗಳಲ್ಲಿ ಯಾವುದಾದರೊಂದನ್ನು ಅವನು ತಿಳಿಯದಿರುವುದು ಅವನ ದೇವತ್ವಕ್ಕೆ ಅನುಯೋಜ್ಯವಾಗಿರುವುದಿಲ್ಲ. ಅವನು ಪ್ರಪಂಚದ ಕಣಕಣಗಳನ್ನು ಸೂಕ್ಷ್ಮವಾಗಿ ಕಾಣುತ್ತಾನೆ. ಆದರೆ ಮನುಷ್ಯನಿಗೆ ಅದು ಸಾಧ್ಯವಿಲ್ಲ. ಈ ಪ್ರಪಂಚ ವ್ಯವಸ್ಥೆಯ ಅಂತ್ಯ ಯಾವಾಗ ಸಂಭವಿಸುವುದೆಂದು ದೇವನಿಗೆ ಹೊರತು ಬೇರೆ ಯಾರಿಗೂ ತಿಳಿಯದು. ಅವನು ಎಲ್ಲಾ ವಸ್ತುಗಳ ಕಾಲನಿರ್ಣಯವನ್ನು ಪೂರ್ಣವಾಗಿ ತಿಳಿಯುತ್ತಾನೆ.

ದೇವನ ಇನ್ನೊಂದು ವಿಶೇಷಣವಾಗಿ "ಹೂವರ್ರಹ್ಮಾನ್" ಎಂದು ಹೇಳಲಾಗಿದೆ. ಅಂದರೆ, ಅವನು ಸಕಲ ಜೀವ ಜಾಲಗಳನ್ನು ಸೃಷ್ಟಿಸುವುದಕ್ಕೆ ಮುಂಚಿತವಾಗಿ ಅವುಗಳ ಸುಖ ಸೌಕರ್ಯಗಳಿಗೆ ಆವಶ್ಯಕವಾದ ಸಕಲ ಸಾಧನಗಳನ್ನು ಯಾವುದೇ ಕರ್ಮದ ಪ್ರತಿಫಲವಾಗಿಯಲ್ಲದೆ, ತನ್ನ ಅಪಾರ ದಯೆಯಿಂದ ಸಿದ್ಧಪಡಿಸಿದವನಾಗಿದ್ದಾನೆ. ನಮ್ಮ ಸೃಷ್ಟಿಗೂ ಕರ್ಮಾನುಷ್ಠಾನಕ್ಕೂ ಮೊದಲೇ ಅವನು ನಮ್ಮ ಅಗತ್ಯಕ್ಕಾಗಿ ಸೂರ್ಯ ಗೋಳವನ್ನೂ ವಿಶಾಲ ಭೂಮಿಯನ್ನೂ ಅದರಲ್ಲಡಕವಾದ ಅಸಂಖ್ಯಾತ ಅನುಗ್ರಹ ವಸ್ತುಗಳನ್ನೂ ತಯಾರಿಸಿಟ್ಟು ತನ್ನ ನಿಸ್ಸೀಮ ದಯೆಯನ್ನು ಪ್ರಕಟಿಸಿದ್ದಾನೆ. ಅವನ ಈ ಅತೀವ ದಯಾಗುಣಕ್ಕೆ "ರಹ್ಮಾನಿಯ್ಯತ್" ಎಂದೂ ಆ ಸರ್ವದಾತನನ್ನು "ಅರ್ರಹ್ಮಾನ್" ಅಂದರೆ "ದಯಾವಂತ" ಎಂದೂ ಪವಿತ್ರ ಖುರ್‌ಆನ್ ಹೇಳುತ್ತದೆ.

ದೇವನ ಇನ್ನೊಂದು ವಿಶೇಷಣ "ಅರ್ರಹೀಮ್" ಎಂದಾಗಿದೆ. ಎಂದರೆ ಸತ್ಕರ್ಮಗಳಿಗೆ ಸತ್ಫಲಗಳನ್ನು ನೀಡುವವನೂ ಯಾರ ಪ್ರಯತ್ನವನ್ನು ಸಹ ನಿಷ್ಫಲಗೊಳಿಸದವನೂ ಆದ ಕಾರುಣ್ಯ ನಿಧಿ. ದೇವನ ಈ ಕರುಣಾ ಪ್ರಕಟಣೆಗೆ "ರಹೀಮಿಯ್ಯತ್" ಎಂದೂ ಆ ಕರುಣಾಸಾಗರನನ್ನು "ಅರ್ರಹೀಮ್" ಎಂದೂ ಹೇಳಲಾಗಿದೆ.

ಪವಿತ್ರ ಖುರ್‌ಆನ್ ದೇವನ ಕುರಿತು ಹೇಳುವ ಇನ್ನೊಂದು ಗುಣ "ಮಾಲಿಕಿ ಯೌಮುದ್ದೀನ್" ಎಂದಾಗಿದೆ. (1:4) ಅವನು ಪ್ರತಿಫಲ ನೀಡಲ್ಪಡುವ ದಿನದ ಒಡೆಯನಾಗಿರುವನು. ಎಂದರೆ ಕರ್ಮಕ್ಕನುಸಾರವಾದ ಶಿಕ್ಷೆ ಮತ್ತು ರಕ್ಷೆಯ ಸರ್ವಾಧಿಕಾರವನ್ನು ಅವನು ಹೊಂದಿರುವನು. ಸರ್ವಲೋಕದ ನ್ಯಾಯಧೀಶ ಅವನೇ ಆಗಿದ್ದಾನೆ. ಅವನು ತನಗೆ ಸೃಷ್ಟಿಗಳೊಂದಿಗೆ ಯಾವುದೇ ಸಂಬಂಧವಿಲ್ಲದಂತೆ ಭೂಮ್ಯಾಕಾಶಗಳ ಅಧಿನಾಯಕತ್ವವನ್ನು ಇನ್ನಾರಿಗಾದರೂ ಒಪ್ಪಿಸಿಲ್ಲ. ಹಾಗೆಯೇ ಸ್ವತಂತ್ರವಾಗಿ ಲೋಕದಲ್ಲಿ ಶಿಕ್ಷೆ ಮತ್ತು ರಕ್ಷೆ ನೀಡುವ ಅಧಿಕಾರವನ್ನೂ ಯಾರಿಗೂ ನೀಡಿಲ್ಲ." (ಇಸ್ಲಾಮೀ ಉಸೂಲ್ ಕೀ ಫಿಲಾಸಫಿ)

ದೇವನಿಗೆ ಯಾವುದೇ ಆವಶ್ಯಕತೆಗಳಿಲ್ಲ. ಅವನು ಎಲ್ಲಾ ಶಕ್ತಿಗಳ ಒಡೆಯನಾಗಿದ್ದಾನೆ. ಒಂದು ಸಲಹೆ ನೀಡುವ ಸಭೆ ರಚಿಸುವ ಆವಶ್ಯಕತೆ ದೇವನಿಗಿಲ್ಲ. ಪೋಪ್ ಹೇಳುತ್ತಾರೆ: "ಇಸ್ಲಾಮಿನಲ್ಲಿ ದೇವನ ಕುರಿತು ಇರುವ ಕಲ್ಪನೆಯನ್ನು ಬುದ್ಧಿಯು ಅಂಗೀಕರಿಸುವುದಿಲ್ಲ ಎಂದು. ಆದರೆ ನಿಜವಾಗಿಯೂ ಬುದ್ಧಿ ಅಂಗೀಕರಿಸದೆ ಇರುವುದು ಮೂರು ದೇವರುಗಳ ಕಲ್ಪನೆಯನ್ನಾಗಿದೆ. ಮೂವರಲ್ಲಿ ಒಬ್ಬ ಭಿನ್ನಾಭಿಪ್ರಾಯ ಹೊಂದಿದರೆ ಆಗ ತೀರ್ಮಾನ ಮಾಡುವುದಕ್ಕೆ ಕಷ್ಟವಾಗುವುದು.

ಅಹ್ಮದಿಯಾ ಜಮಾಅತಿನ ಸ್ಥಾಪಕರಾದ ಹಝ್ರತ್ ಮಸೀಹ್ ಮೌಊದ್ (ಅಲೈಹಿಸ್ಸಲಾಮ್) ಪುನಃ ಹೇಳುತ್ತಾರೆ: "ದೇವರ ಮಹಿಮೆಗಳಲ್ಲಿ ಒಂದು "ಅಲ್ ಮಲಿಕುಲ್ ಖುದ್ದೂಸ್" ಎಂದಾಗಿದೆ. (59:24) ಎಂದರೆ ಎಲ್ಲಾ ನ್ಯೂನತೆಗಳಿಂದ ಮುಕ್ತನಾಗಿರುವ ಪರಿಶುದ್ಧನಾದ ರಾಜ. ಲೌಕಿಕ ಅರಸೊತ್ತಿಗೆಯಾದರೋ ದೋಷರಹಿತವೆಂದಾಗಲೀ ಅನ್ಯೂನವೆಂದಾಗಲೀ ಹೇಳಲಾಗುವುದಿಲ್ಲ. ಒಂದು ರಾಜ್ಯದ ಪ್ರಜೆಗಳೆಲ್ಲರೂ ಆ ರಾಜ್ಯವನ್ನು ಬಿಟ್ಟು ಬೇರೆಡೆಗೆ ವಲಸೆ ಹೋದರೆ ಆ ತ್ಯಜಿಸಲ್ಪಟ್ಟ ರಾಜ್ಯದ ರಾಜನಿಗೆ ಏನು ರಾಜತನ ಬಾಕಿಯಾಗುತ್ತದೆ? ಅಥವಾ ಭಯಂಕರವಾದ ಕ್ಷಾಮಬಾಧೆಯ ಕಾರಣದಿಂದ ಪ್ರಜೆಗಳೆಲ್ಲ ರಾಜ್ಯದ ತೆರಿಗೆ ತೆರಲು ಅಶಕ್ತರಾದರೆ ಆ ರಾಜ್ಯದ ರಾಜನ ಸ್ಥಿತಿಯೇನಾದೀತು? ಹಾಗೆಯೇ, ಪ್ರಜೆಗಳೆಲ್ಲ ರಾಜನಿಗೆದುರು ದಂಗೆಯೆದ್ದು ಆತನ ರಾಜತನಕ್ಕೆ ಸವಾಲೊಡ್ಡಿದ್ದರೆ, ಆ ರಾಜ ತನ್ನ ಅಧಿಕಾರವನ್ನು ಉಳಿಸಿಕೊಳ್ಳುವ ಬಗ್ಗೆ ಹೇಗೆ? ಆದರೆ ಸಮರ್ಥನಾದ, ಸರ್ವಾಧಿನಾಥನಾದ ದೇವನ ರಾಜತನ ಈ ರೀತಿ ಕ್ಷಣಭಂಗುರವಲ್ಲ. ಅವನ ಆಡಳಿತೆ ಲೌಕಿಕ ರಾಜಾಧಿಕಾರದಿಂದ ಸಂಪೂರ್ಣ ಭಿನ್ನವಾದುದು. ಅವನಾದರೋ ಸಮಸ್ತ ಬ್ರಹ್ಮಾಂಡವನ್ನು ಒಂದೇ ಕ್ಷಣದಲ್ಲಿ ನಾಶಪಡಿಸಲಿಕ್ಕೂ ಪುನಃ ಹೊಸದಾಗಿ ಸೃಷ್ಟಿ ಜಾಲಗಳನ್ನು ಉಂಟುಮಾಡಲಿಕ್ಕೂ ಶಕ್ತನಾದ ಕರ್ತನಾಗಿದ್ದಾನೆ. ಅವನು ಹೀಗೆ ಸರ್ವಶಕ್ತನಾದ ಸೃಷ್ಟಿಕರ್ತನಲ್ಲದಿರುತ್ತಿದ್ದರೆ ನ್ಯಾಯ ಪಾಲಿಸಿ, ತನ್ನ ಆಡಳಿತೆಯನ್ನು ನಡೆಸಲು ಅವನಿಗೆ ಸಾಧ್ಯವಾಗುತ್ತಿರಲಿಲ್ಲ. ಏಕೆಂದರೆ, ಹೊಸದಾಗಿ ಸೃಷ್ಟಿಸಲು ಅವನು ಶಕ್ತನಲ್ಲವೆಂದಾದರೆ ಅವನು ಸೃಷ್ಟಿಲೋಕಕ್ಕೆ ಒಮ್ಮೆ ಮುಕ್ತಿಯನ್ನು ನೀಡಿದ ನಂತರ ಆ ಮೊದಲ ಸೃಷ್ಟಿಯನ್ನೇ ಇನ್ನೊಮ್ಮೆ ಈ ಲೋಕಕ್ಕೆ ಕಳುಹಿಸಲಿಕ್ಕಾಗಿ ಅವರೆಡೆಯಿಂದ ಅನ್ಯಾಯದ ರೀತಿಯಲ್ಲಿ ಅವರ ಮುಕ್ತಿಯನ್ನು ವಾಪಾಸು ಪಡೆಯಲು ನಿರ್ಬಂಧಿತನಾಗುವನು. ಈ ಕ್ರಮ ಅವನ ದೇವತ್ವಕ್ಕೆ ಕಳಂಕಕಾರಿಯಾಗಿದೆ; ಮಾತ್ರವಲ್ಲ ಇದರಿಂದ ಅವನ ರಾಜತನ ಭೌತಿಕ ರಾಜತನದಂತೆಯೇ ನ್ಯೂನತೆಯಿಂದ ಕೂಡಿದುದೆಂದು ವ್ಯಕ್ತವಾಗುವುದು. ರಾಜ್ಯಭಾರಕ್ಕಾಗಿ ಆಡಳಿತ ಅಧಿಕಾರಿಗಳು ನಿರ್ಮಿಸುವ

ನಿಯಮಗಳು ಯಾವಾಗಲೂ ಕುಂದು ಕೊರತೆಗಳಿಂದ ಕೂಡಿರುತ್ತವೆ. ಅವರು ಸ್ವಾರ್ಥ ಉದ್ದೇಶಗಳನ್ನು ಸಾಧಿಸಲು ಅನ್ಯಾಯದ ಮಾರ್ಗವನ್ನು ಅವಲಂಬಿಸಬೇಕೆಂದು ತೋರುವಾಗ ಸಂಕೋಚಪಡದೆ ಅವನ್ನೇ ರಾಜ್ಯನೀತಿ ಎಂದು ಪರಿಗಣಿಸುತ್ತಾರೆ. ಉದಾಹರಣೆಗೆ, ಒಂದು ಹಡಗನ್ನು ರಕ್ಷಿಸಲು ಒಂದು ದೋಣಿಯನ್ನು ಅದರ ನಾವಿಕರ ಸಹಿತ ನಾಶಮಾಡಲು ಈ ರಾಜ ನಿಯಮಗಳು ಅನುಮತಿ ಕೊಡುತ್ತವೆ. ದೇವನಿಗಾದರೆ ಇಂತಹ ಸಂದಿಗ್ಧ ಕ್ರಮದ ಆವಶ್ಯಕತೆ ಇಲ್ಲ. ಒಟ್ಟಾರೆ ಹೇಳುವುದಾದರೆ, ದೇವನು ಸರ್ವಶಕ್ತನೂ ನಾಸ್ತಿಯಿಂದ ಸಕಲವನ್ನು ಸೃಷ್ಟಿಸುವವನೂ ಅಲ್ಲವಾಗಿದ್ದರೆ ಬಲಹೀನರಾದ ರಾಜರಂತೆ ಅವನು ಸಹ ತನ್ನ ಶಕ್ತಿಯನ್ನು ತೋರ್ಪಡಿಸುವುದರ ಬದಲಿಗೆ ಅನ್ಯಾಯ ಮಾರ್ಗವನ್ನು ಕೈಗೊಳ್ಳಬೇಕಾಗುತ್ತಿತ್ತು. ಅಥವಾ ನೀತಿ ನಿಯಮ ಪಾಲನೆಗಾಗಿ ತನ್ನ ದೇವತ್ವವನ್ನೇ ಕೈಬಿಡಬೇಕಾಗುತ್ತಿತ್ತು. ಆದರೆ ದೇವನ ಶಕ್ತಿ ಎಂಬ ಹಡಗು ಪೂರ್ಣ ಪ್ರಭಾವದಿಂದ ನೀತಿ ಮತ್ತು ನ್ಯಾಯದ ಸಮುದ್ರದಲ್ಲಿ ಸಂಚರಿಸುತ್ತಾ ಇರುತ್ತದೆ.

ದೇವನ ಮತ್ತೊಂದು ಹೆಸರು 'ಅಸ್ಸಲಾಮ್' ಎಂದಾಗಿದೆ. ದೇವನು ನ್ಯೂನತೆಗಳಿಂದಲೂ ಅರಿಷ್ಟತೆಗಳಿಂದಲೂ ಕಷ್ಟತೆಗಳಿಂದಲೂ ಅತೀತನೂ ನಿರ್ಬಾಧಿತನೂ ಸುರಕ್ಷಿತನೂ ಆಗಿದ್ದಾನೆ. ಈ ವಿಶಿಷ್ಟ ನಾಮದ ಅರ್ಥ ಬಹಳ ಸ್ಪಷ್ಟ. ಸೃಷ್ಟಿಗಳಂತೆಯೇ ದೇವನು ಸಹ ಕಷ್ಟಾರಿಷ್ಟತೆಗಳಿಗೆ ಗುರಿಯಾಗಿ ಜನರ ಕೈಯಿಂದ ತಾಡನ ಪೀಡನಗಳನ್ನು ಅನುಭವಿಸಿ ಅಥವಾ ತನ್ನ ಜನರ ಕೈಗಳಿಂದಲೇ ವಧಿಸಲ್ಪಟ್ಟು ತನ್ನ ಉದ್ದೇಶಗಳನ್ನು ಸಾಧಿಸಲಾಗದೆ ಪರಾಭವಗೊಂಡರೆ ಅಂತಹ ದೇವನು ನಮಗೆ ಆಪತ್ಕಾಲದಲ್ಲಿ ಸಹಾಯವನ್ನೂ ರಕ್ಷಣೆಯನ್ನೂ ನೀಡಲು ಸಮರ್ಥನೆಂದು ನಂಬಿ ಭರವಸೆ ಇಡುವುದಾದರೂ ಹೇಗೆ?

ಮಿಥ್ಯ ದೇವರುಗಳ ಕುರಿತು ಪವಿತ್ರ ಖುರ್‌ಆನ್ (22:74, 75) ಹೀಗೆ ಹೇಳುತ್ತದೆ:

ನಿಜವಾದ ಪರಮಾತ್ಮನನ್ನು ಬಿಟ್ಟು ನೀವು ಸಹಾಯ ಯಾಚಿಸುವ ಮಿಥ್ಯ ದೇವರುಗಳೆಲ್ಲ ಒಟ್ಟು ಸೇರಿದರೂ ಅವರಿಗೆ ಒಂದು ನೊಣವನ್ನಾಗಲಿ ಸೃಷ್ಟಿಸಲು ಸಾಧ್ಯವಿಲ್ಲ. ಮಾತ್ರವಲ್ಲ, ನೊಣ ಅವರ ಕೈಯಿಂದ ಏನಾದರೂ ವಸ್ತುವನ್ನು ಕಿತ್ತುಕೊಂಡು ಹೋದರೆ ಅವರಿಗೆ ಅದನ್ನು ನೊಣದಿಂದ ವಾಪಾಸು ಪಡೆಯುವ ಶಕ್ತಿ ಕೂಡ ಇರುವುದಿಲ್ಲ. ಇಂತಹ ದೇವರುಗಳನ್ನು ಆರಾಧಿಸುವವರು ವಿವೇಕಹೀನರೂ ಆ ದೇವರುಗಳು ಶಕ್ತಿಹೀನರೂ ಆಗಿದ್ದಾರೆ. ಸಾಕ್ಷಾತ್ ಪರಮಾತ್ಮ, ಶಕ್ತರಲ್ಲಿ ಅತ್ಯಂತ ಶಕ್ತನೂ ಎಲ್ಲವನ್ನು ಜಯಿಸುವವನೂ ಆಗಿದ್ದಾನೆ. ಅವನನ್ನು ಹಿಡಿಯಲಿಕ್ಕೋ ಹೊಡೆಯಲಿಕ್ಕೋ ಸಾಧ್ಯವಿಲ್ಲ. ದೇವರ ಕುರಿತು ಅಸಂಬದ್ಧ ಕಲ್ಪನೆಗಳಿಗೆ ಅಧೀನರಾದವರು ದೇವನ ಮಹತ್ವವನ್ನಾಗಲಿ ಅವನ ಸ್ಥಾನವನ್ನಾಗಲಿ ಸರಿಯಾಗಿ ತಿಳಿದಿಲ್ಲ."

ದೇವನ ಇನ್ನೊಂದು ಗುಣ "ಅಲ್‌ಮೂಮಿನ್" ಎಂದಾಗಿದೆ. ಎಂದರೆ, ಅವನು ಸಮಾಧಾನ ಮತ್ತು ಶಾಂತಿಯನ್ನು ಪ್ರಧಾನ ಮಾಡುವವನೂ ತನ್ನ ಏಕತೆಗೂ ಶ್ರೇಷ್ಟತೆಗೂ ಸಾಕ್ಷ್ಯಗಳನ್ನು ನೀಡಿ ಶಾಂತಿಯನ್ನು ದಯಪಾಲಿಸುವವನೂ ಆಗಿದ್ದಾನೆ. ಈ ಪರಿಶುದ್ಧ ನಾಮವು ಸೂಚಿಸುವುದೇನೆಂದರೆ, ಸತ್ಯದೇವನನ್ನು ನಂಬುವವನು ತನ್ನ ಬಳಿ ಶಕ್ತಿಯುತವಾದ ಪುರಾವೆಗಳಿರುವುದರಿಂದ ಯಾರ ಮುಂದೆಯೂ ನಾಚಿಕೆ ಪಡಲಾರ. ದೇವನ ಮುಂದೆಯೂ ಲಜ್ಜಿತನಾಗಲಾರ. ಆದರೆ ಮಿಥ್ಯ ದೇವರುಗಳನ್ನು ನಂಬುವವನು ಬಹಳ ಕಷ್ಟಕ್ಕೊಳಗಾಗುತ್ತಾನೆ. ಅವನು ತನ್ನ ನಂಬಿಕೆಯ ಆಧಾರವಾಗಿ ಸಾಕ್ಷ್ಯಗಳನ್ನು ತೋರಿಸುವ ಬದಲಾಗಿ ಅದನ್ನು ವಿವೇಕಹೀನ ಗೂಢ ತತ್ವಗಳಲ್ಲಿ ಸಿಲುಕಿಸಿ ತೃಪ್ತಿಪಡುತ್ತಾನೆ. ಅವನು ತನ್ನ ಪ್ರತಿಯೊಂದು ಅಸಂಬದ್ಧ ಹೇಳಿಕೆಗಳನ್ನು ಪರಿಶೋಧನೆಗೊಳಗಾಗದಂತೆ ಮುಚ್ಚಿಡಲು ಯತ್ನಿಸುತ್ತಾನೆ.

ದೇವನ ಇತರ ಗುಣನಾಮಗಳು ಅಲ್‌ಮುಹೈಮಿನ್, ಅಲ್ ಅಝೀಝ್, ಅಲ್‌ಜಬ್ಬಾರ್, ಅಲ್ ಮುತಕಬ್ಬಿರ್ ಎಂದು. ಇದರ ಅರ್ಥ ಹೀಗೆ: ಅವನು ಸರ್ವ ರಕ್ಷಕನೂ ಪರಿಪಾಲಕನೂ ಸರ್ವವನ್ನೂ ಜಯಿಸುವ ಪ್ರತಾಪ ಶಾಲಿಯೂ ಕುಂದುಕೊರತೆಗಳನ್ನು ನೀಗಿಸುವವನೂ ಯಾರಿಂದಲೂ ಯಾವುದೇ ನೆರವನ್ನು ಬಯಸದವನೂ ಎಲ್ಲರಿಗೂ ಆಸರೆಯಾಗಿರುವ ಪ್ರಭಾವಶಾಲಿಯೂ ಆಗಿದ್ದಾನೆ. (59:24)

ದೇವನ ಬಗ್ಗೆ ಪವಿತ್ರ ಖುರ್‌ಆನ್ ಈ ಕೆಳಗಿನಂತೆ ಹೇಳುತ್ತದೆ:

ಅವನು ಶರೀರಗಳನ್ನು ಮತ್ತು ಆತ್ಮಗಳನ್ನು ಸೃಷ್ಟಿಸುವವನೂ ಗರ್ಭದಲ್ಲಿರುವ ಭ್ರೂಣಕ್ಕೆ ರೂಪ ಕೊಡುವವನೂ ಆಗಿದ್ದಾನೆ. ಸಕಲ ಉತ್ಕೃಷ್ಟ ನಾಮಗಳು ಅವನಿಗಿವೆ. ಆಕಾಶ ಮಂಡಲಗಳಲ್ಲಿ ಮತ್ತು ಭೂಮಿಯಲ್ಲಿರುವವರು ಅವನ ಮಹತ್ವವನ್ನು ಹೊಗಳುತ್ತಾರೆ. ಅವನ ಪರಿಶುದ್ಧತೆಯನ್ನು ಶ್ಲಾಘಿಸುತ್ತಾರೆ. ಅವನು ಸರ್ವವಲ್ಲಭನೂ ಸರ್ವಜ್ಞನೂ ಆಗಿದ್ದಾನೆ. (59:25)

ಈ ವಾಕ್ಯ, ಆಕಾಶ ಗೋಳಗಳಲ್ಲಿ ಸಹ ನಿವಾಸಿಗಳಿರುವರೆಂದೂ ಅವರು ದೇವನ ಮಾರ್ಗದರ್ಶನ ಪ್ರಕಾರ ವರ್ತಿಸುವವರಾಗಿದ್ದಾರೆಂದೂ ಸೂಚಿಸುತ್ತದೆ.

ಇನ್ನೊಂದು ಕಡೆ ಪವಿತ್ರ ಖುರ್‌ಆನ್ ದೇವನ ಕುರಿತು: "ಅಲಾ ಕುಲ್ಲಿ ಶೈಯಿನ್ ಖದೀರ್" (2:149) ಎಂದು ಹೇಳಿದೆ. ಅಲ್ಲಾಹನು ಎಲ್ಲಾ ಕಾರ್ಯಗಳಲ್ಲೂ ಸಾಮರ್ಥ್ಯವುಳ್ಳ ಸರ್ವಶಕ್ತನಾಗಿದ್ದಾನೆ.

ಇದು ಸತ್ಯದೇವನನ್ನು ಆರಾಧಿಸುವವರಿಗೆ ಒಂದು ಶುಭ ಪ್ರತೀಕ್ಷೆ ನೀಡುವ ವಚನವಾಗಿದೆ. ದೇವನು ಅಶಕ್ತನೂ ಬಲಹೀನನೂ ಎಂದಾದರೆ ಅಂತಹ ದೇವನಿಂದ ಮನುಷ್ಯನು ಏನನ್ನು ಪ್ರತೀಕ್ಷಿಸಲಿಕ್ಕಿದೆ?

ಪವಿತ್ರ ಖುರ್‌ಆನ್ ದೇವನ ಇತರ ಗುಣಗಳನ್ನು ಹೀಗೆ ವಿವರಿಸಿದೆ: ರಬ್ಬಿಲ್ ಆಲಮೀನ್, ಅರ್ರಹ್ಮನಿರ್ರಹೀಮ್, ಮಾಲಿಕಿ ಯೌಮಿದ್ದೀನ್ (1:2-4). ಪರಮಾತ್ಮನು ಸರ್ವಲೋಕ ಪರಿಪಾಲಕನೂ ಪರಮ ದಯಾಳುವೂ ಕೃಪಾನಿಧಿಯೂ ವಿಧಿ ದಿನದ ಸರ್ವಾಧಿಪತಿಯೂ ಆಗಿದ್ದಾನೆ.

ದೇವನ ಕುರಿತು ಪವಿತ್ರ ಖುರ್‌ಆನ್ ಹೀಗೆಯೂ ಹೇಳಿದೆ: ಅವನು ಪ್ರಾರ್ಥಿಸುವವನ ಪ್ರಾರ್ಥನೆಗಳನ್ನು ಕೇಳುವವನೂ ಉತ್ತರ ನೀಡುವವನೂ ಆಗಿದ್ದಾನೆ. (2:187)

ಅವನು ನಿತ್ಯ ಜೀವಿಯೂ ಸರ್ವ ಜೀವಿಗಳ ಜೀವನೂ ಸಕಲ ಜೀವಿಗಳಿಗೆ ಆಸರೆಯೂ ಆಗಿದ್ದಾನೆ. (3:3, 2:256)

ಈ ವಚನದಲ್ಲಿ ದೇವನು ನಿತ್ಯ ಜೀವಿಯೆಂದು ಹೇಳಿದುದು ಏಕೆಂದರೆ, ಅವನು ಸದಾ ಜೀವಿಸುತ್ತಾ ಇರುವ ಶಾಶ್ವತನು ಅಲ್ಲವೆಂದಾದ ಪಕ್ಷದಲ್ಲಿ, ಅವನು ಒಂದು ವೇಳೆ ನಮಗಿಂತ ಮೊದಲು ತೀರಿ ಹೋಗುವನೋ ಎಂಬ ಶಂಕೆಯನ್ನು ನಿವಾರಿಸಲಿಕ್ಕಾಗಿದೆ.

ದೇವನ ಕುರಿತು ಪವಿತ್ರ ಖುರ್‌ಆನ್ ಹೀಗೆ ಸಹ ಹೇಳಿದೆ:

ದೇವನು ಏಕನೂ ಎಲ್ಲಕ್ಕೂ ಆಸರೆಯಾಗಿರುವ ಅಧಿನಾಥನೂ ಆಗಿದ್ದಾನೆ. ಅವನಿಗೆ ಪುತ್ರನಿಲ್ಲ; ಅವನು ಯಾರ ಪುತ್ರನೂ ಅಲ್ಲ. ಅವನಿಗೆ ಸರಿಸಮಾನ ಯಾರೂ ಇಲ್ಲ. (112:2-5)

("ಇಸ್ಲಾಮೀ ಉಸೂಲ್ ಕೀ ಫಿಲಾಸಫಿ" - ಕನ್ನಡ ಭಾಷಾಂತರ "ಇಸ್ಲಾಮ್ ಧರ್ಮ ತತ್ವಜ್ಞಾನ"ದಿಂದ ಉಲ್ಲೇಖಿತ)

ಹಝ್ರತ್ ಮಸೀಹ್ ಮೌಊದ್ (ಅಲೈಹಿಸ್ಸಲಾಮ್) ಹೇಳುತ್ತಾರೆ:

"ಕ್ರೈಸ್ತ ಧರ್ಮವೆಂದು ಪ್ರಖ್ಯಾತವಾಗಿರುವ ಈ ಧರ್ಮವು ಯಥಾರ್ಥವಾಗಿ ಪೌಲನ ಧರ್ಮವಾಗಿದೆ. ಇದು ಯೇಸು ಕ್ರಿಸ್ತರ ಧರ್ಮವಲ್ಲ. ಯೇಸು ಕ್ರಿಸ್ತರು ಎಲ್ಲಿಯೂ ತ್ರಿತ್ವ ಸಿದ್ಧಾಂತದ ಉಪದೇಶ ನೀಡಿಲ್ಲ. ಅವರು ಜೀವಿಸಿದ್ದಾಗಲೆಲ್ಲಾ ಏಕದೇವನ ಕುರಿತು ಉಪದೇಶಿಸುತ್ತಾ ಇದ್ದರು. ಅವರ ನಿಧನದ ನಂತರ ಅವರ ಸಹೋದರ ಯಅ್‌ಖೂಬ್ ಸಹ ಅವರ ಪ್ರತಿನಿಧಿಯಾಗಿ ಏಕದೇವ ಸಿದ್ಧಾಂತ ಪ್ರತಿಪಾದಿಸುತ್ತಿದ್ದ ಮಹಾತ್ಮರಾಗಿದ್ದರು. ಪೌಲನು ಈ ಮಹಾನುಭಾವರನ್ನು ವಿರೋಧಿಸಲು ತೊಡಗಿದನು. ಆತನು ಸರಿಯಾದ ನಂಬಿಕೆಗಳಿಗೆ ವಿರುದ್ಧವಾದ ಉಪದೇಶವನ್ನು ನೀಡತೊಡಗಿದನು. ಕೊನೆಗೆ ಪೌಲನು ಎಲ್ಲಿಗೆ ತಲುಪಿದನೆಂದರೆ ಒಂದು ಹೊಸಧರ್ಮವನ್ನೇ ಸ್ಥಾಪಿಸಿದನು. ತೌರಾತನ್ನು ಅನುಸರಿಸುವುದರಿಂದ ತನ್ನ ಅನುಯಾಯಿಗಳನ್ನು ಸಂಪೂರ್ಣವಾಗಿ ಬೇರ್ಪಡಿಸಿದನು. ಕ್ರೈಸ್ತ ಧರ್ಮದಲ್ಲಿ ಯೇಸು ಕ್ರಿಸ್ತರ ಮೂಲಕ ಪಾಪ ಪರಿಹಾರವಾದ ನಂತರ ತೌರಾತ್ ನಿಯಮ ಸಂಹಿತೆಯ ಅನುಸರಣೆ ಅಗತ್ಯವಿಲ್ಲ; ಯೇಸು ಕ್ರಿಸ್ತರ ರಕ್ತವು ಪಾಪಗಳನ್ನು ಹೋಗಲಾಡಿಸಲು ಸಾಕು ಎಂದು ಆತನು ಪ್ರತಿಪಾದಿಸಿದನು. ಆತನು ಇನ್ನೊಂದು ಕೊಳಕನ್ನು ತನ್ನ ಮತಕ್ಕೆ ಹಾಕಿದನು. ಹಂದಿಯನ್ನು ತಿನ್ನುವುದನ್ನು ಆತನು ಧರ್ಮ ಬದ್ಧಗೊಳಿಸಿದನು. ಯೇಸು ಕ್ರಿಸ್ತರು ಹಂದಿಯನ್ನು ಕೊಳಕೆಂದು ಹೇಳಿರುವರು. ನಿಮ್ಮ ಮುತ್ತುಗಳನ್ನು ಹಂದಿಗಳ ಮುಂದೆ ಎಸೆಯಬೇಡಿರೆಂದು ಬೈಬಲ್‌ನಲ್ಲಿದೆ. ಯೇಸು ಕ್ರಿಸ್ತರು ಪವಿತ್ರ ಉಪದೇಶವನ್ನು ಮುತ್ತು ಎಂದು ಕರೆದಿರುವಾಗ, ಅವರು ಹಂದಿಯನ್ನು ಕೊಳಕೆಂದು ಹೇಳಿರುವರು. ನಿಜವಾದ ಸಂಗತಿ ಏನಂದರೆ ಗ್ರೀಕ್ ಜನರು ಹಂದಿ ತಿನ್ನುತ್ತಿದ್ದರು. ಆದುದರಿಂದ ಗ್ರೀಕ್ ಜನರ ಮನಸ್ಸನ್ನು ಗೆಲ್ಲಲು ಹಂದಿಮಾಂಸವನ್ನು ತನ್ನ ಅನುಯಾಯಿಗಳಿಗೆ ಪೌಲನು ಧರ್ಮಬದ್ಧಗೊಳಿಸಿದನು. ಹಂದಿಯ ಮಾಂಸ ಶಾಶ್ವತವಾಗಿ ನಿಷಿದ್ಧವೆಂದೂ ಅದನ್ನು ಸ್ಪರ್ಶಿಸುವುದು ಸಹ ಕೂಡದೆಂದೂ ತೌರಾತ್‌ನಲ್ಲಿ ಬರೆಯಲಾಗಿದೆ. ಈ ಧರ್ಮದಲ್ಲಿ ಎಲ್ಲಾ ಕೆಡುಕುಗಳು ಪೌಲನಿಂದ ಉಂಟುಮಾಡಲ್ಪಟ್ಟವುಗಳಾಗಿವೆ." (ಚಶ್ಮಿಯೆ ಮಸೀಹಿ)

ಗ್ರೀಕ್ ವಿಚಾರಗಳು ಮತ್ತು ಬೈಬಲ್ ಸೂಚಿಸುವ ರೀತಿಯಲ್ಲಿ ದೇವನ ಬಗ್ಗೆ ವಿಶ್ವಾಸ ಪರಸ್ಪರ ಹೊಂದಿಕೊಳ್ಳುತ್ತವೆ ಎಂದು ಪೋಪ್ ಹೇಳಿದುದು ಯೇಸು ಕ್ರಿಸ್ತರು ಪ್ರತಿಪಾದಿಸಿದ ಉಪದೇಶಗಳ ಪ್ರಕಾರವಲ್ಲ. ಅದು ಗ್ರೀಕ್ ಜನರನ್ನು ಸಂತೋಷಪಡಿಸಲು ಆಡಿದ ಮಾತುಗಳಾಗಿವೆ.

ನ್ಯಾಯ ಪ್ರಿಯ ಕ್ರೈಸ್ತರು ಇಸ್ಲಾಮಿನ ದೇವನು ಹೇಗಿದ್ದಾನೆಂದು ತಿಳಿದಿರುವರು. ಎಡ್ವರ್ಡ್ ಗಿಬ್ಬನ್ ಹೇಳುತ್ತಾರೆ:

"ಮುಹಮ್ಮದರ ಧರ್ಮ ಸಂಶಯಗಳಿಂದ ಮುಕ್ತವಾಗಿ ಪರಿಶುದ್ಧವಾಗಿದೆ. ಖುರ್‌ಆನ್ ದೇವನ ಏಕತ್ವದ ಬಗ್ಗೆ ಉತ್ತಮ ಸಾಕ್ಷ್ಯ ನೀಡುತ್ತದೆ. ಮಕ್ಕದ ಪ್ರವಾದಿಯು ಮೂರ್ತಿಗಳ, ಮನುಷ್ಯರ ಮತ್ತು ನಕ್ಷತ್ರಗಳ ಆರಾಧನೆಯನ್ನು ವಿವೇಕಭರಿತ ಸಾಕ್ಷ್ಯಾಧಾರಗಳಿಂದ ರದ್ದುಪಡಿಸಿದರು. ಪ್ರಥಮ ತತ್ವವೆಂದರೆ ದೇವನ ಅಸ್ತಿತ್ವವು ಬುದ್ಧಿ ಮತ್ತು ದೇವ ಸಂದೇಶವಾಣಿಗಳ ಮೇಲೆ ಹೊಂದಿಕೊಂಡಿದ್ದು ಅವು ಮುಹಮ್ಮದರ ಸಾಕ್ಷ್ಯದಿಂದ ಸ್ಥಾಪಿತವಾಯಿತು. ಮುಹಮ್ಮದರನ್ನು ನಂಬುವವರು ಹಿಂದೂ ಸ್ಥಾನದಿಂದ ಮೊರಾಕೋ ತನಕ ಏಕ ದೇವವಿಶ್ವಾಸಿ ಎಂಬ ಬಿರುದನ್ನು ಪಡೆದು ವಿಶಿಷ್ಟರಾಗಿರುವರು." (The History of Decline & Fall of the Roman Empire Vol. V Pages 177 -178)

ಬುದ್ಧಿಯನ್ನು ಉಪಯೋಗಿಸಿ ಚಿಂತಿಸುವವರಿಗೆ, ಇಸ್ಲಾಮಿನ ದೇವನ ಕುರಿತು ವಿವೇಕ ಭರಿತ ಸಾಕ್ಷ್ಯಾಧಾರಗಳು ದೊರಕುತ್ತವೆ ಎಂದು ಹೇಳದೆ ನಿರ್ವಾಹವಿಲ್ಲ.

ಕೊನೆಯದಾಗಿ ನಾನು ಪ್ರತಿಯೊಬ್ಬ ಅಹ್ಮದಿಯೊಂದಿಗೆ ಹೀಗೆ ಹೇಳ ಬಯಸುತ್ತೇನೆ: ಇಸ್ಲಾಮಿನ ವಿರುದ್ಧ ಆಕ್ರಮಣಕ್ಕೆ ಸಿದ್ಧರಾಗಿರುವ ಶತ್ರುಗಳ ಪಡೆಯನ್ನು ಎದುರಿಸಲು ಅಲ್ಲಾಹನ ಮುಂದೆ ಬಾಗಿ ಪ್ರಾರ್ಥಿಸುತ್ತಾ ಸಹಾಯವನ್ನು ಕೋರುವುದರಿಂದಲೇ ಸಾಧ್ಯವಾಗುವುದು. ಅಲ್ಲಾಹನನ್ನು ಮೊದಲಿಗಿಂತ ಹೆಚ್ಚು ಹೆಚ್ಚಾಗಿ ಕರೆದು ಪ್ರಾರ್ಥಿಸಿರಿ. ಅವನು ತನ್ನ ಶಕ್ತಿ ಸಾಮರ್ಥ್ಯಗಳನ್ನು ಪ್ರದರ್ಶಿಸಲಿ. ಮಿಥ್ಯ ದೇವರುಗಳಿಂದ ಈ ಲೋಕವು ಮುಕ್ತವಾಗಲಿ. ಶತ್ರುಗಳು ತಮ್ಮ ಸಂಪತ್ತು ಮತ್ತು ಶಕ್ತಿಯ ಹೆಮ್ಮೆಯಿಂದ ಇಸ್ಲಾಮ್ ಮತ್ತು ಹಝ್ರತ್ ಪೈಗಂಬರರ(ಸ) ವಿರುದ್ಧ ಆಕ್ರಮಣ ಮಾಡುತ್ತಿದ್ದಾರೆ. ನಮ್ಮ ಪ್ರಾರ್ಥನೆಗಳ ಬಾಣಗಳಿಂದ (ಅಲ್ಲಾಹನು ಇಚ್ಛಿಸಿದರೆ) ಅವರ ಹಮ್ಮು ನಾಮಾವಶೇಷವಾಗುವುದು. ಸಕಲ ಲೋಕಗಳ ಪ್ರಭುವಾದ ಅಲ್ಲಾಹನಿಗೆ ಮೊರೆಯಿಡಿರಿ. ಹಝ್ರತ್ ಮುಹಮ್ಮದ್ ಪೈಗಂಬರರ(ಸ) ದೇವನಾದ ಅಲ್ಲಾಹನು ತನ್ನ ಏಕತ್ವವನ್ನು ಸ್ಥಾಪಿಸುವಂತಹ ಆಡಳಿತೆ ಲೋಕದಲ್ಲಿ ಬರುವಂತೆ ಮಾಡಲಿ.

ಮುಸ್ಲಿಮ್ ರಾಷ್ಟ್ರಗಳು ಸಹ ಯೋಚಿಸಬೇಕಾಗಿದೆ. ಅವರು ತಮ್ಮ ಪರಸ್ಪರ ಭಿನ್ನಾಭಿಪ್ರಾಯಗಳನ್ನು ಕೊನೆಗೊಳಿಸಬೇಕು. ಪರಸ್ಪರ ವೈರ ಮತ್ತು ಜಗಳವನ್ನು ಕೊನೆಗೊಳಿಸಬೇಕು. ಒಟ್ಟಾಗಿ ಮುಹಮ್ಮದ್ ಪೈಗಂಬರರ(ಸ) ಹೆಸರನ್ನು ಉನ್ನತಿಗೇರಿಸಲು ಪ್ರಯತ್ನಿಸಬೇಕು. ಅನ್ಯರು ಆಕ್ಷೇಪಿಸಲು ಸಾಧ್ಯವಾಗುವಂತಹ ಕೃತ್ಯಗಳಿಂದ ಅವರು ತಮ್ಮನ್ನು ದೂರವಿರಿಸಬೇಕು. ಅಲ್ಲಾಹನು ಅವರಿಗೆ ಸಹಾಯ ಮಾಡಲಿ. ❖

"ಎಲ್ಲರೊಡನೆಯೂ ಪ್ರೀತಿ
ಯಾರೊಡನೆಯೂ ದ್ವೇಷವಿಲ್ಲ"

# ಪವಿತ್ರ ಖುರ್‌ಆನ್ - ಮಾನವರಿಗೆ ಪರಿಪೂರ್ಣ ಮಾರ್ಗದರ್ಶಕ ಗ್ರಂಥ

❖ ಫೌಝಿಯ ಬಾಜ್ವ

ಪವಿತ್ರ ಖುರ್‌ಆನ್ ಪ್ರಾರಂಭಿಕ ವಚನಗಳಲ್ಲಿ ಹೀಗೆ ಘೋಷಿಸುತ್ತದೆ:-

**"ಇದು ಪರಿಪೂರ್ಣ ಗ್ರಂಥವಾಗಿದೆ. ಇದರಲ್ಲಿ ಸಂದೇಹವೇನೂ ಇಲ್ಲ. ಭಯಭಕ್ತಿಯುಳ್ಳವರಿಗೆ (ಇದು) ಒಂದು ಮಾರ್ಗದರ್ಶನವಾಗಿದೆ." (2:3)**

ಇಂತಹ ಬಲವತ್ತಾದ ಘೋಷಣೆಗೆ ಆಧಾರವಾಗಿ ಮೆಚ್ಚಿಗೆಯಾಗುವಂತಹ ಸಾಕ್ಷ್ಯಾಧಾರಗಳು ಇರಬೇಕಾಗಿವೆ. ಈ ಲೇಖನದಲ್ಲಿ ನಾವು ಈ ಘೋಷಣೆಯ ಅರ್ಥವ್ಯಾಪ್ತಿ ಮತ್ತು ಪವಿತ್ರ ಖುರ್‌ಆನ್ ಈ ಬಗ್ಗೆ ನೀಡುವ ಸಾಕ್ಷ್ಯಾಧಾರಗಳು ಯಾವುವು ಎಂದು ಪರಿಶೀಲಿಸಿ ಈ ಘೋಷಣೆಯು ನಿಜವಾಗಿಯೂ ನ್ಯಾಯ ಸಮ್ಮತವಾಗಿದೆ ಎಂದು ನಮಗೆ ಸಾಧ್ಯವಿರುವ ಮಟ್ಟಿಗೆ ಸಾಬೀತುಗೊಳಿಸಲು ಪ್ರಯತ್ನಿಸುವೆವು.

ಮನುಷ್ಯನನ್ನು ದೇವನು ಸೃಷ್ಟಿಸಿದನು ಮತ್ತು ಪವಿತ್ರ ಖುರ್‌ಆನ್ ಅವನು ಅವತೀರ್ಣಗೊಳಿಸಿದ ಅವನದೇ ವಚನಗಳಾಗಿವೆ ಎಂಬ ಮೂಲಭೂತ ತತ್ವವನ್ನು ಅಂಗೀಕರಿಸಿ ಅದರ ತಳಹದಿಯ ಮೇಲೆ ಈ ಲೇಖನವನ್ನು ಬರೆಯಲಾಗಿದೆ.

## ಮಾನವರಿಗೆ ಪರಿಪೂರ್ಣ ಮಾರ್ಗದರ್ಶನ

ಮೇಲಿನ ಉಪನಾಮದಲ್ಲಿ ಮೂರು ಪ್ರಮುಖ ವಿಚಾರಗಳಿವೆ. ಪರಿಪೂರ್ಣತೆ, ಮಾರ್ಗದರ್ಶನ ಮತ್ತು ಮಾನವರು.

## ಪರಿಪೂರ್ಣತೆ

1. ಪರಿಪೂರ್ಣವಾದುದು ಎಲ್ಲಾ ವಿಧಗಳ ಕುಂದು ಕೊರತೆಗಳಿಂದ ಮತ್ತು ವೈರುದ್ಧ್ಯಗಳಿಂದ ಮುಕ್ತವಾಗಿರಬೇಕು.
2. ಅದು ಗ್ರಹಿಸಬಲ್ಲದ್ದು ಮತ್ತು ಸಂಪೂರ್ಣವಾದುದು ಆಗಿರಬೇಕು.
3. ಅದು ಸಮತೋಲನ ಹೊಂದಿರಬೇಕು ಮತ್ತು ಕ್ರಮಬದ್ಧವಾಗಿರಬೇಕು.
4. ಅದು ಸಾರ್ವಲೌಕಿಕವಾಗಿರಬೇಕು ಮತ್ತು ಶಾಶ್ವತವಾಗಿರಬೇಕು

## ಮಾನವರಿಗೆ ಮಾರ್ಗದರ್ಶನ

ಒಂದು ಮಾರ್ಗದರ್ಶನ ಅದನ್ನು ಅನುಸರಿಸುವವರನ್ನು ಅವರ ಗಮ್ಯ ಸ್ಥಾನಕ್ಕೆ ತಲಪಿಸುವಂಥದ್ದಾಗಿರಬೇಕು. ಮಾರ್ಗದರ್ಶಕ ಗ್ರಂಥವು ಗುರಿಯನ್ನು ತಲಪಲಿಕ್ಕೆ ಆವಶ್ಯಕವಾದ ಮಾರ್ಗದ ನಕ್ಷೆಯನ್ನು ಒದಗಿಸಿಕೊಡುವುದರೊಂದಿಗೆ ದಾರಿ ತಪ್ಪಿ ಹೋಗುವವರನ್ನು ಪ್ರೇರೇಪಿಸಿ ನೇರ ಮಾರ್ಗಕ್ಕೆ ಮರಳಿ ತಲುಪಿಸುವ ಕಾರ್ಯ ನಿರ್ವಾಹಕವೂ ಆಗಿರಬೇಕು. ಒಬ್ಬ ಉತ್ತಮ ಮಾರ್ಗದರ್ಶಕನು ಪ್ರಯಾಣದಲ್ಲಿ ಕಾರ್ಯಶೀಲನಾಗಿರಬೇಕು. ಅವನು ನಿಷ್ಕ್ರಿಯನಾಗಿರಬಾರದು. ಪವಿತ್ರ ಖುರ್‌ಆನ್ ಮಾನವರಿಗೆ ಮಾರ್ಗದರ್ಶನವಾಗಿದೆ ಎಂದು ಹೇಳಿರುವುದರಿಂದ ಅದು ಮನುಷ್ಯರನ್ನು ಮಾತ್ರ ಉದ್ದೇಶಿಸಿ ಅವತೀರ್ಣಗೊಳಿಸಲ್ಪಟ್ಟಿದೆ ಎಂಬುದು ಸ್ಪಷ್ಟವಾಗುತ್ತದೆ.

## ಮನುಷ್ಯನ ಸೃಷ್ಟಿಯ ಉದ್ದೇಶ

ಮನುಷ್ಯನ ಸೃಷ್ಟಿಯ ಉದ್ದೇಶವೇನೆಂದು ಮೊತ್ತ ಮೊದಲು ನಿರ್ಧರಿಸೋಣ. ಆ ಬಗ್ಗೆ ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

**"ನನ್ನನ್ನು ಆರಾಧಿಸಲಿಕ್ಕೋಸ್ಕರ ಹೊರತು ನಾನು ಜಿನ್ನ್ ಮತ್ತು ಇನ್ಸ್ ವರ್ಗಗಳನ್ನು ಸೃಷ್ಟಿಸಲಿಲ್ಲ." (51:57)**

ದೇವನು ನಮ್ಮ ಸೃಷ್ಟಿಕರ್ತನೆಂದು ಒಪ್ಪಿಕೊಳ್ಳುವುದಾದರೆ ನಮ್ಮ ಜೀವಿತದ ಉದ್ದೇಶವನ್ನು ನಿರ್ಧರಿಸುವ ಪರಮಾಧಿಕಾರವೂ ಅವನದ್ದೇ ಆಗಿದೆ. ನಮ್ಮನ್ನು ಸೃಷ್ಟಿಸಿದುದರ ಉದ್ದೇಶವು ಅವನ ಆರಾಧನೆ ಎಂದು ಮೇಲಿನ ವಚನದಲ್ಲಿ ಅವನು ಹೇಳಿರುತ್ತಾನೆ. ಅಲ್ಲಾಹನ ಆರಾಧನೆ ಎಂದರೆ ಬರೇ ಪ್ರಾರ್ಥನೆ ಮಾಡುವುದಲ್ಲ. ಅದು ಪ್ರಮುಖವಾದ ಒಂದು ಅಂಶವಾಗಿದ್ದರೂ ಅದರ ನಿಜವಾದ ಉದ್ದೇಶ ದೇವನಿಗೆ ಪರಿಪೂರ್ಣವಾದ ವಿಧೇಯತೆ ಮತ್ತು ಅವನಿಗೆ ಶರಣಾಗತಿಯಾಗಿದೆ. ಅಲ್ಲಾಹನ ಗುಣಗಳನ್ನು ಸಾಧ್ಯವಿರುವಷ್ಟು ತನ್ನಲ್ಲಿ ಅಳವಡಿಸಿಕೊಳ್ಳುವುದು ಇದರ ಅರ್ಥವಾಗಿದೆ. ಅಲ್ಲಾಹನನ್ನು ಅರಿತುಕೊಂಡು ಅವನನ್ನು ಪ್ರೀತಿಸುವುದು ಇದರಲ್ಲಿ ಸೇರಿದೆ. ದೇವನು ನಮಗೆ ದಯಪಾಲಿಸಿರುವ ಸಹಜ ಶಕ್ತಿಗಳನ್ನು, ನಮಗೆ ಲಭಿಸಿರುವ ಸಮಯವನ್ನು ಮತ್ತು ಸಂಪತ್ತನ್ನು ಹೃತ್ಪೂರ್ವಕವಾಗಿಯೂ ನಿರಂತರವಾಗಿಯೂ ಅವನ ತೃಪ್ತಿಯನ್ನು ಗಳಿಸಲು ವಿನಿಯೋಗಿಸಿ ಅವನ ಸಾಮೀಪ್ಯವನ್ನು ತಲಪಲು ಪ್ರಯತ್ನಿಸುವುದು ಆರಾಧನೆಯಲ್ಲಿ ಸೇರಿದೆ.

## ಪವಿತ್ರ ಖುರ್‌ಆನಿನ ಮಾರ್ಗದರ್ಶನ

ನಮ್ಮ ಜೀವಿತದ ಉದ್ದೇಶವು ಸಾತ್ವಿಕರಾಗಿ ದೇವ ಸಾಮಿಪ್ಯಗಳಿಸುವುದು ಎಂದಾಗಿರುವಾಗ ನಾವು ಈ ಉದ್ದೇಶವನ್ನು ಗಳಿಸುವುದು ಹೇಗೆ ಎಂಬುದರ ಕುರಿತು ತಿಳಿಯಲು ನಾವು ಪವಿತ್ರ ಖುರ್‌ಆನ್ ಕಡೆಗೆ ತಿರುಗುವುದು ಆವಶ್ಯಕವಾಗಿದೆ. ಮನುಷ್ಯನನ್ನು ಒಳಿತಿಗೆ ಪ್ರೇರೇಪಿಸಿ ಕುಡುಕಿನಿಂದ ತಡೆಯುವ ಪವಿತ್ರ ಖುರ್‌ಆನಿನ ಎಲ್ಲಾ ಉಪದೇಶಗಳನ್ನು ಈ ಚಿಕ್ಕ ಲೇಖನದಲ್ಲಿ ಅಳವಡಿಸಲು ಸಾಧ್ಯವಾಗಲಾರದು. ಆದುದರಿಂದ ಕೆಲವು ವಚನಗಳನ್ನು ಮಾತ್ರ ಆಯ್ಕೆ ಮಾಡಿ ನಿಮ್ಮ ಮುಂದಿರಿಸುತ್ತೇವೆ.

ಈ ಮೊದಲೇ ಹೇಳಿದಂತೆ ಮನುಷ್ಯನ ಸೃಷ್ಟಿಯ ಉದ್ದೇಶವು ಅಲ್ಲಾಹನ ಆರಾಧನೆಯಾಗಿದೆಯಾದರೂ ಅದು ಅಷ್ಟು ಸುಲಭವಾದ ವಿಷಯವಲ್ಲವೆಂದು ಪವಿತ್ರ ಖುರ್‌ಆನಿನ ಆರಂಭದ ವಚನಗಳಲ್ಲಿ ಹೀಗೆ ಸೂಚಿಸಲಾಗಿದೆ:

**"ನಾವು ನಿನ್ನನ್ನು ಮಾತ್ರ ಆರಾಧಿಸುತ್ತೇವೆ ಮತ್ತು ನಿನ್ನಿಂದ ಮಾತ್ರ ಸಹಾಯ ಯಾಚಿಸುತ್ತೇವೆ." (1:5)**

ನಾವು ಪವಿತ್ರ ಖುರ್‌ಆನನ್ನು ಆಳವಾಗಿ ಅಧ್ಯಯನ ಮಾಡಿದರೆ, ನಮ್ಮ ಉದ್ದೇಶವನ್ನು ತಲಪಲಿಕ್ಕೆ ಬೇಕಾಗಿರುವ ಎಲ್ಲಾ ಸಹಾಯಗಳನ್ನು ಅಲ್ಲಾಹನು ನಮಗೆ ಒದಗಿಸಿ ಕೊಟ್ಟಿರುತ್ತಾನೆ ಎಂದು ನಮಗೆ ತಿಳಿದು ಬರುತ್ತದೆ. ಅಲ್ಲಾಹನನ್ನು ಆರಾಧಿಸಬೇಕಾದರೆ ನಾವು ಅವನಲ್ಲಿ ದೃಢ ವಿಶ್ವಾಸ ಹೊಂದಿರಬೇಕು, ಅವನಿಗೆ ಭಯಪಡಬೇಕು ಮತ್ತು ಅವನನ್ನು ಪ್ರೀತಿಸಬೇಕು. ಈ ಪ್ರೇರಕ ಗುಣಗಳನ್ನು ಗಳಿಸುವ ಬಗ್ಗೆ ಪವಿತ್ರ ಖುರ್‌ಆನ್ ಸಾಕಷ್ಟು ವಿವರಣೆ ನೀಡಿದೆ. ವಿಶ್ವಾಸ ಎಂದರೇನು? ಅದನ್ನು ಗಳಿಸುವ ಬಗೆ ಹೇಗೆ? ಎಂಬುದನ್ನು ಅದು ವಿವರಿಸುತ್ತದೆ. ವಿಶ್ವಾಸ ಅಥವಾ ಈಮಾನ್ ಎಂದರೆ ಬರೇ ನಂಬಿಕೆಯಲ್ಲ. ಅದು ನಂಬಿಕೆಯ ಮಟ್ಟಕ್ಕಿಂತ ಮೇಲಿದೆ. ನಂಬಿಕೆ, ಭದ್ರತೆ ಮತ್ತು ವಿಶ್ವಸ್ತತೆ ಅದರಲ್ಲಿ ಸೇರಿವೆ. ಈಮಾನ್ ಶಬ್ದವು ಅಮನ್ ಶಬ್ದದಿಂದ ಉದ್ಭವಿಸಿದೆ. ಅಮನ್ ಎಂದರೆ ಭದ್ರತೆಯ ಭಾವನೆ ಹೊಂದುವುದು ಮತ್ತು ಬೇರೆ ಒಬ್ಬನಲ್ಲಿ ಅಥವಾ ಬೇರೆ ಒಂದರಲ್ಲಿ ವಿಶ್ವಸ್ತತೆಯನ್ನು ಹೊಂದುವುದು. ಪವಿತ್ರ ಖುರ್‌ಆನ್ ಈ ಕೆಳಗಿನ ವಚನದಲ್ಲಿ ಮನುಷ್ಯನನ್ನು ವಿಶ್ವಾಸದ ಮಾರ್ಗದಲ್ಲಿ ನಡೆಯುವಂತೆ ಮಾಡುತ್ತದೆ:

**"ಓ ವಿಶ್ವಾಸಿಗಳೇ, ಅಲ್ಲಾಹನಲ್ಲೂ ಅವನ ಸಂದೇಶ ವಾಹಕನಲ್ಲೂ ಅವನ ಸಂದೇಶವಾಹಕನಿಗೆ ಅವನು ಅವತೀರ್ಣಗೊಳಿಸಿದ ಗ್ರಂಥದಲ್ಲೂ ಅದಕ್ಕೆ ಮುಂಚೆ ಅವನು ಅವತೀರ್ಣಗೊಳಿಸಿದ ಗ್ರಂಥದಲ್ಲೂ ವಿಶ್ವಾಸವಿರಿಸಿರಿ. ಯಾರು ಅಲ್ಲಾಹನಲ್ಲೂ ಅವನ ದೂತರಲ್ಲೂ ಅವನ ಗ್ರಂಥಗಳಲ್ಲೂ ಅವನ ಸಂದೇಶವಾಹಕರಲ್ಲೂ ಅಂತ್ಯ ದಿನದಲ್ಲೂ ವಿಶ್ವಾಸವಿರಿಸುವುದಿಲ್ಲವೋ ಅವನು ದಾರಿಗೆಟ್ಟು ಬಹುದೂರ ಹೋಗಿರುವನು (ಎಂದು ತಿಳಿದುಕೊಳ್ಳಿರಿ)." (4:137)**

ಇಲ್ಲಿ ಅಲ್ಲಾಹನು ವಿಶ್ವಾಸದ ಐದು ಸ್ತಂಭಗಳನ್ನು ವಿವರಿಸಿದ್ದಾನೆ. ಏಕದೇವ ವಿಶ್ವಾಸ, ದೇವದೂತರ, ದೇವ ಸಂದೇಶವಾಹಕರ , ದೈವಿಕ ಗ್ರಂಥಗಳ ಮತ್ತು ಅಂತಿಮ ತೀರ್ಮಾನದ ದಿನದ ಬಗ್ಗೆ ವಿಶ್ವಾಸ.

ಇವುಗಳೆಲ್ಲಾ ಒಗ್ಗೂಡಿ ವಿಶ್ವಾಸದ ಪ್ರಯಾಣ ಹೊರಡುವ ಸ್ಥಾನವಾಗಿದೆ. ಆಧ್ಯಾತ್ಮಿಕ ಪ್ರಯಾಣವನ್ನು ಪ್ರಾರಂಭಿಸುವ ಮೊದಲು ಇವುಗಳನ್ನು ಅಂಗೀಕರಿಸುವುದು ಆವಶ್ಯಕವಾಗಿದೆ. ಇವುಗಳಲ್ಲಿ ಪ್ರತಿಯೊಂದು ಅಂಶದ ಕುರಿತು ಪವಿತ್ರ ಖುರ್‌ಆನ್ ಬಲಯುತವಾದ ವಾದಗಳನ್ನು ಮಂಡಿಸಿದೆ. ಉದಾಹರಣೆಗೆ, ದೇವನ ಏಕತ್ವದ ಕುರಿತು ಪವಿತ್ರ ಖುರ್‌ಆನ್, ದೇವನ ಸೃಷ್ಟಿಯಲ್ಲಿ ಕ್ರಮ ಬದ್ಧತೆಯ ಹೊರತು ಅದಕ್ಕೆ ವ್ಯತಿರಿಕ್ತವಾದುದನ್ನು ನಾವು ಕಾಣಲಾರೆವು ಎಂದು ಹೇಳುತ್ತದೆ. ದೇವನ ವಚನ ಮತ್ತು ಕೃತ್ಯಗಳ ಮಧ್ಯೆ ಯಾವುದೇ ವೈರುಧ್ಯವನ್ನು ನಾವು ಕಾಣಲಾರೆವು ಎಂದು ಅದು ಪ್ರತಿಪಾದಿಸುತ್ತದೆ. (67:2-5 ನೋಡಿರಿ), ಸೃಷ್ಟಿಯ ಕ್ರಮಬದ್ಧತೆ ಏಕದೇವನ ಅಸ್ತಿತ್ವವನ್ನು ಸೂಚಿಸುತ್ತದೆ.

ಮನುಷ್ಯನ ಸೇವೆಗಾಗಿ ಸೃಷ್ಟಿಸಲಾದ ಆಧ್ಯಾತ್ಮಿಕ ಕಾರ್ಯನಿರ್ವಾಹಕ ಜೀವಿಗಳೇ ದೇವದೂತರಾಗಿದ್ದಾರೆ. (ಮಲಕ್- ದೇವದೂತ, ಮಲಾಯಿಕ- ದೇವದೂತರು.) ಅವರು ದೇವ ಸಂದೇಶಗಳನ್ನು ಪ್ರವಾದಿಗಳಿಗೂ ಭಕ್ತರಾದ ದಿವ್ಯ ಮನುಷ್ಯರಿಗೂ ಎಂದರೆ ದೇವ ಸಾಮೀಪ್ಯ ಪಡೆದವರಿಗೆ ತಲಪಿಸುತ್ತಾರೆ. ಅವರು ಪ್ರಕೃತಿ ನಿಯಮಗಳನ್ನು ಜಾರಿಗೊಳಿಸುವ ವ್ಯವಸ್ಥೆಯನ್ನು ನಡೆಸುತ್ತಾರೆ. ಅವರು ಮನುಷ್ಯರ ಒಳ್ಳೆಯ ಅಥವಾ ಕೆಟ್ಟ ಕೆಲಸಗಳ ದಾಖಲೆಗಳನ್ನು ಇಟ್ಟುಕೊಂಡಿರುತ್ತಾರೆ. ಮನುಷ್ಯನ ಯೋಚನೆಗಳು ಮತ್ತು ಕೆಲಸಗಳು ಅವನ ಆತ್ಮವನ್ನು ಪ್ರಭಾವಕ್ಕೊಳಪಡಿಸುತ್ತವೆ. ದೇವದೂತರು ಕಾರಣ ಮತ್ತು ಪರಿಣಾಮದ ಜಟಿಲ ವ್ಯವಸ್ಥೆಯನ್ನು ನಡೆಸಿಕೊಂಡು ಹೋಗುತ್ತಾರೆ.

ಭೌತಿಕ ವಿಶ್ವದಲ್ಲಿಯೂ ಆಧ್ಯಾತ್ಮಿಕ ವಿಶ್ವದಲ್ಲಿಯೂ ದೇವದೂತರು ದೇವೇಚ್ಛೆಯನ್ನು ಈಡೇರಿಸಿಕೊಂಡು ಹೋಗುತ್ತಾರೆ. ಅವರು ಪ್ರವಾದಿಗಳ ಮತ್ತು ಗ್ರಂಥಗಳ ಮಧ್ಯೆ ಇರುವ ಕೊಂಡಿಗಳಾಗುತ್ತಾರೆ. ಅವರ ಮೂಲಕ ಗ್ರಂಥಗಳು ಅವತೀರ್ಣಗೊಳ್ಳುತ್ತವೆ. ದೇವನು ಕಳುಹಿಸಿದ ಪ್ರವಾದಿಗಳಲ್ಲಿ ವಿಶ್ವಾಸ ಹೊಂದುವುದರಲ್ಲಿ ಹಝ್ರತ್ ಮುಹಮ್ಮದ್ ಪೈಗಂಬರ್ (ಸಲ್ಲಲ್ಲಾಹು ಅಲೈಹಿ ವಸಲ್ಲಂ)ರವರನ್ನು ನಂಬುವುದರ ಜೊತೆಗೆ ದೇವ ನೇಮಿತ ಇತರ ಎಲ್ಲಾ ಪ್ರವಾದಿಗಳನ್ನು ನಂಬುವುದು ಸೇರುತ್ತದೆ. ಅದೇ ರೀತಿ ಗ್ರಂಥಗಳಲ್ಲಿ ವಿಶ್ವಾಸ ಹೊಂದುವುದರಲ್ಲಿ ಪವಿತ್ರ ಖುರ್‌ಆನನ್ನು ನಂಬುವುದರ ಜೊತೆಗೆ ಅವತೀರ್ಣಗೊಳಿಸಲ್ಪಟ್ಟ ಇತರ ಎಲ್ಲಾ ಗ್ರಂಥಗಳನ್ನು ನಂಬುವುದು ಸೇರುತ್ತದೆ. ಕೊನೆಯದಾಗಿ, ಅಂತಿಮ ತೀರ್ಮಾನದ ದಿನದ ಕುರಿತು ವಿಶ್ವಾಸ ಹೊಂದುವುದನ್ನು ಪವಿತ್ರ ಖುರ್‌ಆನ್ ಆದೇಶಿಸುತ್ತದೆ. ಆ ದಿನ ಪ್ರತಿಯೊಬ್ಬ ವ್ಯಕ್ತಿ ತನ್ನ ಒಳ್ಳೆಯ ಮತ್ತು ಕೆಟ್ಟ ಕೆಲಸಗಳ ಲೆಕ್ಕ ಕೊಡಬೇಕಾಗುವುದು. ಬಹುಮಾನಗಳು ಮತ್ತು ದಂಡನೆಗಳು ವ್ಯಕ್ತಿಗಳ ಕೆಲಸಗಳಿಗನುಸಾರವಾಗಿ ದೊರಕುವುವು.

## ಶುಭ ಪ್ರತೀಕ್ಷೆ ಮತ್ತು ಭಯ

ಶುಭ ಪ್ರತೀಕ್ಷೆ ಮತ್ತು ಭಯ ಮನುಷ್ಯನ ಕೆಲಸಗಳಿಗೆ ಚಾಲನೆ ನೀಡುವ ಪ್ರಮುಖ ಘಟಕಗಳಾಗಿವೆ. ಮನುಷ್ಯನ ನಿರ್ಧಾರಗಳು ಮತ್ತು ಕೆಲಸಗಳು ಬಹುಮಾನ ಗಳಿಸುವ ಶುಭ ಪ್ರತೀಕ್ಷೆಯ ಕಾರಣದಿಂದ ಅಥವಾ ಕಷ್ಟಕ್ಕೊಳಗಾಗುವೆನೆಂದು ಭಯದ ಕಾರಣದಿಂದ ಉತ್ತೇಜಿಸಲ್ಪಡುತ್ತವೆ. ಅಹ್ಮದಿಯಾ ಜಮಾಅತಿನ ಚತುರ್ಥ ಖಲೀಫರಾಗಿದ್ದ ಹಝ್ರತ್ ಮಿರ್ಝಾತಾಹಿರ್ ಅಹ್ಮದ್(ರ) ಹೀಗೆ ಹೇಳುತ್ತಾರೆ:

"ಮನುಷ್ಯನ ನಿರ್ಧಾರಗಳು ಮತ್ತು ಅನಂತರ ಆತನು ಮಾಡುವ ಕೆಲಸಗಳು ಯಾವಾಗಲೂ ಭಯ ಮತ್ತು ಶುಭ ಪ್ರತೀಕ್ಷೆಗಳಿಂದ ನಡೆಸಲ್ಪಟ್ಟು ನಿಯಂತ್ರಿಸಲ್ಪಡುತ್ತವೆ. ಈ ನಿಯಮಕ್ಕೆ ಅಪವಾದವಾಗಿರುವುದೇನೂ ಇರುವುದಿಲ್ಲ. ಒಳ್ಳೆಯ ಕೆಲಸ ಮಾಡುವವರು ಭಯ ಮತ್ತು ಶುಭ ಪ್ರತೀಕ್ಷೆಯಿಂದ ಮಾಡುವ ಹಾಗೆಯೇ ಕೆಟ್ಟ ಕೆಲಸ ಮಾಡುವವರೂ ಇವುಗಳಿಂದಲೇ ಪ್ರೇರೇಪಣೆ ಪಡೆಯುತ್ತಾರೆ." (An Elementary Study of Islam)

ಪವಿತ್ರ ಖುರ್‌ಆನ್ ಮನುಷ್ಯನನ್ನು ಶುಭ ಪ್ರತೀಕ್ಷೆ ಮತ್ತು ಭಯದ ಮೂಲಕ ಪ್ರೇರೇಪಿಸಿ ಅವನನ್ನು ಸೃಷ್ಟಿಸಿದುದರ ಉದ್ದೇಶವನ್ನು ಗಳಿಸುವಂತೆ ಮಾಡುತ್ತದೆ. ಎಂದೂ ಮುಗಿದು ಹೋಗದ ಬಹುಮಾನಗಳನ್ನು ಗಳಿಸಬಹುದೆಂಬ ಶುಭ ಪ್ರತೀಕ್ಷೆ ನಮ್ಮಲ್ಲಿ ಅದು ಉಂಟುಮಾಡುತ್ತದೆ. ನಾವು ನಮ್ಮ ಕರ್ತವ್ಯಗಳನ್ನು ಪಾಲಿಸುವುದರಲ್ಲಿ ಉದಾಸೀನರಾಗಿ ಅಲ್ಲಾಹನ ಕೋಪಕ್ಕೆ ಪಾತ್ರರಾಗುವ ಕುರಿತು ಅದು ನಮಗೆ ಮುನ್ನೆಚ್ಚರಿಕೆ ನೀಡುತ್ತದೆ.

ದೇವನ ಏಕತ್ವ ಮತ್ತು ಅವನ ಸರ್ವಶಕ್ತಿಯ ನಮ್ಮ ವಿಶ್ವಾಸ ನಾವು ನಮ್ಮ ಪ್ರತೀಕ್ಷೆಗಳನ್ನೂ ಭಯವನ್ನೂ ಅವನ ಮೇಲೆ ಮಾತ್ರ ಇರಿಸುವುದಕ್ಕೆ ಪ್ರೇರಿಸುತ್ತದೆ. ಅದು ಮನುಷ್ಯನನ್ನು ಇತರ ಎಲ್ಲಾ ನೊಗಗಳಿಂದ ಬಿಡುಗಡೆಗೊಳಿಸುತ್ತದೆ. ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

**"ಯಾರು ವಿಶ್ವಾಸ ಹೊಂದಿ ಸತ್ಕರ್ಮ ನಿರತರಾಗುತ್ತಾರೋ, ಅವರಿಗೆ ಅವರ ಕರ್ಮಗಳ ಪ್ರತಿಫಲವಾಗಿ ಸತ್ಕಾರವೆಂಬಂತೆ ಶಾಶ್ವತ ವಾಸಸ್ಥಳವಾದ ಸ್ವರ್ಗೀಯ ತೋಟಗಳು ಲಭಿಸುವುವು." (32:20)**

ನ್ಯಾಯ ತೀರ್ಮಾನದ ದಿನದ ಬಗ್ಗೆ ವಿಶ್ವಾಸವು ಇಸ್ಲಾಮಿನ ಮೂಲಭೂತ ತತ್ವವಾಗಿರುವುದು ಏಕೆ ಎಂದು ನಾವು ಇಲ್ಲಿ ಕಾಣುತ್ತೇವೆ. ಪರಲೋಕದ ಕುರಿತು ವಿಶ್ವಾಸವಿಲ್ಲದಿದ್ದರೆ ಮೇಲಿನ ವಚನವು ಯಾರನ್ನೂ ಒಳ್ಳೆಯ ಕೆಲಸ ಮಾಡಲು ಪ್ರೋತ್ಸಾಹಿಸಲಾರದು. ಅದೇ ರೀತಿ ಅಂತಹ ವಿಶ್ವಾಸ ಹೊಂದದವನನ್ನು ಈ ಕೆಳಗಿನ ವಚನವು ಕೆಟ್ಟ ಕೆಲಸದಿಂದ ತಡೆಯಲಾರದು:

**"ಯಾರು ಧಿಕ್ಕಾರಿಳಾಗುತ್ತಾರೋ, ಅವರ ವಾಸಸ್ಥಳ ನರಕವಾಗಿದೆ. ಅವರು ಅಲ್ಲಿಂದ ಹೊರಗೆ ಬರಲು ಬಯಸುವಾಗಲೆಲ್ಲ ಅಲ್ಲಿಗೆಯೇ ಅವರನ್ನು ಮರಳಿಸಲಾಗುವುದು. 'ನೀವು ಅಲ್ಲಗಳೆಯುತ್ತಿದ್ದ ನರಕ ಶಿಕ್ಷೆಯನ್ನು ರುಚಿಸಿರಿ' ಎಂದು ಅವರೊಡನೆ ಹೇಳಲಾಗುವುದು." (32:21)**

ಪವಿತ್ರ ಖುರ್‌ಆನ್ ಕಠಿಣ ಶಿಕ್ಷೆಯ ಎಚ್ಚರಿಕೆ ನೀಡುವಾಗ ಸಹ ಇನ್ನೊಮ್ಮೆ ನಮಗೆ ಅದು ಶುಭ ಪ್ರತೀಕ್ಷೆ ಉಂಟಾಗುವಂತೆ ಮಾಡುತ್ತದೆ.

**"ದೊಡ್ಡ ಶಿಕ್ಷೆಗೆ ಮುಂಚೆ ಸಣ್ಣ ಶಿಕ್ಷೆಯ ಪೈಕಿ ಕೆಲವನ್ನು ಅವರು ಅನುಭವಿಸುವಂತೆ ನಾವು ಮಾಡುವೆವು - ಅವರು (ಪಶ್ಚಾತ್ತಾಪ ಪಟ್ಟು) ನಮ್ಮ ಕಡೆಗೆ ಮರಳಲಿಕ್ಕೋಸ್ಕರ." (32:22)**

ಈ ವಚನ ಸೂಚಿಸುವುದೇನೆಂದರೆ, ನಾವು ತಪ್ಪು ಕೆಲಸ ಮಾಡಿದ ನಂತರವೂ ನಾವು ನಮ್ಮನ್ನು ಸುಧಾರಣೆ ಮಾಡಿಕೊಳ್ಳಲು ನಮಗೆ ಸಾಕಷ್ಟು ಅವಕಾಶಗಳನ್ನು ದೇವನು ದಯಪಾಲಿಸುತ್ತಾನೆ ಮತ್ತು ನಾವು ನಮ್ಮನ್ನು ನರಕಾಗ್ನಿಯಿಂದ ರಕ್ಷಿಸಿಕೊಳ್ಳುವಂತೆ ಮಾಡುತ್ತಾನೆ.

ಪವಿತ್ರ ಖುರ್‌ಆನಿನ ಈ ಕೆಳಗಿನ ವಚನ ಈ ಬಗ್ಗೆ ಹೀಗೆ ಹೇಳುತ್ತದೆ:

**(ನನ್ನ ಸಂದೇಶವಾಗಿ ಅವರೊಡನೆ) ಹೇಳು: "ತಮ್ಮ ಸ್ವಂತ ಆತ್ಮಕ್ಕೆ ದ್ರೋಹವೆಸಗಿದ ನನ್ನ ದಾಸರೇ, ಅಲ್ಲಾಹನ ಕೃಪೆಯ ಬಗ್ಗೆ ನೀವು ನಿರಾಶೆಪಡಬೇಡಿರಿ. ಖಂಡಿತವಾಗಿಯೂ ಅಲ್ಲಾಹನು ನಿಮ್ಮ ಎಲ್ಲಾ ಅಪರಾಧಗಳನ್ನೂ ಕ್ಷಮಿಸುವನು. ನಿಶ್ಚಯವಾಗಿಯೂ ಅವನು ಅತ್ಯಂತ ಕ್ಷಮಾಶೀಲನೂ ಕಾರುಣ್ಯವಂತನೂ ಆಗಿದ್ದಾನೆ." (39:54)**

ಮೇಲಿನ ವಚನ ಅಲ್ಲಾಹನ ಬಗ್ಗೆ ನಾವು ಶುಭ ಪ್ರತೀಕ್ಷೆ ಇರಿಸುವಂತೆ ಪ್ರೋತ್ಸಾಹಿಸುತ್ತದೆ. ಅಲ್ಲಾಹನು ತನ್ನ ದಾಸರನ್ನು ಪ್ರೀತಿಯಿಂದ ಸಂಬೋಧಿಸಿದುದನ್ನು ಆಲಿಸುವಾಗ ಅವನ ಕುರಿತು ಅವನ ದಾಸರಲ್ಲಿ ಪ್ರೀತಿ ಜನಿಸುವಂತೆ ಮಾಡುತ್ತದೆ.

ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನ ಕೋಪ ಮತ್ತು ಅವನ ಶಿಕ್ಷೆಯನ್ನು ವಿವರಿಸುವ ವಚನಗಳು ತುಂಬಿರುವ ಹಾಗೆಯೇ ಅವನ ಕರುಣೆ ಮತ್ತು ದಯೆಯನ್ನು ವಿವರಿಸುವ ವಚನಗಳೂ ಇವೆ. ಮೊದಲನೆಯ ವರ್ಗದ ವಚನಗಳು ಅಲ್ಲಾಹನ ದಾಸರಲ್ಲಿ ಅವನ ಬಗ್ಗೆ ಭಯವನ್ನುಂಟುಮಾಡುವಾಗ ದ್ವಿತೀಯ ವರ್ಗದ ವಚನಗಳು ಅವನ ದಾಸರಲ್ಲಿ ಅವನಿಂದ ಶುಭವನ್ನು ಪ್ರತೀಕ್ಷಿಸುವಂತೆ ಮಾಡುತ್ತವೆ. ಶುಭ ಪ್ರತೀಕ್ಷೆ ಮತ್ತು ಭಯ ಇವು ಈ ಮೊದಲು ಹೇಳಿದ ಹಾಗೆ ಮನುಷ್ಯನ ಉದ್ದೇಶಗಳನ್ನೂ ಕೆಲಸಗಳನ್ನೂ ಪ್ರೇರೇಪಿಸುತ್ತವೆ. ತನ್ನ ಜೀವಿತದ ಉದ್ದೇಶವನ್ನು ಗಳಿಸಲು ಇವೆರಡು ಪ್ರೇರಕ ಶಕ್ತಿಗಳು ಸಾಕಷ್ಟು ಪ್ರಮಾಣದಲ್ಲಿ ಮನುಷ್ಯನಿಗೆ ಆವಶ್ಯಕವಾಗಿವೆ ಮತ್ತು ಪವಿತ್ರ ಖುರ್‌ಆನ್ ಅದನ್ನು ಒದಗಿಸಿಕೊಡುತ್ತದೆ.

## ಧಾರ್ಮಿಕತೆ

ಧಾರ್ಮಿಕತೆ ಎಂದರೇನೆಂದು ಪವಿತ್ರ ಖುರ್‌ಆನ್ ಮನುಷ್ಯರಿಗೆ ಕಲಿಸಿಕೊಡುತ್ತದೆ. ಅದು ದೇವನ ಗುಣಗಳನ್ನು ವಿವರಿಸಿ ಮನುಷ್ಯನಿಗೆ ಅವನ ಆತ್ಮದ ಅಭಿವೃದ್ಧಿಗೆ ಬೇಕಾದ ರೂಪರೇಖೆಯನ್ನು ಕೊಡುತ್ತದೆ. ಒಬ್ಬನು ಧರ್ಮನಿಷ್ಠನಾಗಬೇಕಾದರೆ ದೇವಗುಣಗಳನ್ನು ತನ್ನ ಮನುಷ್ಯ ಸಹಜವಾದ ಸಾಮರ್ಥ್ಯಕ್ಕೆ ಅನುಸಾರವಾಗಿ ತನ್ನಲ್ಲಿ ಅಳವಡಿಸಿಕೊಳ್ಳಲು ಪ್ರಯತ್ನಿಸಬೇಕು. ಹಝ್ರತ್ ಮುಹಮ್ಮದ್ ಪೈಗಂಬರರು(ಸ) ಅಲ್ಲಾಹನ ಗುಣಗಳ ಪರಿಪೂರ್ಣವಾದ ಪ್ರತಿಬಿಂಬವಾಗಿದ್ದರು. ಅಲ್ಲಾಹನ ವಿವಿಧ ಗುಣಗಳನ್ನು ವಿವರಿಸಿ ದೇವನನ್ನು ಪ್ರೀತಿಸಲು ಮತ್ತು ಭಯಪಡಲು ಇರುವ ಧಾರಾಳ ಕಾರಣಗಳನ್ನು ಪವಿತ್ರ ಖುರ್‌ಆನ್ ಸೂಚಿಸುತ್ತದೆ. ಅದು ಅಲ್ಲಾಹನ ಸೌಂದರ್ಯ, ಅವನ ಮಹಿಮೆ, ಅವನ ಕರುಣೆ, ಉಪಕಾರ ಮೊದಲಾದವುಗಳನ್ನು ವಿವರಿಸುತ್ತದೆ. ಅವುಗಳು ಅವನನ್ನು ಪ್ರೀತಿಸುವ ಸ್ಫೂರ್ತಿ ನಮ್ಮಲ್ಲಿ ಉಂಟುಮಾಡುತ್ತವೆ. ಅವನು ಸರ್ವಶಕ್ತನೂ ಕಠಿಣವಾಗಿ ಶಿಕ್ಷಿಸುವವನೂ ಎಂಬ ಗುಣಗಳನ್ನು ವಿವರಿಸಿ ನಾವು ಅವನಿಗೆ ಭಯಪಡುವಂತೆ ಅದು ಮಾಡುತ್ತದೆ.

ದೇವನ ಕೆಲವು ಗುಣಗಳು ನಮ್ಮಲ್ಲಿ ಭಯವನ್ನೂ ಶುಭಪ್ರತೀಕ್ಷೆಯನ್ನೂ ಏಕ ಕಾಲದಲ್ಲಿ ಉಂಟು ಮಾಡುತ್ತವೆ. ಉದಾಹರಣೆಗೆ ಹೇಳುವುದಾದರೆ, ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ: "ಅಲ್ಲಾಹನು ಎಲ್ಲವನ್ನೂ ನೋಡುತ್ತಾನೆ. ಅವನ ದೃಷ್ಟಿಯಿಂದ ಏನೂ ಮರೆಯಾಗಿರುವುದಿಲ್ಲ." ಇದು ನಮ್ಮನ್ನು ಒಳ್ಳೆಯ ಕೆಲಸ ಮಾಡಲು ಪ್ರೇರೇಪಿಸುತ್ತದೆ ಮತ್ತು ಕೆಟ್ಟ ಕೆಲಸ ಮಾಡದಂತೆ ತಡೆಯುತ್ತದೆ. ಅಲ್ಲಾಹನು ಕ್ಷಮಿಸುವವನೂ ಕರುಣಾಮಯನೂ ಆಗಿರುವನೆಂದು ಪವಿತ್ರ ಖುರ್‌ಆನ್ ಹಲವಾರು ಸಾರಿ ಹೇಳುತ್ತದೆ. ಇದು ನಾವು ದೇವನ ಸೃಷ್ಟಿಗಳೊಂದಿಗೆ ಇದೇ ರೀತಿ ವರ್ತಿಸಬೇಕೆಂಬ ಪಾಠವನ್ನು ಕಲಿಸುತ್ತದೆ.

ಅಲ್ಲಾಹನು ನ್ಯಾಯಪರನೆಂದು ಪವಿತ್ರ ಖುರ್‌ಆನ್ ಹೇಳುತ್ತದೆ. ಆದುದರಿಂದ ನಾವು ನಮ್ಮ ಎಲ್ಲಾ ವ್ಯವಹಾರಗಳನ್ನು ನ್ಯಾಯೋಚಿತವಾಗಿ ಮಾಡಬೇಕು. ಅಲ್ಲಾಹನು ಸಹನೆದೋರುವವನಾಗಿದ್ದಾನೆ. ಆದುದರಿಂದ ನಾವು ಕಷ್ಟಕಾಲದಲ್ಲಿಯೂ ಸಹನೆದೋರಿ ಸ್ಥಿರಚಿತ್ತರಾಗಿರಬೇಕು. ಸಂಕ್ಷಿಪ್ತವಾಗಿ ಹೇಳುವುದಾದರೆ, ಪವಿತ್ರ ಖುರ್‌ಆನ್ ಅಲ್ಲಾಹನ ಬಗ್ಗೆ ಪೂರ್ಣ ಸ್ವರೂಪದ ಚಿತ್ರಣವನ್ನು ನಮಗೆ ನೀಡಿ ನಾವು ನಮ್ಮಲ್ಲಿ ಅಭಿವೃದ್ಧಿಗೊಳಿಸಬೇಕಾದ ಗುಣಗಳನ್ನು ತೋರಿಸಿಕೊಡುತ್ತದೆ. ನಾವು ನಮ್ಮ

ಶಕ್ತಿಗನುಸಾರವಾಗಿ ದೈವಿಕ ಗುಣಗಳನ್ನು ನಮ್ಮಲ್ಲಿ ಅಭಿವೃದ್ಧಿಗೊಳಿಸಿದರೆ ನಾವು ಧರ್ಮನಿಷ್ಠ ವ್ಯಕ್ತಿಗಳಾಗುತ್ತೇವೆ. ಇದೇ ನಮ್ಮ ಜೀವಿತದ ಲಕ್ಷ್ಯವಾಗಿದೆ.

## ಸತ್ಯ ವಿಶ್ವಾಸಿಗಳು ಮತ್ತು ಅವಿಶ್ವಾಸಿಗಳು

ಪವಿತ್ರ ಖುರ್‌ಆನ್‌ನಲ್ಲಿ ಸತ್ಯವಿಶ್ವಾಸಿಗಳ ಮತ್ತು ಅವಿಶ್ವಾಸಿಗಳ ಗುಣಗಳನ್ನು ವಿವರಿಸಲಾಗಿದೆ. ಇವು ನಮ್ಮ ದೈನಂದಿನ ಜೀವಿತವನ್ನು ತಪಾಸಣೆ ಮಾಡಲು ಸಹಾಯಕವಾಗಿವೆ.

ಸತ್ಯ ವಿಶ್ವಾಸಿಗಳ ಗುಣಗಳನ್ನು ಹೀಗೆ ವಿವರಿಸಲಾಗಿದೆ:

**" ಅವರು ತಮ್ಮ ಅಮಾನತ್ತು ಮತ್ತು ತಮ್ಮ ಒಡಂಬಡಿಕೆಗಳ ಬಗ್ಗೆ ಜಾಗರೂಕತೆ ವಹಿಸುವವರು, ಪ್ರಾಮಾಣಿಕವಾಗಿ ಸಾಕ್ಷ್ಯ ಹೇಳುವವರು, ತಮ್ಮ ಪ್ರಾರ್ಥನೆಗಳನ್ನು (ನಮಾಝ್‌ಗಳನ್ನು) ನಿಷ್ಠೆಯಿಂದ ನಿರ್ವಹಿಸಿ ಕಾಪಾಡುವವರು - ಈ ಜನರೇ ಸ್ವರ್ಗದಲ್ಲಿ ಆದರಿಸಲ್ಪಡುವವರು." (70:33-36)**

ಇನ್ನೊಂದು ವಚನ ಹೀಗಿದೆ:

**"ಖಂಡಿತವಾಗಿಯೂ ಅಮಾನತ್ತುಗಳನ್ನು ಅವುಗಳ ಹಕ್ಕುದಾರರಿಗೆ ವಹಿಸಿಕೊಡಬೇಕೆಂದೂ ಜನರೆಡೆಯಲ್ಲಿ ನೀವು ತೀರ್ಪು ನೀಡುವಾಗ ನ್ಯಾಯಯುತವಾಗಿ ತೀರ್ಪು ನೀಡಬೇಕೆಂದೂ ಅಲ್ಲಾಹನು ನಿಮ್ಮೊಡನೆ ಆಜ್ಞಾಪಿಸುತ್ತಾನೆ." (4:59)**

ಮೇಲಿನ ವಚನಗಳಲ್ಲಿ ಸತ್ಯವಿಶ್ವಾಸಿಗಳು ಪ್ರಾಮಾಣಿಕರೂ ನೀತಿವಂತರೂ ನ್ಯಾಯಪರರೂ ಆಗಿದ್ದಾರೆಂದು ವಿವರಿಸಲಾಗಿದೆ. ಮನುಷ್ಯನು ದೇವ ಭಕ್ತನಾಗಲು ತನ್ನಲ್ಲಿ ಅಭಿವೃದ್ಧಿಗೊಳಿಸಬೇಕಾದ ಗುಣಗಳ ಕುರಿತು ಪವಿತ್ರ ಖುರ್‌ಆನ್ ಮೇಲಿನ ವಚನಗಳಲ್ಲಿ ಮಾರ್ಗದರ್ಶನ ನೀಡುತ್ತದೆ.

ಪವಿತ್ರ ಖುರ್‌ಆನ್ ಅವಿಶ್ವಾಸಿಗಳನ್ನು ಚಿತ್ರಿಸಿ ನಾವು ಅವಿಶ್ವಾಸಿಗಳಾಗುವುದರಿಂದ ಹೇಗೆ ನಮ್ಮನ್ನು ರಕ್ಷಿಸಿಕೊಳ್ಳಬಹುದೆಂಬುದನ್ನೂ ತಿಳಿಸುತ್ತದೆ.

**"ದಿಟವಾಗಿಯೂ ಅವರು ಅಹಂಭಾವಿಗಳಾಗಿದ್ದಾರೆ ಹಾಗೂ ಬಹಳವಾಗಿ ಹದ್ದು ಮೀರಿ ವರ್ತಿಸಿದ್ದಾರೆ." (25:22)**

ಇನ್ನೊಂದು ವಚನ:

**"ಖಂಡಿತವಾಗಿಯೂ ಅವರು ಸುಳ್ಳು ಹೇಳುವವರಾಗಿದ್ದಾರೆ." (6:29)**

ಮತ್ತೊಂದು ವಚನ :

**"ಬಹುದೇವರಾಧಕರಿಗೆ ನಾಶವಿದೆ. ಅವರು ಝಕಾತ್ ಕೊಡದವರಾಗಿದ್ದಾರೆ. " (41:7-8)**

ಇಲ್ಲಿ ಅವಿಶ್ವಾಸಿಗಳನ್ನು ಅಹಂಭಾವ ಹೊಂದಿದವರೆಂದೂ ವಂಚಿಸುವವರೆಂದೂ ಜಿಪುಣರಾಗಿರುವವರೆಂದೂ ವಿವರಿಸಲಾಗಿದೆ. ನಾವು ನಿಜವಾದ ದೇವಭಕ್ತರಾಗಲು ನಾವು ಕೈ ಬಿಡಬೇಕಾದ ದುರ್ಗುಣಗಳನ್ನು ಪವಿತ್ರ ಖುರ್‌ಆನ್ ವಿವರಿಸುತ್ತದೆ.

ಪವಿತ್ರ ಖುರ್‌ಆನ್ ಸತ್ಯ ವಿಶ್ವಾಸಿಗಳನ್ನೂ ಅವಿಶ್ವಾಸಿಗಳನ್ನೂ ವಿವರಿಸಿ ನಾವು ಸತ್ಯವಿಶ್ವಾಸಿಗಳಾಗಲು ಆವಶ್ಯವಾದ ಮತ್ತು ಅವಿಶ್ವಾಸಿಗಳಾಗದಂತೆ ನಮ್ಮನ್ನು ರಕ್ಷಿಸುವ ವಿಧಾನಗಳನ್ನು ತೋರಿಸುತ್ತದೆ.

ನಾವು ನಮ್ಮ ದೈನಂದಿನ ಜೀವಿತವನ್ನು ಮೇಲಿನ ವಚನಗಳ ಬೆಳಕಿನಲ್ಲಿ ಪರೀಕ್ಷಿಸಿ ನಾವು ಸತ್ಯ ವಿಶ್ವಾಸದ ಕಡೆಗೆ ಚಲಿಸುತ್ತಿದ್ದೇವೋ ಅಥವಾ ಅದರಿಂದ ದೂರ ಸಾಗುತ್ತಿದ್ದೇವೋ ಎರಡು ನಿರ್ಧರಿಸಲು ಸಾಧ್ಯವಾಗುತ್ತದೆ.

## ವಿಶ್ವಾಸ ಮತ್ತು ಕೆಲಸ - ಇವುಗಳ ಸಂಬಂಧ

ಪವಿತ್ರ ಖುರ್‌ಆನ್ ಹೇಳುವುದೇನೆಂದರೆ, ಸತ್ಯವಿಶ್ವಾಸವು ಸತ್ಕಾರ್ಯಗಳಿಗೆ ಪ್ರೇರಕವಾಗಿರುತ್ತದೆ. ವಿಶ್ವಾಸವೆಂಬುದು ಹೃದಯದ ಒಂದು ಸ್ಥಿತಿಯಾಗಿದೆ. ಅದರೊಂದಿಗೆ ಸತ್ಕಾರ್ಯಗಳು ಇಲ್ಲದಿದ್ದರೆ ಅದು ನಾಶವಾಗುವ ಅಪಾಯವಿದೆ. ಅವುಗಳು ಪರಸ್ಪರ ಸಂಬಂಧಿಸಿವೆ. ಸತ್ಯವಿಶ್ವಾಸದಿಂದ ಸತ್ಕಾರ್ಯಗಳು ನಡೆಯುತ್ತವೆ. ಸತ್ಕಾರ್ಯಗಳು ಸತ್ಯ ವಿಶ್ವಾಸವನ್ನು ದೃಢಪಡಿಸುತ್ತವೆ. ಹೀಗೆ ಒಂದು ಸದ್ಗುಣ ವಲಯವು ಸೃಷ್ಟಿಸಲ್ಪಡುತ್ತದೆ. ಸತ್ಯ ವಿಶ್ವಾಸ ಮತ್ತು ಸತ್ಕಾರ್ಯಗಳು ಜೊತೆಜೊತೆಗೆ ಸಾಗುತ್ತವೆ. ಅವುಗಳೆರಡು ಜೊತೆಯಲ್ಲಿರುವಾಗ ವ್ಯಕ್ತಿ ಮತ್ತು ಸಮಾಜ ಅದರಿಂದ ಲಾಭಗಳಿಸುತ್ತವೆ.

ನಾವು ಸತ್ಯವಿಶ್ವಾಸದ ಮೂಲ ತತ್ವಗಳನ್ನು ಮೇಲೆ ವಿವರಿಸಿದ್ದೇವೆ. ಸತ್ಯ ವಿಶ್ವಾಸದಿಂದ ಎಂತಹ ಸತ್ಕಾರ್ಯಗಳು ಹೊರಡಬೇಕೆಂದು ಪವಿತ್ರ ಖುರ್‌ಆನ್ ನಿರ್ಧರಿಸುತ್ತದೆ. ಅದು ಹೀಗೆ ಹೇಳಿದೆ:

**"ಓ ಸತ್ಯ ವಿಶ್ವಾಸಿಗಳೇ, ನೀವು ಪರಿಪೂರ್ಣ ನ್ಯಾಯ ನಿಷ್ಠೆಯುಳ್ಳವರೂ ಅಲ್ಲಾಹನಿಗೋಸ್ಕರ ಸಾಕ್ಷ್ಯವಹಿಸುವವರೂ ಆಗಿರಿ; ಅದು ನಿಮಗೆ ಅಥವಾ (ನಿಮ್ಮ) ಮಾತಾಪಿತರಿಗೆ ಅಥವಾ ನಿಕಟ ಬಂಧುಗಳಿಗೆ ವಿರುದ್ಧವಾಗಿದ್ದರೂ ಸರಿ." (4:136)**

ಪುನಃ ಹೀಗೆ ಹೇಳಿದೆ:

**"ನ್ಯಾಯ ನಿಷ್ಠೆಗೆ ಬದ್ಧರಾಗಲಿಕ್ಕೂ ಔದಾರ್ಯ ತೋರಿಸಲಿಕ್ಕೂ ನಿಕಟ ಬಂಧುಗಳಿಗೆ ಎಂಬಂತೆ (ಪರರಿಗೂ) ಸಹಾಯ ಮಾಡಲಿಕ್ಕೂ ಅಲ್ಲಾಹನು ಅಜ್ಞಾಪಿಸುತ್ತಾನೆ. ಅಸಭ್ಯತೆಯನ್ನೂ ದುಷ್ಕೃತ್ಯವನ್ನೂ ನಿಯಮೋಲ್ಲಂಘನೆಯನ್ನೂ ಅವನು ನಿಷಿದ್ಧಗೊಳಿಸಿದ್ದಾನೆ. ಆ ಬಗ್ಗೆ ಲಕ್ಷ್ಯಗೊಡಲಿಕ್ಕೆ ಅವನು ನಿಮಗೆ ಉಪದೇಶ ಕೊಡುತ್ತಾನೆ." (16:91)**

ಈ ಎರಡು ಚಿಕ್ಕ ವಚನಗಳಲ್ಲಿ ಪವಿತ್ರ ಖುರ್‌ಆನ್ ಮನುಷ್ಯನ ನೈತಿಕ ಮತ್ತು ಆಧ್ಯಾತ್ಮಿಕ ಪರಿಪೂರ್ಣತೆಗೆ ಮತ್ತು ಭೂಮಿಯಲ್ಲಿ ಶಾಂತಿಯನ್ನು ಸ್ಥಾಪಿಸಲು ಸಹಾಯಕವಾಗಿರುವ ಅತ್ಯಂತ ವ್ಯಾಪಕವಾದ ಉಪದೇಶವನ್ನು ನೀಡುತ್ತಿದೆ.

ಸತ್ಯ ವಿಶ್ವಾಸಿಗಳು ನ್ಯಾಯದ ತತ್ವಗಳಿಗೆ ಬಿಗಿಯಾಗಿ ಅಂಟಿಕೊಂಡಿರಬೇಕೆಂದೂ ಅವರಿಗೂ ಅವರ ಸಂಬಂಧಿಕರಿಗೂ ಹಾನಿ ಉಂಟಾಗುವ ಸಂದರ್ಭಗಳಲ್ಲಿ ಸಹ ಸತ್ಯವಾದ ಸಾಕ್ಷಿ ಹೇಳಬೇಕೆಂದೂ ಪವಿತ್ರ ಖುರ್‌ಆನ್ ಮೇಲಿನ ವಚನಗಳಲ್ಲಿ ಉಪೇಶಿಸಿದೆ.

ಸತ್ಯ ವಿಶ್ವಾಸಿಗಳು ಪಾಲಿಸಬೇಕಾದ ಅತ್ಯಂತ ಕನಿಷ್ಠ ನಡೆವಳಿಕೆ ನ್ಯಾಯಪರತೆಯಾಗಿದೆ. ಆದರೆ ಅಷ್ಟು ಮಾತ್ರದಿಂದ ತೃಪ್ತಿ ಹೊಂದಬಾರದು.

ಅವರು ಮುಂದುವರಿದು ನ್ಯಾಯದಾನದೊಂದಿಗೆ ಉಪಕಾರವನ್ನೂ ಮಾಡುವವರಾಗಬೇಕು. ಕ್ಷಮಿಸುವುದು, ದಾನಧರ್ಮ ಕೊಡುವುದು, ಔದಾರ್ಯ ತೋರಿಸುವುದು ಇವುಗಳೆಲ್ಲಾ ಪರೋಪಕಾರಿ ಗುಣಗಳಾಗಿವೆ.

ಈ ಘಟ್ಟದಿಂದ ಮುಂದುವರಿದು ಸತ್ಯ ವಿಶ್ವಾಸಿಗಳು ತಮ್ಮ ನಡೆವಳಿಕೆಯನ್ನು ತಮ್ಮ ಸಹಜೀವಿಗಳೊಂದಿಗೆ ಹೇಗೆ ವೃದ್ಧಿಪಡಿಸಬೇಕೆಂದರೆ, ಅವರ ಸಂಬಂಧವು ಇತರರ ಜೊತೆಗೆ ತಾಯಿ ಮತ್ತು ಮಗುವಿನ ಮಧ್ಯದ ಸಹಜ ಸಂಬಂಧದಂತೆ ಆಗಬೇಕು. ಈ ಘಟ್ಟ ತಲಪಿದ ಸತ್ಯವಿಶ್ವಾಸಿ ಯಾವುದೇ ಪ್ರತಿಫಲವನ್ನು ತನ್ನ ಕೆಲಸಕ್ಕೆ ಬಯಸುವುದಿಲ್ಲ. ಅವನು ಸಹಜವಾಗಿಯೇ ನಿಸ್ವಾರ್ಥ ಬುದ್ಧಿಯಿಂದ ಅನ್ಯರ ಸೇವೆ ಮಾಡುತ್ತಾನೆ. ಹಾಗೆ ಸದ್ಗುಣದ ಕಡೆಗೆ ಸಾಗುವ ಪ್ರಯಾಣವು ಪ್ರಗತಿ ಹೊಂದುತ್ತಾ ಹೋಗುತ್ತದೆ. ಅದರ ಪ್ರಥಮ ಹೆಜ್ಜೆ ನ್ಯಾಯಪಾಲನೆ ಆಗಿದೆ. ಎಲ್ಲಾ ಒಳಿತುಗಳು ಈ ಅಸ್ತಿಭಾರದ ಮೇಲೆ ಸ್ಥಾಪಿಸಲ್ಪಡುತ್ತವೆ.

ಪವಿತ್ರ ಖುರ್‌ಆನಿನ ವಚನ 16:91ರ ಪ್ರಥಮ ಭಾಗ ಸತ್ಯ ವಿಶ್ವಾಸಿಯು ಸದ್ಗುಣಗಳ ಕಡೆಗೆ ಸಾಗುವ ದಾರಿಯನ್ನು ಚಿತ್ರಿಸುತ್ತದೆ. ಆ ವಚನದ ಎರಡನೆಯ ಭಾಗ ದುರ್ಗುಣಗಳಿಂದ ದೂರ ಸಾಗುವ ದಾರಿಯನ್ನು ಚಿತ್ರಿಸುತ್ತದೆ. ಪವಿತ್ರ ಖುರ್‌ಆನ್ ಹೇಳುವ ಅಸಭ್ಯತೆಯಲ್ಲಿ ಒಬ್ಬ ಮನುಷ್ಯನಿಗೆ ತಾನು ಮಾತ್ರ ತಿಳಿದಿರುವ ತನ್ನ ಅಸೂಯೆಯ ಹಾಗಿರುವ ದುರ್ಗುಣಗಳು ಸೇರಿವೆ. ದುಷ್ಕೃತ್ಯಗಳು ಒಬ್ಬ ಮನುಷ್ಯನು ಬಹಿರಂಗವಾಗಿ ಮಾಡುವವುಗಳಾಗಿದ್ದು ಅದರ ಹಾನಿಯು ಅದನ್ನು ಮಾಡುವವನಿಗೆ ಮಾತ್ರ ಉಂಟುಮಾಡುವವುಗಳಾಗಿವೆ. ನಿಯಮೋಲ್ಲಂಘನೆ ಎಂದು ಹೇಳಿದುದು ಇತರರಿಗೆ ಹಾನಿಯನ್ನುಂಟುಮಾಡುವ ಕೆಲಸಗಳ ಕುರಿತಾಗಿದೆ.

ಪವಿತ್ರ ಖುರ್‌ಆನಿನ ಈ ಒಂದು ವಚನವನ್ನು ಮಾತ್ರ ಅನುಷ್ಠಾನಕ್ಕೆ ತಂದರೆ ಸಮಾಜದಲ್ಲಿ ಶಾಂತಿ ಸ್ಥಾಪಿತವಾಗುವುದು. ನ್ಯಾಯ ರಾಹಿತ್ಯವು ಎಲ್ಲಾ ಕೆಡುಕುಗಳ ಮೂಲ ಕಾರಣವಾಗಿದೆ.

ಸದ್ಗುಣಗಳನ್ನು ಹೊಂದುವುದರಿಂದ ಮತ್ತು ದುರ್ಗುಣಗಳನ್ನು ತ್ಯಜಿಸುವುದರಿಂದ ನಾವು ನಮ್ಮನ್ನು ದೇವನ ಸಮೀಪಕ್ಕೆ ಕೊಂಡೊಯ್ಯಬಲ್ಲೆವು.

ಪವಿತ್ರ ಖುರ್‌ಆನ್ ಸೂರಃ ಅನ್ನಹ್ಲ್‌ನಲ್ಲಿರುವ ಈ ವಚನ ನಾವು ಈ ಪ್ರಯಾಣದಲ್ಲಿ ದಾಟಿಹೋಗಲಿರುವ ಘಟ್ಟಗಳನ್ನು ಪಟ್ಟಿಮಾಡುತ್ತದೆ. "ಈ ಬಗ್ಗೆ ಲಕ್ಷ್ಯಗೊಡಲಿಕ್ಕೆ" ಎಂಬ ಅರ್ಥವನ್ನು ನಾವು ಕೊಟ್ಟ ಅರಬಿ ಪದವು "ಝಿಕ್ರ್" ಆಗಿದೆ. ಆದರೆ ಈ ಪದಕ್ಕೆ ಇನ್ನಷ್ಟು ವಿಶಾಲ ಅರ್ಥಗಳಿವೆ. ದೇವನಿಗೆ ಮತ್ತು ಅವನ ಸೃಷ್ಟಿಗಳಿಗೆ ನಾವು ಮಾಡಬೇಕಾದ ಕರ್ತವ್ಯಗಳನ್ನು ನೆನಪಿನಲ್ಲಿಡುವುದು, ದೇವನ ಮಹಿಮೆಯನ್ನು ಕೊಂಡಾಡುವುದು ಮತ್ತು ದೇವ ಗುಣಗಳ ಒಂದು ಸಾಕಾರ ರೂಪ ಆಗುವುದು ಇದರಲ್ಲಿ ಸೇರಿದೆ. ಮನುಷ್ಯ ಸೃಷ್ಟಿಯ ಉದ್ದೇಶ ಅದೇ ಆಗಿದೆ. ಸತ್ಯ ವಿಶ್ವಾಸಿಗಳು ಈ ಒಂದು ವಚನದ ಆದೇಶಗಳನ್ನು ಪಾಲಿಸಿದರೆ ಅವರು ತಮ್ಮನ್ನು ಸೃಷ್ಟಿಸಿದುದರ ಉದ್ದೇಶವನ್ನು ಗಳಿಸುವರೆಂದು ಈ ವಚನದಲ್ಲಿ ಶುಭವಾರ್ತೆ ನೀಡಲಾಗಿದೆ.

ಈ ವಚನ ಮಾನವರಿಗೆ ಪರಿಪೂರ್ಣ ಮಾರ್ಗದರ್ಶನ ನೀಡುತ್ತದೆ. ಇದು ಸಮತೋಲನ ಹೊಂದಿದುದೂ ಕ್ರಮಬದ್ಧವೂ ಆಗಿದೆ. ಮಾಡಬೇಕೆಂಬ ಮೂರು ಆಜ್ಞೆಗಳೊಂದಿಗೆ ನಿಷಿದ್ಧವಾದ ಮೂರು ಆಜ್ಞೆಗಳನ್ನು ನೀಡಿ ಸಮತೋಲನವನ್ನು ಕಾಪಾಡಲಾಗಿದೆ. ಈ ಆಜ್ಞೆಗಳು ಸಾರ್ವತ್ರಿಕವೂ ಶಾಶ್ವತವೂ ಆಗಿವೆ. ಪರಿಪೂರ್ಣ ನ್ಯಾಯ, ಪರೋಪಕಾರ ಮತ್ತು ಕೌಟುಂಬಿಕ ಸಂಬಂಧಗಳಿಗೆ ಸಂಬಂಧಿಸಿದ ತತ್ವಗಳು ಎಲ್ಲಾ ಕಾಲಗಳಲ್ಲಿಯೂ ಎಲ್ಲಾ ಸ್ಥಳಗಳಲ್ಲಿಯೂ ಅನುಷ್ಠಿಸಬಹುದಾಗಿವೆ. ಅದು ಎಲ್ಲವನ್ನೂ ಒಳಗೊಂಡದ್ದೂ ಪರಿಪೂರ್ಣವೂ ಆಗಿದೆ. ಮೇಲಿನ ವಚನದಲ್ಲಿ ಪ್ರತಿಪಾದಿಸಲಾದ ತತ್ವಗಳು ಮನುಷ್ಯನ ಚಟುವಟಿಕೆಗಳ ಎಲ್ಲಾ ಕಾರ್ಯಕ್ಷೇತ್ರಗಳಿಗೂ ಅನ್ವಯಿಸುತ್ತವೆ. ಇದರಲ್ಲಿ ಯಾವುದೇ ವೈರುದ್ಧ್ಯವಾಗಲೀ ನ್ಯೂನತೆಯಾಗಲೀ ಇಲ್ಲ. ಇವುಗಳು ಪರಿಪೂರ್ಣತೆಯ ಗುಣಗಳಾಗಿವೆ. ಆದುದರಿಂದ ಇದು ಪರಿಪೂರ್ಣವಾದ ಉಪದೇಶವಾಗಿದೆ.

ಈ ಪ್ರಬಂಧದಲ್ಲಿ ನಾವು ಸೃಷ್ಟಿಯ ಉದ್ದೇಶ ಏಕ ದೇವರಾಧನೆ ಎಂದು ವಾದಿಸಿದ್ದೇವೆ. ಇದರ ಅರ್ಥ ಮನುಷ್ಯನು ದೇವಗುಣಗಳನ್ನು ಹೊಂದಬೇಕೆಂದಾಗಿದೆ. ಇದನ್ನು ವಿಶ್ವಾಸ, ಶುಭ ಪ್ರತೀಕ್ಷೆ, ಪ್ರೀತಿ ಮತ್ತು ಭಯದಿಂದ ಗಳಿಸಬಹುದು. ಪವಿತ್ರ ಖುರ್‌ಆನ್ ವಿಶ್ವಾಸವನ್ನು ಹೊಂದಲು ಮತ್ತು ಬಲಪಡಿಸಲು ಪರಿಪೂರ್ಣ ಮಾರ್ಗದರ್ಶಕವಾಗಿದೆ ಮತ್ತು ಅದು ಮನುಷ್ಯನಲ್ಲಿ ಭಯ, ಶುಭ ಪ್ರತೀಕ್ಷೆ ಮತ್ತು ಪ್ರೀತಿಯನ್ನು ಪ್ರೇರೇಪಿಸಿ ಅವನನ್ನು ದೇವ ಸಾಮೀಪ್ಯಗಳಿಸಿದ ಭಕ್ತನನ್ನಾಗಿ ಮಾಡುತ್ತದೆ. ಅಲ್ಲಾಹನ ಗುಣಗಳನ್ನು ವಿವರಿಸಿ ಪವಿತ್ರ ಖುರ್‌ಆನ್ ಮನುಷ್ಯನಿಗೆ ಅವರ ಜೀವಿತವನ್ನು ರೂಪಿಸಲು ಇರುವ ರೂಪರೇಖೆಯನ್ನು ಒದಗಿಸುತ್ತದೆ.

ಪವಿತ್ರ ಖುರ್‌ಆನಿನ ಪ್ರತಿಯೊಂದು ಆಜ್ಞೆಯನ್ನು ಗಾಢವಾಗಿ ಅಧ್ಯಯನ ಮಾಡಿದರೆ ಅದು ಪರಿಪೂರ್ಣವಾಗಿ ಸಮತೋಲನ ಹೊಂದಿದುದೂ ಕ್ರಮಬದ್ಧವಾದದ್ದೂ ವೈರುದ್ಧ್ಯರಹಿತವೂ ಆಗಿ ಕಂಡುಬರುವುದು. ಆದುದರಿಂದ ನಾವು ಪವಿತ್ರ ಖುರ್‌ಆನನ್ನು ಮಾನವರಿಗೆ ಪರಿಪೂರ್ಣ ಮಾರ್ಗದರ್ಶಕವಾಗಿರುವುದಾಗಿ ನಂಬುತ್ತೇವೆ. ಅದು ಸಮತೋಲನ ಹೊಂದಿರುವ ಆಜ್ಞೆಗಳನ್ನು ಒಳಗೊಂಡಿದ್ದು ಮನುಷ್ಯನನ್ನು ಅವನ ಜೀವಿತದ ಗುರಿ ತಲಪಿಸಲು ಸಹಾಯಕವಾಗುತ್ತದೆ.

ಹೀಗಿದ್ದರೂ ಒಂದು ವಿಷಯವನ್ನು ಗಮನಿಸಬೇಕು. ಪವಿತ್ರ ಖುರ್‌ಆನ್ ಮಾನವರೆಲ್ಲರಿಗೂ ಮಾರ್ಗದರ್ಶಕವಾಗಿದ್ದರೂ ದೇವನಿಗೆ ಭಯಪಡುವವರು ಮಾತ್ರ ಅದರ ಮೂಲಕ ನೇರಮಾರ್ಗವನ್ನು ಗಳಿಸುವರು. ಅದು ಹೀಗೆ ಹೇಳಿದೆ:

"ಇದು ಪರಿಪೂರ್ಣ ಗ್ರಂಥವಾಗಿದೆ. ಇದರಲ್ಲಿ ಸಂದೇಹವೇನೂ ಇಲ್ಲ. ಭಯ ಭಕ್ತಿಯುಳ್ಳವರಿಗೆ (ಇದು) ಒಂದು ಮಾರ್ಗದರ್ಶನವಾಗಿದೆ." (2:3). ✧

**LOVE FOR ALL**
**HATRED FOR NONE**

# ಪ್ರವಾದಿತ್ವ ಸಮಾಪ್ತಿಯ ನಿಜಸ್ಥಿತಿ - 10

❖ ಉರ್ದು ಮೂಲ : ಮಿರ್ಝಾ ಬಶೀರ್ ಅಹ್ಮದ್ ಎಂ. ಎ.
❖ ಅನುವಾದ : ಎಂ. ಉಬೈದುಲ್ಲಾ

## ಖತಮುನ್ನಬುವ್ವತ್ ಕುರಿತು ಬೌದ್ಧಿಕ ಸಾಕ್ಷ್ಯಾಧಾರಗಳು

ನಮ್ಮ ನಂಬಿಕೆಯು ಅಲ್ಲಾಹನ ನಡವಳಿಕೆಗೆ ಸರಿಹೋಲುತ್ತದೆ.

ಮನುಷ್ಯನ ಬುದ್ಧಿಯು ಬಾಹ್ಯ ಅಂಧಕಾರಗಳ ಕಾರಣದಿಂದ ತಪ್ಪು ಮಾಡಬಹುದಾದರೂ ಅದೊಂದು ಉನ್ನತ ಶ್ರೇಣಿಯ ಪ್ರಾಕೃತಿಕ ಪ್ರಕಾಶವಾಗಿದೆ. ಅದರ ಮೂಲಕ ಸತ್ಯವನ್ನೂ ಮಿಥ್ಯವನ್ನೂ ಗುರುತಿಸಲು ಅಲ್ಲಾಹನು ನೀಡಿದ ಅನುಗ್ರಹ ಅದಾಗಿದೆ. ಲೋಕದಲ್ಲಿ ತಲೆದೋರುವ ಅನೇಕ ಸಮಸ್ಯೆಗಳು ಅದರ ಮೂಲಕವೇ ಪರಿಹರಿಸಲ್ಪಡುತ್ತವೆ.

ಲೋಕದ ಚರಿತ್ರೆಯನ್ನು ಅಧ್ಯಯನ ಮಾಡಿದರೆ ಒಂದು ಸಂಗತಿ ಸ್ಪಷ್ಟವಾಗಿ ತಿಳಿಯುತ್ತದೆ. ಲೋಕದಲ್ಲಿ ಅಧರ್ಮವೂ ಅನ್ಯಾಯವೂ ವ್ಯಾಪಿಸಿದಾಗ ಅಲ್ಲಾಹನು ತನ್ನ ಒಬ್ಬ ಪರಿಶುದ್ಧ ದಾಸನನ್ನು ಜನರ ಉದ್ಧರಕ್ಕಾಗಿ ಕಳುಹಿಸುತ್ತಾನೆ. ಲೋಕದ ಪರಿಸ್ಥಿತಿಗೆ ಅನುಸಾರವಾಗಿ ಪರಿಷ್ಕರಣೆಯು ನಡೆಯುತ್ತದೆ. ಹೊಸ ಶರೀಅತ್ ಆವಶ್ಯಕವಾದಾಗ ಹೊಸ ಶರೀಅತ್ ಅವತೀರ್ಣಗೊಳಿಸಿ ಅಲ್ಲಾಹನು ಜನರ ಸುಧಾರಣೆ ಮಾಡಿಸುತ್ತಾನೆ. ಹೊಸ ಶರೀಅತಿನ ಆವಶ್ಯಕತೆ ಇಲ್ಲದಾಗ ಶರಿಯತೇತರ ಪ್ರವಾದಿಯನ್ನು ಕಳುಹಿಸಿ ಅಲ್ಲಾಹನು ಜನರ ಸುಧಾರಣೆ ಮಾಡಿಸುತ್ತಾನೆ. ಲೋಕದ ಸೃಷ್ಟಿಯ ಮೊದಲ್ಗೊಂಡು ಈ ಕಾರ್ಯ ಅಲ್ಲಾಹನಿಂದ ನಡೆಸಲ್ಪಡುತ್ತಾ ಇದೆ. ಈ ನಡವಳಿಕೆ ಎಂದೂ ಸ್ಥಗಿತಗೊಂಡಿಲ್ಲ. ಒಂದು ಲಕ್ಷದ ಇಪ್ಪತ್ತನಾಲ್ಕು ಸಾವಿರ ಪ್ರವಾದಿಗಳು ಆಗಮಿಸಿದ್ದರು. ಅವರಲ್ಲಿ ಮುನ್ನೂರ ಹದಿನೈದು ಪ್ರವಾದಿಗಳು ಮಾತ್ರ ಶರೀಅತನ್ನು ತಂದವರಾಗಿದ್ದರು. (ಮುಸ್‌ನದ್ ಅಹ್ಮದ್ ಮತ್ತು ಮಿಷ್ಕಾತ್ ನೋಡಿರಿ)

ಪುರಾತನ ಕಾಲದಿಂದ ಅಲ್ಲಾಹನು ಇಂತಹ ನಡವಳಿಕೆ ಜಾರಿಗೊಳಿಸಿರುವಾಗ ಈಗಿನ ಕಾಲದಲ್ಲಿ ಅವನು ಈ ನಡವಳಿಕೆಯನ್ನು ಕೊನೆಗೊಳಿಸಿರುವನೆಂದು ಹೇಗೆ ತಾನೆ ಹೇಳಲು ಸಾಧ್ಯ?

ಇದಕ್ಕೆ ಉತ್ತರವಾಗಿ, ಹಿಂದಿನ ಕಾಲದಲ್ಲಿ ಅಲ್ಲಾಹನ ನಡೆವಳಿಕೆ ಹೀಗೆಯೇ ಇತ್ತು; ಆದರೆ ಖಾತಮುನ್ನಬಿಯ್ಯೀನ್ ಆಗಮಿಸಿದ ನಂತರ ಇದು ಕೊನೆಗೊಂಡಿತು ಎಂದು ಹೇಳಲು ಸಾಧ್ಯವಿಲ್ಲ. ಖಾತ ಮುನ್ನಬಿಯ್ಯೀನ್ ವಚನವನ್ನು ವಿವರಿಸುವಾಗ ನಾವು ಹೀಗೆ ಸಾಬೀತುಗೊಳಿಸಿರುವೆವು: ಈ ವಚನ ನುಬುವ್ವತ್ ಶೃಂಖಲೆಯನ್ನು ಮುಗಿತಾಯಗೊಳಿಸುವುದಿಲ್ಲ. ಹಿಂದೆ ಪ್ರವಾದಿಗಳು ಅಲ್ಲಾಹನಿಂದ ನೇರವಾಗಿ ನೇಮಿಸಲ್ಪಡುತ್ತಿದ್ದರು. ಆದರೆ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಆಗಮನದ ನಂತರ ಅವರ ಮೂಲಕವೇ, ಅವರಿಗೆ ಸೇರಿದವರಾಗಿ ಪ್ರವಾದಿ ಆಗಮಿಸಬಹುದಾಗಿದೆ.

ಇಲ್ಲಿ ಪವಿತ್ರ ಖುರ್‌ಆನ್ ಮತ್ತು ಹದೀಸಿನ ಆಧಾರಗಳ ಕುರಿತು ಚರ್ಚೆ ಇಲ್ಲ. ನಾವು ಕೇವಲ ಬೌದ್ಧಿಕ ಸಾಕ್ಷ್ಯಾಧಾರಗಳ ಕುರಿತು ಮಾತ್ರ ಇಲ್ಲಿ ಪ್ರಸ್ತಾಪಿಸುತ್ತಿದ್ದೇವೆ. ಪ್ರವಾದಿಗಳನ್ನು ಅಲ್ಲಾಹನು ಕಳುಹಿಸುವ ನಡವಳಿಕೆ ಪುರಾತನ ಕಾಲದಿಂದಲೂ ಜಾರಿಯಲ್ಲಿರುವಾಗ ಅದು ಈಗ ಕೊನೆಗೊಂಡಿದೆ ಎಂದು ಹೇಳುವುದಾದರೂ ಹೇಗೆ? ಪುರಾತನ ಕಾಲದಿಂದ ಜಾರಿಯಲ್ಲಿರುವ ಈ ಕಾಲುವೆಗೆ ತಡೆಗೋಡಿ ಹಾಕಿ ಅದನ್ನು ತಡೆಯುವ ಆವಶ್ಯಕತೆಯಾದರೂ ಏನು?

ಸ್ನೇಹಿತರೇ, ನೀವು ಯೋಚಿಸಿರಿ. ಜನರ ಹೃದಯಗಳಿಗೆ ನೀರೆರೆಯಲು ಅಲ್ಲಾಹನು ಪುರಾತನ ಕಾಲದಿಂದಲೇ ನುಬುವ್ವತ್ ಎಂಬ ಒಂದು ಕಾಲುವೆಯನ್ನು ಜಾರಿಗೊಳಿಸಿರುವನು. ಈ ಕಾಲದಲ್ಲಿ ಅಲ್ಲಾಹನ ನಡೆವಳಿಕೆ ಕೊನೆಗೊಂಡಿದೆ ಎಂದು ಹೇಗೆ ಹೇಳುವಿರಿ?

ಪೂರ್ವಗ್ರಹ ಪೀಡಿತರಾಗದ ಬುದ್ಧಿಶಾಲಿಗಳ ಈ ಸಾಕ್ಷ್ಯಾಧಾರದಿಂದ ಸತ್ಯವನ್ನು ಗ್ರಹಿಸಬಹುದಾಗಿದೆ.

### ಅಲ್ಲಾಹನ ನಡವಳಿಕೆ ನಿಲ್ಲಿಸಲ್ಪಟ್ಟಿದೆ ಎಂದಾದರೆ ಅದಕ್ಕೆ ಸಾಕ್ಷ್ಯಾಧಾರವನ್ನು ನಮ್ಮ ವಿರೋಧಿಗಳು ನೀಡಲಿ.

ಲೋಕದಲ್ಲಿ ಅನ್ಯಾಯವೂ ಅಧರ್ಮವೂ ವ್ಯಾಪಿಸಿದಾಗ ಅಲ್ಲಾಹನು ಪ್ರವಾದಿಯನ್ನು ಕಳುಹಿಸುತ್ತಾನೆ ಎಂಬ ಅಲ್ಲಾಹನ ನಡವಳಿಕೆ ನಿಲ್ಲಿಸಲ್ಪಟ್ಟಿದೆ ಎಂದು ಯಾರಾದರೂ ವಾದಿಸುವುದಾದರೆ ಅದಕ್ಕೆ ಪೂರಕವಾದ ಸಾಕ್ಷ್ಯಾಧಾರ ಹಾಗೆ ವಾದಿಸುವವರು ನೀಡಬೇಕು. ಅವರಿಗೆ ಅದು ಎಂದಿಗೂ ಸಾಧ್ಯವಾಗಲಾರದು. ನಮ್ಮ ವಾದವು ಅಲ್ಲಾಹನ ನಡವಳಿಕೆಯಿಂದ ಸಾಬೀತಾಗಿದೆ.

### ಈಗಿನ ಕಾಲಘಟ್ಟದಲ್ಲಿ ಸರ್ವವ್ಯಾಪಿಯಾದ ಭ್ರಷ್ಟತೆಯು ಒಬ್ಬ ಪ್ರವಾದಿಯನ್ನು ಆವಶ್ಯಪಡುತ್ತದೆ.

ಇಂದಿನ ಕಾಲದಲ್ಲಿ ಧಾರ್ಮಿಕ ಲೋಕದಲ್ಲಿ ನಡೆನುಡಿಗಳಲ್ಲಿ ವ್ಯಾಪಿಸಿರುವ ಅಧಾರ್ಮಿಕತೆ ಮತ್ತು ಅನ್ಯಾಯಗಳು, ಧರ್ಮಹೀನತೆ ಮತ್ತು ಭೌತಿಕಲೋಲುಪತೆ ಇವು ಬಹಳ ಹೆಚ್ಚಾಗಿವೆ. ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್‌ರವರು "ಎಲ್ಲಾ ಪ್ರವಾದಿಗಳು ಮುನ್ನೆಚ್ಚರಿಕೆ ನೀಡಿರುವರು" ಎಂದು ಹೇಳಿದ ದಜ್ಜಾಲೀ ಕೆಡುಕುಗಳು ಲೋಕದ ಎಲ್ಲಾ ಸಮುದಾಯಗಳನ್ನುಹಾನಿಗೊಳಪಡಿಸುತ್ತಾ ಇವೆ. ಇವುಗಳೆಲ್ಲಾ ಒಬ್ಬ ಪ್ರವಾದಿಯ ಆಗಮನವನ್ನು ಆವಶ್ಯಪಡುತ್ತದೆ. ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಶಿಷ್ಯರಾಗಿ, ಅವರ ಆಧ್ಯಾತ್ಮಿಕ ಪುತ್ರರಾಗಿ, ಅವರ ಆಧ್ಯಾತ್ಮಿಕ ಸೂರ್ಯನಿಂದ

ಪ್ರಕಾಶಪಡೆದು ಲೋಕವನ್ನು ಪ್ರಕಾಶಿಸುವವರಾಗಿ ಅವರು ಆಗಮಿಸಬೇಕು. ಹಿಂದಿನ ಶತಮಾನಗಳಲ್ಲಿಯೂ ನಿಸ್ಸಂಶಯವಾಗಿಯೂ ಅಂಧಕಾರ ವ್ಯಾಪಿಸಿತ್ತು. ಆದರೆ ಅಸಾಧಾರಣ ಅಂಧಕಾರ ಹಾಗೂ ವಿಶ್ವಾಸ ಮತ್ತು ಕರ್ಮಗಳಲ್ಲಿ ಭ್ರಷ್ಟತೆ ಈ ಕಾಲದಲ್ಲಿ ಅಸಾಧಾರಣವಾದ ರೀತಿಯಲ್ಲಿದೆ. ಇಂತಹ ಭ್ರಷ್ಟತೆ ಹಿಂದೆ ಎಂದೂ ಇರಲಿಲ್ಲ. ಹಿಂದಿನ ಶತಮಾನಗಳ ಅಂಧಕಾರಗಳನ್ನು ಮುಜದ್ದಿದ್‌ಗಳು ಪರಿಹರಿಸಿದರು. ಆದರೆ ಈ ಕಾಲದ ಅಂಧಕಾರಗಳಿಗೆ ಒಬ್ಬ ಮಹಾ ವೈಭವಶಾಲಿ ಮುಜದ್ದಿದ್ ಆಗಮಿಸುವುದು ಆವಶ್ಯಕವಾಗಿತ್ತು. ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಆಶೀರ್ವಾದದಿಂದ ನುಬುವ್ವತ್ ಪದವಿ ಪಡೆದು ಲೋಕದ ಸುಧಾರಣೆಗಾಗಿ ಅವರು ಆಗಮಿಸಿದರು. ಹೀಗೆ ಆಗಮಿಸುವವರ ಕುರಿತು ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್‌ರವರು ಹೀಗೆ ಹೇಳಿದರು:

"ನನ್ನ ಮತ್ತು ಅವರ ನಡುವೆ ಪ್ರವಾದಿ ಇಲ್ಲ."

(ಅಬೂದಾವೂದ್)

## ಅಲ್ಲಾಮ ಇಖ್‌ಬಾಲ್ ಮತ್ತು ಮೌಲವಿ ಮೌದೂದಿ ಸಾಹೇಬರ ಸಾಕ್ಷ್ಯ

ಅಂಧಕಾರಮಯ ಈ ಕಾಲಘಟ್ಟದ ಕುರಿತು ಅಲ್ಲಾಮ ಇಖ್‌ಬಾಲ್ ಹೀಗೆ ಹಾಡಿದ್ದಾರೆ:

ಹಾಥ್ ಬೇ ಝೋರ್ ಹೈಂ ಇಲ್‌ಹಾದ್ ಸೆ ದಿಲ್ ಖೋಗರ್ ಹೈಂ
ಉಮ್ಮತೀ ಬಾಲಸೇ ರುಸ್‌ವಾಯೀ ಪೈಗಂಬರ್ ಹೈಂ
ಬುತ್ ಶಿಕನ್ ಉಠ್ ಗಯೇ ಬಾಖೀ ಜೋ ಹೈಂ ಬುತ್‌ಗರ್ ಹೈಂ
ಥಾ ಇಬ್ರಾಹೀಮ್ ಪೆದರ್ ಔರ್ ಪೆಸರ್ ಆಝರ್ ಹೈಂ

"ಕೈಗಳಲ್ಲಿ ಬಲವಿಲ್ಲ. ನಾಸ್ತಿಕತೆ ಹೃದಯಗಳಲ್ಲಿ ತುಂಬಿದೆ. ಅನುಯಾಯಿಗಳು ಪೈಗಂಬರರಿಗೆ ಅಪಮಾನವನ್ನುಂಟು ಮಾಡುವವರಾಗಿದ್ದಾರೆ. ಮೂರ್ತಿಭಂಜಕರು ತೀರಿಹೋದರು. ಉಳಿದವರು ಮೂರ್ತಿ ಪೂಜಕರು. ಇಬ್ರಾಹೀಮ್ ಪಿತನಾಗಿದ್ದರು. ಪುತ್ರರು ಆಝರ್ ಆಗಿರುವರು."

ಶೋರ್ ಹೈ ಹೋಗಯೇ ದುನ್‌ಯಾಸೆ ಮುಸಲ್ಮಾನ್ ನಾಬೂದ್. ಹಮ್ ಏ ಕಹ್ತೇ ಹೈಂ ಕೆ ಥೆ ಭೀ ಕಹೀಂ ಮುಸ್ಲಿಮ್ ಮೌಜೂದ್. ವಝ್ಅ್ ಮೇಂ ತುಮ್ ಹೋ ನಸಾರ ತೋ ತಮದ್ದುನ್ ಮೇ ಹುನೂದ್. ಯೇ ಮುಸಲ್ಮಾನ್ ಹೈಂ ಜಿನೇಂ ದೇಖ್ ಕೆ ಶರ್‌ಮಾಯೇಂ ಯಹೂದ್. (ಜವಾಬೆ ಶಿಕ್‌ವ)

"ಲೋಕದಿಂದ ಮುಸ್ಲಿಮರು ನಾಶವಾಗಿ ಹೋದರೆಂದು ಬೊಬ್ಬೆ ಇದೆ. ನಾವು ಹೇಳುತ್ತೇವೆ: ಎಲ್ಲಿಯಾದರೂ ಮುಸ್ಲಿಮರು ಇದ್ದರೋ ಎಂದು. ನೀವು ಪೋಷಾಕಿನಲ್ಲಿ ಕ್ರೈಸ್ತರು; ಸಂಸ್ಕೃತಿಯಲ್ಲಿ ಹಿಂದುಗಳು. ಈ ಮುಸ್ಲಿಮರನ್ನು ನೋಡಿ ಯಹೂದಿಯರೂ ನಾಚಿಕೆಹೊಂದಿದರು.

ಅಲ್ಲಾಮ ಇಖ್‌ಬಾಲ್ ಈ ಪದ್ಯದಲ್ಲಿ ಭಾವಾವೇಶದಿಂದ ಕಠಿಣ ಶಬ್ದಗಳನ್ನು ಪ್ರಯೋಗಿಸಿದ್ದಾರೆ. ಮುಸ್ಲಿಮರ ನಡೆನುಡಿಗಳಲ್ಲಿ ಸುಧಾರಣೆಗೆ ಅವರಿಗಿದ್ದ ಕಾಳಜಿಯನ್ನು ಈ ಪದ್ಯ ಸೂಚಿಸುತ್ತದೆ.

ನಮ್ಮ ವಿರೋಧಿಗಳಲ್ಲಿ ಒಬ್ಬರಾದ ಮೌಲವಿ ಮೌದೂದಿ ಸಾಹೇಬರು ಹೀಗೆ ಹೇಳುತ್ತಾರೆ:

"ಬಹುತೇಕ ಜನರು ಇಕಾಮತೆ ದೀನ್ (ಧರ್ಮವನ್ನು ಸ್ಥಾಪಿಸುವ) ಆಂದೋಲನಕ್ಕೆ ಎಂತಹ ಪರಿಪೂರ್ಣ ಪುರುಷನನ್ನು ಹುಡುಕುತ್ತಾರೆಂದರೆ, ಅವರಲ್ಲಿ ಪ್ರತಿಯೊಬ್ಬನ ಕಲ್ಪನೆಯಲ್ಲಿ ಇರುವ ಪರಿಪೂರ್ಣತೆಯ ಸಾಕಾರ ರೂಪ ಆ ವ್ಯಕ್ತಿಯಾಗಬೇಕು. ಆವ್ಯಕ್ತಿಯ ಎಲ್ಲಾ ಪಾರ್ಶ್ವಗಳು ಶಕ್ತಿಯುಕ್ತವಾಗಿರಬೇಕು. ಬೇರೆ ಶಬ್ದಗಳಲ್ಲಿ ಹೇಳುವುದಾದರೆ, ಈ ಜನರು ಒಬ್ಬ ನಬಿಯನ್ನು ಆವಶ್ಯಪಡುತ್ತಾರೆ. ಅವರು ನಾಲಗೆಯಿಂದ ಖತ್‌ಮೆ ನುಬುವ್ವತನ್ನು ಅಂಗೀಕರಿಸುತ್ತಾರಾದರೂ, ಯಾರಾದರೂ ಪ್ರವಾದಿತ್ವ ಜಾರಿಯಾಗುವ ಕುರಿತು ಹೇಳಿದರೆ ಅವನ ನಾಲಗೆಯನ್ನು ಚಿಮಟಿಯಿಂದ ಎಳೆದು ಹಾಕಲು ತಯಾರಾಗುತ್ತಾರಾದರೂ ಒಳಗಿನಿಂದ ಅವರ ಹೃದಯಗಳು ಒಬ್ಬ ಪ್ರವಾದಿಯನ್ನು ಆವಶ್ಯಪಡುತ್ತವೆ. ಪ್ರವಾದಿಗಿಂತ ಕಡಿಮೆಯ ಯಾರಿಂದಲೂ ಅವರು ತೃಪ್ತರಾಗುವುದಿಲ್ಲ."

(ತರ್ಜುಮಾನುಲ್ ಖುರ್‌ಆನ್ ಡಿಸೆಂಬರ್, ಜನವರಿ1942-43)

## ಭೂಮಿ ಮತ್ತು ಆಕಾಶದ ಮಹತ್ವಾದ ಸಾಕ್ಷ್ಯ

ಅಹ್ಮದಿಯಾ ಜಮಾಅತಿನ ಸ್ಥಾಪಕರಾದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತನ್ನ ಫಾರಸೀ ಕವಿತೆಯಲ್ಲಿ ಹೀಗೆ ಹೇಳುತ್ತಾರೆ:

"ಸತ್ಯಾನ್ವೇಷಿಗಳಾದ ಜನರೇ, ನೀವು ಆಲಿಸಿರಿ. ಈ ಕಾಲದಲ್ಲಿ ಒಬ್ಬ ಸುಧಾರಕನ ಆವಶ್ಯಕತೆ ಇದೆ ಎಂದು ಅಗೋಚರ ಧ್ವನಿ ಕೇಳಿಸುತ್ತಾ ಇದೆ. ಏಕೆಂದರೆ ಎಲ್ಲಾ ಕಡೆಗಳಲ್ಲೂ ಧರ್ಮದಲ್ಲಿ ಭ್ರಷ್ಟತೆಯು ತಲೆದೋರಿದೆ. ಆಕಾಶದಿಂದ ದೃಷ್ಟಾಂತಗಳು ಕಾಣಿಸಿವೆ. ಭೂಮಿಯೂ ಹೇಳುತ್ತಿದೆ. ಒಬ್ಬ ಸುಧಾರಕನ ಆವಶ್ಯಕತೆ ಇದೆ ಎಂದು. ಆಕಾಶ ಮತ್ತು ಭೂಮಿಯೆಂಬ ಈ ಎರಡು ಸಾಕ್ಷಿಗಳು ನಾನು ಸತ್ಯವಂತನೆಂಬುದಕ್ಕೆ ಸಾಕ್ಷ್ಯ ನೀಡಲು ಸನ್ನದ್ಧವಾಗಿ ನಿಂತಿವೆ." (ಆಯಿನ ಕಮಲಾತೆ ಇಸ್ಲಾಮ್ ಪುಟ 114)

ಒಂದು ಉರ್ದು ಪದ್ಯದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸಲಾಮ್ ಹೀಗೆ ಹೇಳುತ್ತಾರೆ:

"ವಖ್ತ್ ಥಾ ವಖ್ತೇ ಮಸೀಹಾ ನ ಕಿಸೀ ಔರ್ ಕಾ ವಖ್ತ್. ಮೈಂ ನ ಆತಾ ತೋ ಕೊಯೀ ಔರ್ ಹೀ ಆಯಾ ಹೋತಾ." (ದುರ್ರೆ ಸಮೀನ್)

"ಮಸೀಹಾ ಬರುವ ಸಮಯವೇ ಅದು ಆಗಿತ್ತು. ನಾನು ಬಾರದೆ ಇರುತ್ತಿದ್ದರೆ ಬೇರೆ ಯಾರಾದರೂ ಮಸೀಹರಾಗಿ ಬರುತ್ತಿದ್ದರು."

ಆ ಕಾಲ ಧರ್ಮರಾಹಿತ್ಯ, ಲೌಕಿಕ ಲೋಲುಪತೆ , ದಜ್ಜಾಲೀ ಕೆಡುಕುಗಳ ಕಾಲವಾಗಿತ್ತು. ಇಸ್ಲಾಮಿನ ವಿರುದ್ಧ ಉಂಟಾಗಿದ್ದ ಆಕ್ರಮಣಗಳ ಕಾರಣದಿಂದ ಒಬ್ಬ ಸಾಮಾನ್ಯ ಸುಧಾರಕನು ಆ ಸಮಸ್ಯೆಗಳನ್ನು ಎದುರಿಸಲು ಸಾಕಾಗುತ್ತಿರಲಿಲ್ಲ. ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಒಬ್ಬ ಪ್ರತಿನಿಧಿಯ ಆವಶ್ಯಕತೆ ಆಗ ಇತ್ತು.

ಹಝ್‌ರತ್ ಮೂಸಾ ಅಲೈಹಿಸ್ಸಲಾಮರ ನಂತರ ಹಝ್‌ರತ್ ಈಸಾ ಅಲೈಹಿಸಲಾಮ್‌ರವರು ಆಗಮಿಸಿದ ಹಾಗೆ ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್‌ರವರ ನಂತರ ಅವರ ಧರ್ಮದ ಸೇವೆಗಾಗಿ ಒಬ್ಬ ಮಸೀಹರ ಆವಶ್ಯಕತೆ ಇತ್ತು. "ಮಸೀಹಾಗಿ ನಾನು ಬಾರದೆ ಇರುತ್ತಿದ್ದರೆ ಬೇರೆ ಯಾರಾದರೂ ಬರುತ್ತಿದ್ದರು" ಎಂದು ಹಝ್‌ರತ್ ಮಸೀಹ್ ಮೌಊದ್ ಈ ಉರ್ದು ಪದ್ಯದಲ್ಲಿ ಹೇಳಿದ್ದಾರೆ.

ಸಂಕ್ಷಿಪ್ತವಾಗಿ ಹೇಳುವುದಾದರೆ, ಕಾಲಘಟ್ಟದ ಆವಶ್ಯಕತೆ ಮತ್ತು ಸಮಯದ ಸಾಕ್ಷ್ಯವು ಒಬ್ಬ ವೈಭವಶಾಲಿ ಸುಧಾರಕನನ್ನು ಅಪೇಕ್ಷಿಸುತ್ತಿತ್ತು. ಅವರು ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್‌ರವರ ಅನುಗ್ರಹದಿಂದ ಅನುಗ್ರಹ ಪಡೆದು ಲೋಕದ ಉದ್ಧಾರ ಮಾಡಬೇಕಾಗಿದ್ದಿತು. ಅವರ ಇನ್ನೊಂದು ಹೆಸರು ಝಿಲ್ಲೀ ಮತ್ತು ಉಮ್ಮತೀ ನಬಿ ಎಂದಾಗಿದೆ. ಅವರು ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್‌ರವರ ಆಧ್ಯಾತ್ಮಿಕ ಪುತ್ರರೂ ಅವರ ಪವಿತ್ರ ವೃಕ್ಷದ ಶಾಖೆಯೂ ಅವರ ಭಾಗವೂ ಆಗಿದ್ದಾರೆ. ನಮ್ಮ ಸಹೋದರರು ಇದನ್ನು ಮನವರಿಕೆ ಮಾಡಿದ್ದರೆ ಎಷ್ಟು ಚೆನ್ನಾಗಿತ್ತು!

## ಯಾರ ನಂಬಿಕೆ ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್‌ರವರ ಘನತೆಗೆ ತಕ್ಕುದಾಗಿದೆ?

**ಇತರ ಮುಸ್ಲಿಮರ ನಂಬಿಕೆ:**

ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್ ಖಾತಮುನ್ನಬಿಯ್ಯೀನ್ ಆಗಿದ್ದಾರೆ. ಇದರ ಅರ್ಥ ಅವರು ಪ್ರವಾದಿಗಳನ್ನು ಕೊನೆಗೊಳಿಸುವವರಾಗಿದ್ದಾರೆ. ಅವರ ನಂತರ ಎಲ್ಲಾ ವಿಧ ಪ್ರವಾದಿಗಳ ಆಗಮನದ ಬಾಗಿಲು ಸಂಪೂರ್ಣವಾಗಿ ಮುಚ್ಚಲ್ಪಟ್ಟಿದೆ. ಇನ್ನು ಮುಂದೆ ಯಾರೂ ಯಾವ ರೀತಿಯಲ್ಲಿಯೂ ನಬಿತ್ವದ ಬಹುಮಾನವನ್ನು ಗಳಿಸಲಾರರು. ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರಿಗೆ ಮುಂಚಿತವಾಗಿಯೇ, ಬರಬೇಕಾದ ಎಲ್ಲಾ ಪ್ರವಾದಿಗಳು ಬಂದಿರುವರು. ಇನ್ನು ಮುಂದೆ ಯಾವ ಪ್ರವಾದಿಯೂ ಬರಲಾರರು. ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್‌ರವರ ಸಮುದಾಯದ ಒಳಗಿನಿಂದಲೂ ಹೊರಗಿನಿಂದಲೂ ಪ್ರವಾದಿ ಬರಲಾರರು. ಅವರ ಆಗಮನದ ನಂತರ ನುಬುವ್ವತಿನ ಕಾಲುವೆ ಮುಚ್ಚಲ್ಪಟ್ಟಿದೆ. ಇನ್ನು ಮುಂದೆ ಅವರ ದಾಸರಲ್ಲಿ ಮತ್ತು ಶಿಷ್ಯರಲ್ಲಿ ಯಾರೂ ನಬಿಯಾಗಿ ಬರಲಾರರು.

**ಅಹ್ಮದಿಯಾ ಜಮಾಅತಿನ ನಂಬಿಕೆ:**

ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್ ಖಾತಮುನ್ನಬಿಯ್ಯೀನ್ ಆಗಿರುವರು. ಇದರ ಅರ್ಥ ಅವರು ಪ್ರವಾದಿಗಳ ಮುದ್ರೆ ಎಂದಾಗಿದೆ. ನುಬುವ್ವತಿನ ಎಲ್ಲಾ ಪರಿಪೂರ್ಣತೆಗಳು ಅವರಲ್ಲಿ ಸಮಾವೇಶಗೊಂಡುವು. ಅವರ ನಂತರ ನುಬುವ್ವತ್ ನೇರವಾಗಿ ದೊರಕುವ ಮಾರ್ಗವು ಮುಚ್ಚಲ್ಪಟ್ಟಿದೆ. ಎಲ್ಲಾ ರೀತಿಯ ಬಹುಮಾನಗಳು ಅವರನ್ನು ಅನುಸರಿಸುವ ಮೂಲಕ ಮಾತ್ರ ದೊರಕುವುವು.

ಅವರು ಖಾತಮುನ್ನಬಿಯ್ಯೀನ್ ಆಗಿರುವುದರಿಂದ ಅಲ್ಲಾಹನ ಅನುಗ್ರಹಗಳ ಕಾಲುವೆ ಮುಚ್ಚಲ್ಪಟ್ಟಿಲ್ಲ. ಅದರ ಮಾರ್ಗವು ಬದಲಿಸಲ್ಪಟ್ಟು ಅವರ ಮೂಲಕ ಅದರ ಹೆಡ್‌ವರ್ಕ್ (Head work) ಸ್ಥಾಪಿಸಲ್ಪಟ್ಟಿದೆ. ಯಾರಾದರೂ ನಬಿಯಾಗುವುದಾದರೆ ಅವರ ದಾಸ್ಯವನ್ನು ಸ್ವೀಕರಿಸಿ ಅವರ ಪ್ರಕಾಶದಿಂದ ಪ್ರಕಾಶ ಪಡೆದು ಅವರ ಝಿಲ್ಲ್ ಆಗಿ ನಬಿಯಾಗುವರು. ಹೀಗೆ ಅಲ್ಲದೆ ಬೇರೆ ರೀತಿ ಖಂಡಿತ ಸಾಧ್ಯವಿಲ್ಲ.

ಮೇಲೆ ನಾವು ಅಹ್ಮದಿಯರ ಮತ್ತು ಅಹ್ಮದಿಯೇತರರ ನಂಬಿಕೆಗಳನ್ನು ವಿವರಿಸಿದ್ದೇವೆ. ಅಹ್ಮದಿಯೇತರರು ನಂಬುವುದೇನೆಂದರೆ, ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲ್‌ರವರ ಆಗಮನಕ್ಕೆ ಮೊದಲು ಮನುಷ್ಯರಿಗೆ ನಬಿ, ಸಿದ್ದೀಖ್, ಶಹೀದ್ ಮತ್ತು ಸಾಲಿಹ್ ಆಗುವ ಮಾರ್ಗ ತೆರೆದಿತ್ತು. ಆದರೆ ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್‌ರವರ ಆಗಮನದ ನಂತರ ಸಿದ್ದೀಖ್, ಶಹೀದ್ ಮತ್ತು ಸಾಲಿಹ್ ಆಗುವ ಮಾರ್ಗ ಮಾತ್ರ ತೆರೆದಿದೆ. ನುಬುವ್ವತಿನ ಮಾರ್ಗ ಮುಚ್ಚಲ್ಪಟ್ಟಿದೆ. ಅಹ್ಮದಿಯರು ನಂಬುವುದೇನೆಂದರೆ, ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಆಗಮನದ ನಂತರ ಎಲ್ಲಾ ರೀತಿಯ ದೈವಿಕ ಬಹುಮಾನಗಳ ಬಾಗಿಲು ತೆರೆದಿದೆ. ಮಾತ್ರವಲ್ಲ, ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್‌ರವರ ಉನ್ನತ ವೈಭವ ಮತ್ತು ಪದವಿಯ ಕಾರಣದಿಂದ ಅದು ಹೆಚ್ಚು ವಿಶಾಲವಾಗಿ ತೆರೆದಿದೆ. ಅಲ್ಲಾಹನ ಅನುಗ್ರಹಗಳ ಮತ್ತು ಆಧ್ಯಾತ್ಮಿಕ ಪ್ರಕಾಶಗಳ ಒರತೆಗಳು ಹೊರಚಿಮ್ಮಿ ಹರಿಯುತ್ತಾ ಇವೆ. ಹಿಂದೆ ಅಲ್ಲಾಹನ ಅನುಗ್ರಹಗಳು ನೇರವಾಗಿ ದೊರೆಯುತ್ತಿದ್ದುವು. ಆದರೆ ಈಗ ಅವು ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್‌ರವರ ದಾಸ್ಯವನ್ನು ಸ್ವೀಕರಿಸುವ ಮೂಲಕ ಮಾತ್ರ ದೊರಕುವುವು.

ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಈ ಬಗ್ಗೆ ಹೀಗೆ ಹೇಳಿದ್ದಾರೆ:

**ಹಮ್ ಹುಯೇ ಖೈರೆ ಉಮಮ್ ತುಜ್‌ಸೇ ಹೀ ಅಯೆ ಖೈರೆ ರಸೂಲ್**
**ತೇರೆ ಬಢ್ನೇ ಸೆ ಖದಮ್ ಆಗೆ ಬಢಾಯಾ ಹಮ್‌ನೆ**

**(ಆಯಿನ ಕಮಲಾತೆ ಇಸ್ಲಾಮ್)**

**"ಓ ಶ್ರೇಷ್ಠ ಸಂದೇಶವಾಹಕರೇ, ನಾವು ಉತ್ತಮ ಸಮುದಾಯವಾದುದು ನಿಮ್ಮ ಮೂಲಕವೇ ಆಗಿದೆ. ನೀವು ಮುಂದೆ ಸಾಗಿದುದರಿಂದಲೇ ನಾವು ಹೆಜ್ಜೆ ಮುಂದೆ ಹಾಕಿ ಸಾಗಿದೆವು."**

ಬಂಧುಗಳೇ, ಸ್ನೇಹಿತರೇ, ನೀವು ಅಲ್ಲಾಹನನ್ನು ನೆನಪಿಸಿ ನಿಮ್ಮ ಪೂರ್ವಗ್ರಹಗಳನ್ನು ಕೈ ಬಿಟ್ಟು ಯೋಚಿಸಿರಿ. ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್‌ರವರ ಶ್ರೇಷ್ಠತೆ ಪ್ರಕಟವಾಗುವುದು ಯಾವುದರಿಂದ? ಅವರ ಆಗಮನದ ನಂತರ ಎಲ್ಲಾ ವಿಧ ಪ್ರವಾದಿತ್ವದ ಬಾಗಿಲು ಮುಚ್ಚಲ್ಪಟ್ಟು, ಅವರನ್ನು ಹರಿಯುವ ಒಂದು ಕಾಲುವೆಯನ್ನು ಒಣಗಿಸುವವನೆಂದು ಹೇಳುವುದರಿಂದ ಅವರ ಘನತೆ

ಹೆಚ್ಚುತ್ತದೆಯೋ? ಅಥವಾ ಅವರ ಅನುಗ್ರಹೀತ ಅಸ್ತಿತ್ವದ ಕಾರಣದಿಂದ ನುಬುವ್ವತಿನ ಕಾರಂಜಿಗಳು ಹೊರ ಚಿಮ್ಮುತ್ತವೆ ಎಂದು ಹೇಳುವುದರಿಂದಲೋ? ಹಿಂದಿನ ಕಾಲದಲ್ಲಿ ಯಾವುದೇ ನಬಿಯನ್ನು ಅನುಸರಿಸುವ ಮೂಲಕವಲ್ಲದೆ ನೇರವಾಗಿ ಲಭಿಸುತ್ತಿದ್ದ ಅನುಗ್ರಹಗಳು ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್‌ರವರನ್ನು ಅನುಸರಿಸುವ ಮೂಲಕ, ಅವರ ಅಂಗೀಕಾರದ ಮುದ್ರೆಯಿಂದ, ಅವರ ಅನುಗ್ರಹದಿಂದ ಮಾತ್ರ ಸಿಗುವುದೆಂದೂ ಹೇಳುವುದರಲ್ಲಿ ಅಲ್ಲವೇ ಅವರಿಗೆ ಘನತೆ ಹೆಚ್ಚುವುದು?

ನೀವು ಅಲ್ಲಾಹನಿಗಾಗಿ ಸಾಕ್ಷಿ ಹೇಳಿರಿ. ಯಾರ ಕೈಯಲ್ಲಿ ನಮ್ಮ ಪ್ರಾಣಗಳು ಇವೆಯೋ ಆ ಅಲ್ಲಾಹನಿಗೆ ನೀವು ಸಾಕ್ಷಿ ಹೇಳಿರಿ. ನಾವೆಲ್ಲರೂ ಮೃತರಾಗಿ ಅವನ ಮುಂದೆ ನಮ್ಮ ಕೃತ್ಯಗಳ ಕುರಿತು ಉತ್ತರಿಸಬೇಕಾಗಿದೆ. ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್‌ರವರಿಗೆ ಹೆಚ್ಚಿನ ಗೌರವ ದೊರಕುವುದು ಯಾವುದರಿಂದ? ಅವರ ಸಮುದಾಯದೊಳಗೆ ಪ್ರವಾದಿತ್ವ ಶೃಂಖಲೆ ನಿಲ್ಲಿಸಲ್ಪಡುವುದರಿಂದಲೋ ಅಥವಾ ಅವರ ಸಮುದಾಯದ ಹೊರಗೆ ಅದು ನಿಲ್ಲಿಸಲ್ಪಟ್ಟು, ಅವರ ದಾಸ್ಯದ ಸಂಕೋಲೆಯಲ್ಲಿ ಬಂಧಿತರಾದವರಲ್ಲಿ ಅದು ಜಾರಿಯಾಗುವುದರಿಂದಲೋ?

ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್‌ರವರ ಶಿಷ್ಯರಲ್ಲಿ ಮತ್ತು ಸೇವಕರಲ್ಲಿ ಝಿಲ್ಲೀ ನುಬುವ್ವತಿನ ಬಾಗಿಲು ತೆರೆದಿರುವುದರಲ್ಲಿ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್‌ರವರ ಶ್ರೇಷ್ಠತೆ ಸ್ಪಷ್ಟವಾಗುತ್ತದೆ ಎಂದು ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್‌ರವರನ್ನು ಪ್ರೀತಿಸುವ ಮತ್ತು ಅವರ ಶ್ರೇಷ್ಠ ಪದವಿಯನ್ನು ಗುರುತಿಸಿರುವ ಪ್ರತಿಯೊಬ್ಬನು ಅಂಗೀಕರಿಸದೆ ಇರಲಾರನು.

ನೀವು ನೋಡಿರಿ, ಹಝ್ರತ್ ಮೂಸಾ ಅಲೈಹಿಸ್ಸಲಾಮ್‌ರವರ ನಂತರ ಎಷ್ಟು ಪ್ರವಾದಿಗಳು ಆಗಮಿಸಿದರು. ಅವರ ನಂತರ ನಬಿಗಳ ಒಂದು ಸರಣಿಯೇ ಸ್ಥಾಪಿತವಾಯಿತು. ಆ ಪ್ರವಾದಿಗಳು ಹಝ್ರತ್ ಮೂಸಾ ಅಲೈಹಿಸ್ಸಲಾಮ್‌ರವರನ್ನು ಅನುಸರಿಸುವುದರಿಂದ ಆ ಅನುಗ್ರಹ ಪಡೆಯದಿದ್ದರೂ ಅವರನ್ನೆಲ್ಲಾ ಹಝ್ರತ್ ಮೂಸಾ ಅಲೈಹಿಸಲಾಮ್‌ರವರ ಅಧೀನದಲ್ಲಿ ಇರಿಸಲಾಯಿತು. ಅವರು ಮೂಸವೀ ಶರೀಅತಿನ ಸೇವಕರಾಗಿದ್ದರು. ಆದರೆ ನಿಮ್ಮ ತಿಳುವಳಿಕೆ ಕುರಿತು ಏನು ಹೇಳಲಿ. ನಿಮ್ಮ ನೇತರರಾದ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್‌ರವರ ದಾಸರಲ್ಲಿ ಒಬ್ಬನು ಪ್ರವಾದಿಯಾಗುವುದು ನಿಮಗೆ ಸಹಿಸಲಾಗುವುದಿಲ್ಲ. ಅವರು ನಿಮ್ಮ ಕಣ್ಣಿಗೆ ಮುಳ್ಳಾಗಿರುವರು!

### ನುಬುವ್ವತ್ ಕುರಿತು ನಮ್ಮ ನಿಲುವು ಇತರ ಮುಸ್ಲಿಮರ ಕಲ್ಪನೆಯಲ್ಲಿ ಇರುವ ರೀತಿ ಅಲ್ಲ.

ಕೊನೆಯದಾಗಿ ಒಂದು ಸಂಗತಿಯ ಕುರಿತು ನಾವು ಪುನಃ ಸ್ಪಷ್ಟಪಡಿಸುತ್ತೇವೆ. ಇತರ ಮುಸ್ಲಿಮರಿಗೆ ನಮ್ಮ ನಂಬಿಕೆಗಳ ಕುರಿತು ತಪ್ಪು ಗ್ರಹಿಕೆಗಳನ್ನು ನೀಗಿಸಲು ಈ ಸ್ಪಷ್ಟೀಕರಣ ಆವಶ್ಯಕವಾಗಿದೆ. ಯಾವ ಅರ್ಥದಲ್ಲಿ ಅಹ್ಮದಿಯಾ ಜಮಾಅತಿನ ಸ್ಥಾಪಕರು ತಮ್ಮನ್ನು ನಬಿ ಎಂದು ಹೇಳಿರುವರೋ ಮತ್ತು ಯಾವ ಅರ್ಥದಲ್ಲಿ ಅವರನ್ನು ನಬಿ ಎಂದು ನಾವು ಹೇಳುತ್ತೇವೋ ಅದು ಇಂದಿನ ಕಾಲದಲ್ಲಿ ಇತರ ಮುಸ್ಲಿಮರು ಯಾವ ಅರ್ಥದಲ್ಲಿ ನಬಿತ್ವವನ್ನು ಕಲ್ಪನೆ ಮಾಡುತ್ತಿರುವರೋ ಆ ಅರ್ಥದಲ್ಲಿ ಖಂಡಿತ ಅಲ್ಲ. ಇಂದಿನ ಕಾಲದಲ್ಲಿ ಮುಸ್ಲಿಮರು ನಬಿಯ ಕುರಿತು ಈ ಕೆಳಗಿನಂತೆ ತಪ್ಪು ಗ್ರಹಿಕೆಗಳನ್ನು ಹೊಂದಿದ್ದಾರೆ: ನಬಿ ಹೊಸ ಶರೀಅತನ್ನು ತರುತ್ತಾರೆ. ಅಥವಾ ಹಿಂದಿನ ಶರೀಅತಿನಲ್ಲಿ ಏನಾದರೂ ಹೆಚ್ಚು ಕಡಿಮೆ ಮಾಡುತ್ತಾರೆ. ಹಿಂದಿನ ಪ್ರವಾದಿಯಿಂದ ಸ್ವತಂತ್ರನಾಗಿ ನಬಿಯೆಂದು ವಾದಿಸುತ್ತಾರೆ. ಹೊಸದಾಗಿ ತನ್ನ ಕಲಿಮವನ್ನು ರೂಪಿಸುತ್ತಾರೆ. ಹೊಸ ಧರ್ಮಕ್ಕೆ ಅಸ್ತಿಭಾರ ಹಾಕುತ್ತಾರೆ. ಇತ್ಯಾದಿ ಇತ್ಯಾದಿ.

ಅಹ್ಮದಿಯಾ ಜಮಾಅತಿನ ಸ್ಥಾಪಕರ ಬರೆಹಗಳಲ್ಲಿ ನುಬುವ್ವತಿನ ವಾದವನ್ನು ಓದಿದಾಗ ಅಥವಾ ಯಾವನೇ ಅಹ್ಮದಿಯ ಬಾಯಿಯಿಂದ "ನಮ್ಮ ಇಮಾಮ್‌ರವರು ನುಬುವ್ವತಿನ ಪದವಿ ಪಡೆದಿರುವರು" ಎಂದು ಕೇಳಿದಾಗ ಅಹ್ಮದಿಯೇತರ ಮುಸ್ಲಿಮರು, ಅವರು ನುಬುವ್ವತ್ ಕುರಿತು ಹೊಂದಿರುವ ತಪ್ಪು ಕಲ್ಪನೆಗಳ ಕಾರಣದಿಂದ ಇದು ತಾವು ಯೋಚಿಸುವ ಹಾಗೆಯೇ ಇರುವ ನುಬುವ್ವತಿನ ವಾದವೆಂದು ಕೂಡಲೇ ಭಾವಿಸುತ್ತಾರೆ. ಅಹ್ಮದಿಯಾ ಜಮಾಅತಿನ ಸ್ಥಾಪಕರು ಹೊಸದಾದೊಂದು ಧರ್ಮಕ್ಕೆ ಅಸ್ತಿಭಾರ ಹಾಕಿದ್ದಾರೆಂದೂ ಅವರು ಹೊಸದಾದೊಂದು ಕಲಿಮವನ್ನು ಆವಿಷ್ಕರಿಸಿದ್ದಾರೆಂದೂ ಅವರಿಗೂ ಇಸ್ಲಾಮಿಗೂ ಯಾವ ಸಂಬಂಧವೂ ಇಲ್ಲವೆಂದೂ ಅವರು ಭಾವಿಸುತ್ತಾರೆ.

ಅವರು ಹೇಳುವುದು ಖಂಡಿತವಾಗಿಯೂ ಸರಿಯಲ್ಲ. ನಾವು ಅಲ್ಲಾಹನ ಹೆಸರಲ್ಲಿ ಪ್ರಮಾಣ ಮಾಡಿ ಹೇಳುತ್ತೇವೆ. ಸುಳ್ಳು ಪ್ರಮಾಣ ಮಾಡುವುದು ಅಲ್ಲಾಹನ ಶಾಪಕ್ಕೆ ಗುರಿಯಾಗುವಂತೆ ಮಾಡುತ್ತದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹಾಗಿರುವ ಯಾವ ವಾದವನ್ನೂ ಮಾಡಿಲ್ಲ. ನಾವು ಅವರ ಕುರಿತು ಆ ರೀತಿಯಲ್ಲಿ ನಂಬಿಕೆಯನ್ನೂ ಹೊಂದಿಲ್ಲ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ತಮ್ಮ ಗ್ರಂಥಗಳಲ್ಲಿ ಪದೇ ಪದೇ ಬರೆದಿರುವುದು ಹೇಗೆಂದರೆ, ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್‌ರವರ ದಾಸ್ಯದಲ್ಲಿ ಮತ್ತು ಶಿಷ್ಯರಾಗಿ ಇಸ್ಲಾಮಿನ ಸೇವೆಗಾಗಿ ಅವರನ್ನು ಅಲ್ಲಾಹನು ನೇಮಿಸಿರುವನು. ಅವರು ಹೊಸ ಕಲಿಮವನ್ನು ಆವಿಷ್ಕರಿಸಿಲ್ಲ. ಅವರ ಕಲಿಮ ಶಾಶ್ವತವಾಗಿರುವ ಮತ್ತು ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರಿಗೆ ನೀಡಲ್ಪಟ್ಟ ಕಲಿಮವಾಗಿದೆ :

**"ಲಾ ಇಲಾಹ ಇಲ್ಲಲ್ಲಾಹು ಮುಹಮ್ಮದುರ್ರಸೂಲುಲ್ಲಾಹ್- ಅಲ್ಲಾಹನ ಹೊರತು ಅನ್ಯದೇವನಿಲ್ಲ; ಮುಹಮ್ಮದ್ ಅವನ ಸಂದೇಶವಾಹಕರಾಗಿದ್ದಾರೆ."**

ಭೂಮ್ಯಾಕಾಶಗಳೇ, ಸರ್ವ ಜನರೇ, ನೀವು ಸಾಕ್ಷಿಯಾಗಿರಿ. ನಾವು ಅಲ್ಲಾಹನ ಪ್ರಮಾಣ ಮಾಡಿ ಈ ಸಾಕ್ಷಿ ಹೇಳಿದ್ದೇವೆ. ನಾವು ಇದೇ ಸಾಕ್ಷ್ಯದೊಂದಿಗೆ ಇನ್‌ಶಾ ಅಲ್ಲಾಹ್ ಇಹಲೋಕದಿಂದ ಹೋಗುವೆವು. ನಮ್ಮ ಧರ್ಮ ಇಸ್ಲಾಮ್ ಆಗಿದೆ. ನಮ್ಮ ಗ್ರಂಥ ಪವಿತ್ರ ಖುರ್‌ಆನ್ ಆಗಿದೆ. ನಮ್ಮ ರಸೂಲ್ (ದೇವ ಸಂದೇಶ ವಾಹಕ) ಹಝ್ರತ್

ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್ ಆಗಿದ್ದಾರೆ. ಅವರು ಖಾತಮುನ್ನಬಿಯ್ಯೀನರಾಗಿದ್ದಾರೆ. ಅವರು ಎಲ್ಲಾ ಪ್ರವಾದಿಗಳಿಗಿಂತ ಶ್ರೇಷ್ಠರಾಗಿದ್ದಾರೆ. ಅವರು ಸಯ್ಯಿದುಲ್ ಅವ್ವಲೀನ್ (ಹಿಂದಿನ ಕಾಲದವರ ನಾಯಕ) ವ ಸಯ್ಯಿದುಲ್ ಆಖರೀನ್ (ಮತ್ತು ಮುಂದಿನ ಕಾಲದವರ ನಾಯಕ) ಆಗಿದ್ದಾರೆ. ನಾವು ಅವರ ಉಮ್ಮತ್‌ಗೆ (ಸಮುದಾಯಕ್ಕೆ) ಸೇರಿದವರಾಗಿದ್ದೇವೆ. ಈ ನಂಬಿಕೆಯ ಹೊರತು ಬೇರೆ ಯಾವುದಾದರೂ ನಂಬಿಕೆಯನ್ನು ನಾವು ಹೊಂದಿರುವುದಾಗಿ ಆರೋಪಿಸುವವರು ಸುಳ್ಳು ಸೃಜಿಸುವವರಾಗಿದ್ದಾರೆ. ಅವರು ಎಂತಹ ಅಕ್ರಮ ಕೃತ್ಯ ಮಾಡುತ್ತಿರುವರೆಂದರೆ ಅಲ್ಲಾಹನ ಮುಂದೆ ಅವರು ಅದಕ್ಕೆ ಉತ್ತರ ಹೇಳಬೇಕಾಗಿದೆ. ಹಝ್ರತ್ ಮಸೀಹ್ ಮೌಊದ್‌ರವರ ನುಬುವ್ವತ್ ನಮ್ಮ ವಿರೋಧಿಗಳು ತಮ್ಮ ಭಾವನೆಗಳಲ್ಲಿ ಕಲ್ಪಿಸಿರುವ ನುಬುವ್ವತ್ ಹಾಗೆ ಇರುವ ನುಬುವ್ವತ್ ಖಂಡಿತವಾಗಿಯೂ ಖಂಡಿತವಾಗಿಯೂ ಅಲ್ಲ. ಅದೊಂದು ಆಧ್ಯಾತ್ಮಿಕ ಪದವಿಯಾಗಿದೆ. ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್‌ರವರನ್ನು ಅನುಸರಿಸುವ ಮೂಲಕ ಅವರ ಶಿಷ್ಯರಾದವರಿಗೆ ಅದು ಲಭಿಸುತ್ತದೆ. ಅದು ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಉನ್ನತ ಪದವಿಯನ್ನು ಪ್ರಕಟಿಸಲು ಅವರ ಶಿಷ್ಯರಿಗೆ ನೀಡಲಾಗಿದೆ. ಇದರ ಅರ್ಥ ಅಲ್ಲಾಹನಿಂದ ಹೆಚ್ಚು ಹೆಚ್ಚಾಗಿ ಸಂದೇಶವಾಣಿ ಲಭಿಸುವುದು ಮತ್ತು ಆಗೋಚರ ವಿಷಯಗಳ ಪ್ರಕಟಣೆಯಾಗಿದೆ. ಇದರ ಹೊರತು ಈ ನುಬುವ್ವತ್ ಬೇರೇನೂ ಅಲ್ಲ, ಯಥಾರ್ಥವಾಗಿ ನಾವು ಈ ಮೊದಲು ಬರೆದಂತೆ ನುಬುವ್ವತ್ ಎಂದರೆ ಇದೇ ಆಗಿರುತ್ತದೆ; ಯಾವುದಾದರೂ ಹೊಸ ಶರೀಅತಿನ ಅವತೀರ್ಣವಾಗುವಿಕೆಯಲ್ಲ. ಅದು ನುಬುವ್ವತ್‌ಗೆ ಹೆಚ್ಚುವರಿಯಾಗಿರುವ ಒಂದು ವಸ್ತುವಾಗಿದೆ. ನಮ್ಮ ಸ್ನೇಹಿತರು ಈ ಸಂಗತಿ ಅರಿತುಕೊಂಡರೆ ಎಷ್ಟು ಚೆನ್ನಾಗಿತ್ತು!

## ಕೊನೆಯ ಮಾತು

ಅಲ್ಲಾಹನ ಅನುಗ್ರಹದಿಂದ ಖತಮುನ್ನಬುವ್ವತ್‌ಗೆ ಸಂಬಂಧಿಸಿದ ಎಲ್ಲಾ ಸಂಗತಿಗಳನ್ನು ವಿವರಿಸಿದ್ದೇನೆ. ಪ್ರಥಮವಾಗಿ ಪ್ರಸ್ತಾವನೆಯ ನಂತರ ಪವಿತ್ರ ಖುರ್‌ಆನಿನ ವಚನಗಳ ಮೂಲಕ ಖತಮುನ್ನಬುವ್ವತ್ ಕುರಿತು ವಿವರಿಸಿದ್ದೇನೆ. ಅನಂತರ ಹದೀಸುಗಳ ಮೂಲಕ ಚರ್ಚೆ ಮುಂದುವರಿಸಿದೆನು. ಆಮೇಲೆ ಹಿಂದಿನ ಕಾಲದ ಮಹಾತ್ಮರ ಅಭಿಪ್ರಾಯಗಳನ್ನು ನಿಮ್ಮ ಮುಂದಿರಿಸಿದೆನು. ಕೊನೆಗೆ ಬೌದ್ಧಿಕ ಸಾಕ್ಷ್ಯಾಧಾರಗಳನ್ನು ನೀಡಿ ಈ ಕಾಲಘಟ್ಟದಲ್ಲಿ ಒಬ್ಬ ಆಧ್ಯಾತ್ಮಿಕ ಮಹಾಸುಧಾರಕ ಬರಬೇಕಾಗಿದೆ ಎಂಬುದನ್ನು ಸಾಬೀತು ಗೊಳಿಸಿದೆನು.

ಯಾವುದಾದರೂ ಇಸ್ಲಾಮಿ ಸಮಸ್ಯೆಯ ಪರಿಹಾರಕ್ಕೆ ಮೇಲೆ ವಿವರಿಸಿದ ನಾಲ್ಕು ಮಾರ್ಗಗಳು ಇವೆ. ಈ ನಾಲ್ಕು ಮಾರ್ಗಗಳೂ ನಮ್ಮ ವಾದಕ್ಕೆ ಅನುಕೂಲವಾಗಿ ತೀರ್ಮಾನ ನೀಡುತ್ತಿವೆ. ಪವಿತ್ರ ಖುರ್‌ಆನ್ ಸಾಕ್ಷಿ ನುಡಿಯುವುದೇನೆಂದರೆ, ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಸಮುದಾಯ ಖೈರುಲ್ ಉಮ್ಮತ್ (ಎಲ್ಲಾ ಸಮುದಾಯಗಳಿಗಿಂತ ಶ್ರೇಷ್ಠ) ಆಗಿರುವುದರಿಂದ ಹಿಂದಿನ ಕಾಲದ ಸಮುದಾಯಗಳಿಗಿಂತ ಹೆಚ್ಚಿನ ಆಧ್ಯಾತ್ಮಿಕ ಬಹುಮಾನಗಳ ಬಾಗಿಲು ಅದಕ್ಕೆ ತೆರೆದಿದೆ. ಹಿಂದಿನ ಸಮುದಾಯಗಳಲ್ಲಿ ಯಾರಿಗಾದರೂ ನುಬುವ್ವತ್ ಅವರ ಹಿಂದೆ ಆಗಮಿಸಿದ ಪ್ರವಾದಿಯನ್ನು ಅನುಸರಿಸುವ ಮೂಲಕ ದೊರಕುತ್ತಾ ಇರಲಿಲ್ಲ. ಅದು ನೇರವಾಗಿ ದೊರಕುತ್ತಿತ್ತು. ಆದರೆ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್ ಖಾತಮುನ್ನಬಿಯ್ಯೀನ್ ಆಗಿರುವುದರಿಂದ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಅನುಯಾಯಿಗಳಿಗೆ ಈ ಬಾಗಿಲು ತೆರೆದು ಇದೆ.

ಹದೀಸುಗಳು ನೀಡುವ ಸಾಕ್ಷ್ಯವೇನೆಂದರೆ, ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಸಮುದಾಯದಲ್ಲಿ ಶರಿಯತೇತರ ಪ್ರವಾದಿ ಬರಬಹುದಾಗಿದೆ. ನುಬುವ್ವತ್ ಕೊನೆಗೊಂಡಿದೆ ಎಂದು ಸೂಚಿಸುವಂತೆ ತೋರುವ ಕೆಲವು ಮುತಶಾಬಿಹ್ (ಸಾದೃಶ್ಯ) ಹದೀಸುಗಳು ಸಹ ತಶ್‌ರೀಈ ಮತ್ತು ಮುಸ್ತಖಿಲ್ ನುಬುವ್ವತ್‌ಗಳ ಬಾಗಿಲನ್ನು ಮಾತ್ರ ಮುಚ್ಚಿದೆ ಎಂದು ಸೂಚಿಸುತ್ತದೆ. ಝಿಲ್ಲೀ ನುಬುವ್ವತಿನ ಬಾಗಿಲು ಖಂಡಿತವಾಗಿಯೂ ಮುಚ್ಚಲ್ಪಟ್ಟಿಲ್ಲ. ಝಿಲ್ಲೀ ನುಬುವ್ವತ್ ಎಂದರೆ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್‌ರವರ ದಾಸನಾದವನು ಅವರಿಂದ ಆಶೀರ್ವಾದ ಪಡೆದು ಅವರ ಪ್ರಕಾಶವನ್ನು ಪ್ರತಿಬಿಂಬಿಸಿ ನುಬುವ್ವತ್ ಸ್ಥಾನ ಪಡೆಯುವುದಾಗಿದೆ. ಇಂತಹ ನುಬುವ್ವತ್ ಫನಾಫಿರ್ರಸೂಲ್ (ಪ್ರವಾದಿಯೊಂದಿಗೆ ಲೀನವಾಗುವ) ಮೂಲಕ ಲಭಿಸುವುದರಿಂದ ಅದು ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್‌ರವರ ನುಬುವ್ವತಿನ ಒಂದು ಭಾಗವೇ ಆಗಿದೆ. ಅದು ಅದಕ್ಕೆ ಹೊರಗಿರುವುದೇನೂ ಅಲ್ಲ. ಆದುದರಿಂದ ಇಂತಹ ನುಬುವ್ವತ್ ಜಾರಿಯಾದರೂ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್ ಅಂತಿಮ ಪ್ರವಾದಿಯೇ ಆಗಿ ಉಳಿಯುತ್ತಾರೆ.

ಮೂರನೆಯದಾಗಿ, ಇಸ್ಲಾಮ್ ಧರ್ಮದ ಪೂರ್ವಿಕ ಮಹಾತ್ಮರ ಹೇಳಿಕೆಗಳನ್ನು ನಾವು ವಿವರಿಸಿದ್ದೇವೆ. ಸಹಾಬಿಗಳ ಕಾಲದಿಂದ ಮೊದಲ್ಗೊಂಡು ಆಧುನಿಕ ಕಾಲದ ತನಕ ವಿವಿಧ ಕಾಲಘಟ್ಟಗಳಲ್ಲಿ ಯಾರಾದರೊಬ್ಬ ಹಿರಿಯ ಮುಸ್ಲಿಮ್ ಮಹಾನುಭಾವರು ನಾವು ಹೊಂದಿರುವ ನಂಬಿಕೆಯ ಹಾಗೆಯೇ ಇರುವ ನಂಬಿಕೆಯನ್ನು ಪ್ರಕಟಿಸುತ್ತಾ ಇದ್ದರೆಂದು ನಾವು ಸಾಬೀತುಗೊಳಿಸಿದ್ದೇವೆ. ಈ ಸಾಕ್ಷ್ಯಗಳು ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹು ಮತ್ತು ಹಝ್ರತ್ ಆಯಿಶಾ ರಝಿಯಲ್ಲಾಹು ಅನ್‌ಹಾರವರ ಸಾಕ್ಷ್ಯದಿಂದ ಆರಂಭಗೊಂಡಿದೆ. ಹಝ್ರತ್ ಶೇಕ್ ಮುಹ್ಯುದ್ದೀನ್ ಇಬ್ನು ಅರಬಿ, ಹಝ್ರತ್ ಶೇಖ್ ಅಹ್ಮದ್ ಸರ್‌ಹಿಂದೀ (ಮುಜದ್ದಿದ್ ಅಲ್‌ಫಿಸ್ಸಾನಿ ರಹ್ಮತುಲ್ಲಾಹಿ ಅಲೈಹ್) ಹಝ್ರತ್ ಶಾ ವಲಿಯುಲ್ಲಾಹ್ ಮುಹದ್ದಿಸ್‌ದೆಹ್ಲವಿ (ನವ್ವರಲ್ಲಾಹು ಮರ್‌ಖದಹೂ) ಮೊದಲಾದ ಘನವೆತ್ತ ಮಹಾನುಭಾವರ ಕಾಲಘಟ್ಟವನ್ನು ದಾಟುತ್ತಾ ಕೊನೆಗೆ ಮದ್ರಸ ದಾರುಲ್‌ಉಲೂಮ್ ದೇವ್ ಬಂದ್ ಇದರ ಸ್ಥಾಪಕ ಮೌಲಾನ ಮುಹಮ್ಮದ್ ಖಾಸಿಮ್ ನಾನೂತ್‌ವೀಯವರ ಕಾಲದ ತನಕ ಮುಂದುವರಿದಿದೆ. ಈ ಕಾಲಘಟ್ಟದ ಕೊನೆಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಕಾಲಘಟ್ಟ ಆರಂಭವಾಗುತ್ತದೆ.

ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ನಂತರ ಒಬ್ಬ ಶರಿಯತೇತರ ಉಮ್ಮತೀ ನಬಿ ಆಗಮಿಸಿರುವರೆಂದು ಹೇಳಿದ ಕಾರಣ ನಾವು ಕಾಫಿರ್, ಮುರ್‌ತದ್ದ್, ಮತ್ತು ಇಸ್ಲಾಮಿನ ವಲಯದಿಂದ ಹೊರಗೆ ಎಂದು ನಮ್ಮ ವಿರೋಧಿಗಳು ಹೇಳುವುದಾದರೆ ಅವರು ಈ ಮೇಲೆ ವಿವರಿಸಿದ ಮಹಾನುಭಾವರ ಕುರಿತು ಏನು ಹೇಳುವರು. ಆ ಮಹಾನುಭಾವರು ನಮ್ಮ ಹಾಗೆಯೇ ನಂಬಿಕೆ ಹೊಂದಿದ್ದರು.

ಕೊನೆಯದಾಗಿ, ಬೌದ್ಧಿಕ ಸಾಕ್ಷ್ಯಾಧಾರಗಳು. ಅಲ್ಲಾಹನ ನಡವಳಿಕೆ, ಕಾಲಘಟ್ಟದ ಸಾಕ್ಷ್ಯ, ಪ್ರಕೃತಿಯ ಕೋರಿಕೆಗಳು ನಮ್ಮ ವಾದಕ್ಕೆ ಅನುಕೂಲವಾಗಿವೆ. ಈ ಬಗ್ಗೆ ಅಲ್ಲಾಮ ಇಖ್‌ಬಾಲ್ ಮತ್ತು ಮೌಲವಿ ಮೌದೂದಿ ಹೇಳಿದುದನ್ನೂ ನಾವು ಉಲ್ಲೇಖಿಸಿದ್ದೇವೆ.

ಮೇಲಿನ ನಾಲ್ಕು ಸಾಕ್ಷ್ಯಗಳು ನಮ್ಮ ನಂಬಿಕೆಗಳಿಗೆ ಸಾಕ್ಷ್ಯಾಧಾರಗಳಾಗಿವೆ. ಪ್ರತಿಯೊಂದು ಸಾಕ್ಷ್ಯವು ಸಾಕ್ಷ್ಯದ ಒಂದು ಉನ್ನತ ಮಿನಾರಿನ ಹಾಗಿದೆ. ಹೀಗಿದ್ದರೂ ನಮ್ಮ ಮೇಲೆ ನಾವು ಖತಮುನ್ನಬುವ್ವತ್ ನಿರಾಕರಿಸುವವರೆಂದೂ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರನ್ನು ನಿಂದಿಸುವವರೆಂದೂ ನಾವು ಇಸ್ಲಾಮನ್ನು ಬಿಟ್ಟು ಹೊಸ ಧರ್ಮ ರಚಿಸುವವರೆಂದೂ ಹೊಸ ಕಲಿಮ ಆವಿಷ್ಕರಿಸಿದವರೆಂದೂ ಹೇಳುವುದು ಎಂತಹ ಸುಳ್ಳು, ಎಂತಹ ಅಕ್ರಮ, ಎಂತಹ ನೋವನ್ನುಂಟು ಮಾಡುವ ವಿಷಯವಾಗಿದೆ! ನಮ್ಮ ಇಮಾಮರಾದ ಹಝ್ರತ್ ಮಸೀಹ್ ಮೌಊದ್ ಅಲೈಹಿಸಲಾಮ್ ನೋವಿನಿಂದ ಹೀಗೆ ಹಾಡಿದರು:

ಹಮ್ ತೊ ರಖ್ತೇ ಹೈಂ ಮುಸಲ್ಮಾನೋಂ ಕಾ ದೀನ್
ದಿಲ್ ಸೆ ಹೈಂ ಖುದ್ದಾಮೆ ಖತ್‌ಮುಲ್ ಮುರ್‌ಸಲೀನ್
ಶಿರ್ಕ್ ಔರ್ ಬಿದ್ ಅತ್ ಸೆ ಹಮ್ ಬೇಝಾರ್ ಹೈಂ
ಖಾಕ್ ರಾಹೆ ಅಹ್ಮದೆ ಮುಖ್ತಾರ್ ಹೈಂ
ಸಾರೇ ಹುಕ್‌ಮೋಂ ಪರ್ ಹಮೇಂ ಈಮಾನ್ ಹೈ
ಜಾನೋ ದಿಲ್ ಇಸ್ ರಾಹ್ ಪರ್ ಖುರ್‌ಬಾನ್
ಹೈ.ದೇ ಚುಕೇ ದಿಲ್ ಅಬ್ ತನೆ ಖಾಕೀ ರಹಾ
ಹೈ ಯಹೀ ಖಾಹಿಶ್ ಕೆ ಹೋ ಓಹ್ ಭೀ ಫಿದಾ
ತುಮ್ ಹಮೇಂ ದೇತೇ ಹೋ ಕಾಫಿರ್ ಕಾ ಖಿತಾಬ್
ಕ್ಯೊಂ ನಹೀಂ ಲೋಗೋ ತುಮ್ಹೇಂ ಖೌಫೆ ಇಖಾಬ್

"ನಮ್ಮ ಧರ್ಮ ಇಸ್ಲಾಂ ಆಗಿದೆ. ನಾವು ಸರ್ವ ಶ್ರೇಷ್ಠ ಪ್ರವಾದಿಯ ಸೇವಕರಾಗಿದ್ದೇವೆ ಹೃತ್ಪೂರ್ವಕ. ಬಹುದೈವಾರಾಧನೆ ಮತ್ತು ನವೀನಾಚಾರಗಳಿಗೆ ನಾವು ವಿರುದ್ಧವಾಗಿದ್ದೇವೆ. ನಾವು ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಮಾರ್ಗದ ಧೂಳು ಆಗಿದ್ದೇವೆ. ಎಲ್ಲಾ ಆಜ್ಞೆಗಳನ್ನು ನಾವು ಪಾಲಿಸುತ್ತೇವೆ. ಜೀವ ಮತ್ತು ಹೃದಯ ಈ ಮಾರ್ಗದಲ್ಲಿ ಬಲಿದಾನ ಅರ್ಪಿಸುತ್ತೇವೆ. ನಾವು ಹೃದಯ ನೀಡಿದ್ದೇವೆ. ಬರೇ ದೇಹ ಬಾಕಿ ಇದೆ. ಅದು ಸಹ ಅರ್ಪಿಸಲ್ಪಡಬೇಕೆಂದು ಆಶೆಯಿದೆ. ನೀವು ನಮಗೆ ಕಾಫಿರ್ ಎಂಬ ಬಿರುದು ಕೊಡುತ್ತಿರುವಿರಿ. ಓ ಜನರೇ ಸಿಗಲಿರುವ ಶಿಕ್ಷೆಯ ಹೆದರಿಕೆ ನಿಮಗೆ ಏಕಿಲ್ಲ."

ಮೇಲೆ ಬರೆದುದು ನಮ್ಮ ಜಮಾಅತಿನ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಅಲೈಹಿಸ್ಸಲಾಮರ ಪದ್ಯವಾಗಿದೆ. ಅದರ ಪ್ರತಿಯೊಂದು ಶಬ್ದ ಮತ್ತು ಅಕ್ಷರದಲ್ಲಿ ಸೂಚಿತವಾದ ನಂಬಿಕೆಗೆ ನಾವು ಬದ್ಧರಾಗಿದ್ದೇವೆ. ವ ಲಅನತುಲ್ಲಾಹಿ ಅಲಾ ಮನ್ ಕಝಿಬ. ಸುಳ್ಳು ಹೇಳಿದವನ ಮೇಲೆ ಅಲ್ಲಾಹನ ಶಾಪ ಬಂದೆರಗಲಿ. ಲೋಕ ಇಂದು ನಂಬಿದರೂ ನಂಬದಿದ್ದರೂ ಸತ್ಯ ಇನ್‌ಶಾ ಅಲ್ಲಾಹ್ ಲೋಕದಲ್ಲಿ ಜಯಶಾಲಿಯಾಗುವುದು. ಯಾರನ್ನು ಇಸ್ಲಾಮಿನ ಶತ್ರುಗಳೆಂದೂ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರನ್ನು ಅಪಮಾನಿಸುವವರೆಂದೂ ಆರೋಪಿಸಲಾಗುತ್ತಿದೆಯೋ ಅವರೇ ಸತ್ಯವಂತರೆಂದು ಸಾಬೀತಾಗುವುದು. ಇಸ್ಲಾಮಿನ ವಿಜಯದ ನಗಾರಿ ಅವರ ಹೆಸರಿನಲ್ಲಿಯೇ ಬಾರಿಸಲ್ಪಡುವುದು. ಲೋಕ ಇಂದು ಎಂತಹ ಸೂಕ್ಷ್ಮ ಸ್ಥಳದಲ್ಲಿ ನಿಂತಿದೆ ಎಂದರೆ ಅಲ್ಲಿಂದ ಮುಂದೆ ಸಾಗುವ ಮಾರ್ಗ ಕವಲೊಡೆಯುತ್ತದೆ. ಅಲ್ಲಾಹನ ಅನಾದಿ ವಿಧಿ ನಿಯಮವು ನಿಶ್ಚಯಿಸಿರುವುದೇನೆಂದರೆ, ಅಹ್ಮದಿಯಾ ಜಮಾಅತಿನ ಹೆಜ್ಜೆಗಳು ವಿಜಯದ ಮಾರ್ಗದಲ್ಲಿ ಚಲಿಸುವುವು. ಆ ಸಮಯ ಹೆಚ್ಚು ದೂರವಿಲ್ಲ. ಲೋಕವು ಹೇಳುವುದು ಮತ್ತು ನಮ್ಮನ್ನು ಕಾಫಿರ್ ಎಂದು ಹೇಳುವವರ ಮಕ್ಕಳು ಸಾಕ್ಷ್ಯ ಹೇಳುವರು. ಏನೆಂದರೆ, ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಘನತೆ ಮತ್ತು ಔನ್ನತ್ಯ ನಮ್ಮ ಶತ್ರುಗಳು ಹೇಳುವ ಮಾತುಗಳಲ್ಲಿ ಇಲ್ಲ. ಅವು ನಾವು ಹೇಳುವ ನಮ್ಮ ವಿಶ್ವಾಸಗಳಲ್ಲಿದೆ. ಖತಮುನ್ನಬುವ್ವತ್ ಎಂಬುದು ನಮ್ಮ ಮತ್ತು ಇತರ ಮುಸ್ಲಿಮರ ಮಧ್ಯೆ ಇರುವ ಕೊನೆಯ ಕಂದಕವಾಗಿದೆ. ಅಲ್ಲಾಹನ ಅನುಗ್ರಹದಿಂದ ನಾವು ಈ ಕಂದಕವನ್ನು ದಾಟಿದರೆ ಮುಂದಿನ ಮೈದಾನ ಇನ್‌ಶಾ ಅಲ್ಲಾಹ್ ಶುಭ್ರವಾಗಿರುವುದು. ಅಲ್ಲಾಹನು ಆ ಸಮಯವನ್ನು ಬೇಗನೆ ತರಲಿ. ನಾವು ನೋಡಿದ ಪ್ರಕಾಶವನ್ನು ನಮ್ಮ ದಾರಿ ತಪ್ಪಿದ ಸಹೋದರರು ನೋಡುವಂತೆ ಅಲ್ಲಾಹನು ಮಾಡಲಿ. ನಾವು ರುಚಿಸಿದ ಜೀವ ಜಲವನ್ನು ಅವರು ಸಹ ರುಚಿಸುವಂತಾಗಲಿ. ಹಝ್ರತ್ ಖಾತಮುನ್ನಬಿಯ್ಯೀನ್, ಅಫ್‌ಝಲುರ್ರುಸುಲ್, ಸಯ್ಯಿದೆಉಲ್‌ದೆ ಆದಮ್ ಆಗಿರುವ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಉನ್ನತ ಪದವಿಯನ್ನು ಮತ್ತು ಅವರ ನಿಜವಾದ ಘನತೆಯನ್ನು ಅವರು ಗುರುತಿಸಿ ಇಸ್ಲಾಮಿನ ಸೇವೆಗಾಗಿ ಅವರು ನಮಗೆ ಸಹಾಯ ಮಾಡುವಂತಾಗಲಿ. ಆ ಮೂಲಕ ಇಸ್ಲಾಮ್ ಜಯಶಾಲಿಯಾಗಲಿ. ಯಾವ ಪ್ರಕಾರ ಲೋಕದ ಅಲ್ಲಾಹನು ಏಕನಾಗಿರುವನೋ ಹಾಗೆಯೇ ಅಲ್ಲಾಹನ ಗ್ರಂಥ ಏಕ ಮತ್ತು ಅವನ ಪ್ರವಾದಿ ಸಹ ಏಕ ಆಗಲಿ. ಉಳಿದವರೆಲ್ಲರೂ ಅವರ ಪತಾಕೆಯ ಕೆಳಗೆ ನಿಲ್ಲಲಿ.

"ವ ಆಖಿರು ದಅ್‌ವಾನಾ ಅನಿಲ್‌ಹಮ್ದುಲಿಲ್ಲಾಹಿ ರಬ್ಬಿಲ್ ಆಲಮೀನ್."

(ಮುಗಿಯಿತು)

I
SHALL
LOVE
ALL
MAN KIND

# ನಿಧನ ವಾರ್ತೆಗಳು

## ಜನಾಬ್ ಎ. ಕುಞ್ಞಹ್ಮದ್ ಸಾಹೇಬ್

ಮೂಲತಃ ಕುಂಬಳೆಯವರಾದ ಮಣ್ಣಾರ್‌ಕಾಡ್ ಅಹ್ಮದಿಯಾ ಜಮಾಅತಿನ ಮಾಜಿ ಅಧ್ಯಕ್ಷರಾಗಿದ್ದ ಜನಾಬ್ ಕುಞ್ಞಹ್ಮದ್ ಸಾಹೇಬ್ ದಿನಾಂಕ 01-11-2006ರಂದು ತನ್ನ 75ನೇ ವಯಸ್ಸಿನಲ್ಲಿ ಮಣ್ಣಾರ್‌ಕಾಡ್‌ನಲ್ಲಿ ನಿಧನರಾದರು. ("ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್")

ಜಮಾಅತಿನ ಚಟುವಟಿಕೆಗಳಲ್ಲಿ ಬಹಳ ಆವೇಶದಿಂದ ಭಾಗವಹಿಸುತ್ತಿದ್ದ ಅವರು ಯುಗರಶ್ಮಿಯ ಹಿತಾಕಾಂಕ್ಷಿಯೂ ಆಗಿದ್ದರು. ಅವರು ಪತ್ನಿಯನ್ನೂ ಎಂಟು ಮಕ್ಕಳನ್ನೂ ಅನೇಕ ಬಂಧು ಮಿತ್ರಾದಿಗಳನ್ನೂ ಅಗಲಿ ಹೋಗಿದ್ದಾರೆ. ಅಲ್ಲಾಹನು ಅವರಿಗೆ ಮಗ್‌ಫಿರತನ್ನೂ ಜನ್ನತನ್ನೂ ದಯಪಾಲಿಸಲಿ - ಆಮೀನ್.

## ಜನಾಬ್ ಪಿ. ಅಬ್ದುರ್ರಹೀಮ್ ಸಾಹೇಬ್

ಮಡಿಕೇರಿ ಅಹ್ಮದಿಯಾ ಜಮಾಅತಿನ ಮಾಜಿ ವೈಸ್ ಪ್ರೆಸಿಡೆಂಟರಾಗಿದ್ದ ಜನಾಬ್ ಪಿ. ಅಬ್ದುರ್ರಹೀಮ್ ಸಾಹೇಬರು ದಿನಾಂಕ 13-09-2006ರಂದು ತನ್ನ 55ನೇ ವಯಸ್ಸಿನಲ್ಲಿ ಮಡಿಕೇರಿಯಲ್ಲಿ ನಿಧನ ಹೊಂದಿದರು. ("ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್") ಅವರು ಮಡಿಕೇರಿ ಜಮಾಅತಿನಲ್ಲಿ ದೀರ್ಘಕಾಲ ಹುದ್ದೆಗಳನ್ನು ವಹಿಸಿಕೊಂಡು ಸೇವೆಸಲ್ಲಿಸಿದ್ದರು. ಮಡಿಕೇರಿಯ ಹೊಸ ಮಸ್‌ಜಿದ್ ನಿರ್ಮಾಣವಾಗುತ್ತಿರುವಾಗ ಅವರು ಜಮಾಅತ್ ಪ್ರೆಸಿಡೆಂಟರ ಜೊತೆ ನಿಸ್ವಾರ್ಥ ಸೇವೆ ಮಾಡಿದ್ದರು. ಮಡಿಕೇರಿಯಲ್ಲಿ ಅಹ್ಮದಿಯಾ ಜಮಾಅತನ್ನು 1951ರಲ್ಲಿ ಪ್ರವೇಶಿಸಿದ ದ್ವಿತೀಯ ಗುಂಪಿಗೆ ಸೇರಿದ್ದ ಜನಾಬ್ ಜಿ.ಕೆ. ಫಕ್ರುದ್ದೀನ್ ಸಾಹೇಬ್‌ರವರು ಅವರ ಪಿತರಾಗಿದ್ದರು. ಅವರು ಪತ್ನಿಯನ್ನೂ ಒಬ್ಬ ಪುತ್ರನನ್ನೂ ಇಬ್ಬರು ಪುತ್ರಿಯರನ್ನೂ ಅಗಲಿ ಹೋಗಿದ್ದಾರೆ. ಅಲ್ಲಾಹನು ಅವರಿಗೆ ಮಗ್‌ಫಿರತನ್ನೂ ಜನ್ನತನ್ನೂ ಬಂಧುಗಳಿಗೆ ಸಹನೆಯನ್ನೂ ದಯಪಾಲಿಸಲಿ - ಆಮೀನ್.

## ಜನಾಬ್ ಅಬೂಬಕರ್ ಸಿದ್ದೀಖ್ ಸಾಹೇಬ್

ಅಹ್ಮದಿಯಾ ಜಮಾಅತಿನ ಮುಅಲ್ಲಿಮರಾಗಿ ಗುಲ್ಬರ್ಗ ಜಿಲ್ಲೆಯ ತಂಬಾಕುಡಿಯಲ್ಲಿ ಸೇವೆಸಲ್ಲಿಸುತ್ತಿದ್ದ ಜನಾಬ್ ಅಬೂಬಕರ್ ಸಿದ್ದೀಖ್ ಸಾಹೇಬ್ ದಿನಾಂಕ 16-09-2006ರಂದು ತನ್ನ 50ನೇ ಮಯಸ್ಸಿನಲ್ಲಿ ನಿಧನರಾದರು. ("ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್") ಅವರು ಮೊದಲು ಮಂಗಳೂರು, ಮಂಜೇಶ್ವರ, ಮೊಗ್ರಲ್, ಪತ್ತಪಿರಿಯಂ, ಐರಾಪುರಂ, ಕಲ್ಲುಳಂ ಎಂಬೀ ಸ್ಥಳಗಳಲ್ಲಿ ಸಹ ಸೇವೆ ಸಲ್ಲಿಸಿದ್ದಾರೆ. ಅವರು ತಾಯಿಯನ್ನೂ ನಾಲ್ಕು ಮಕ್ಕಳನ್ನೂ ಅಗಲಿದ್ದಾರೆ. ಅಲ್ಲಾಹನು ಅವರಿಗೆ ಮಗ್‌ಫಿರತನ್ನೂ ಜನ್ನತನ್ನೂ ದಯಪಾಲಿಸಲಿ - ಆಮೀನ್.

## ಹಾಜಿರ ಸಾಹಿಬ

ಮಂಜೇಶ್ವರ ಅಹ್ಮದಿಯಾ ಜಮಾಅತಿನ ಪ್ರೆಸಿಡೆಂಟ್ ಜನಾಬ್ ಎಂ. ಪಿ. ಇಬ್ರಾಹೀಮ್ ಸಾಹೇಬರ ಪತ್ನಿ ಹಾಜಿರ ಸಾಹಿಬರವರು ದಿನಾಂಕ 19-03-2006ರಂದು ತನ್ನ 46ನೇ ಮಯಸ್ಸಿನಲ್ಲಿ ಮಂಜೇಶ್ವರದಲ್ಲಿ ನಿಧನ ಹೊಂದಿದರು. ("ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್") ಅವರು ಮಂಜೇಶ್ವರ ಲಜ್‌ನ ಇಮಾಇಲ್ಲಾಹ್ ಪ್ರೆಸಿಡೆಂಟರಾಗಿದ್ದರು. ಕಲ್ಲಿಕೋಟೆಯ ಜನಾಬ್ ಕೋಯ ಮೋನ್ ಸಾಹೇಬರ ಪುತ್ರಿಯಾಗಿದ್ದ ಅವರು ಪತಿಯನ್ನೂ ಐವರು ಪುತ್ರಿಯರನ್ನೂ ಇಬ್ಬರು ಪುತ್ರರನ್ನೂ ಅಗಲಿ ಹೋಗಿದ್ದಾರೆ. ಮಂಜೇಶ್ವರದ ಅಹ್ಮದಿಯಾ ಮಹಿಳಾ ಸಂಘಟನೆಗೆ ಅವರು ಮಾಡಿದ ಸೇವೆಯು ಸ್ತುತ್ಯರ್ಹವಾಗಿದೆ. ಅವರು ಹಲವು ಸಲ ಪ್ರೆಸಿಡೆಂಟ್ ಆಗಿ ಚುನಾಯಿತೆಯಾಗಿದ್ದರು. ಅಲ್ಲಾಹನು ಅವರಿಗೆ ಮಗ್‌ಫಿರತನ್ನೂ ಜನ್ನತನ್ನೂ ಸಂಬಂಧಿಕರಿಗೆ ಸಹನೆಯನ್ನೂ ದಯಪಾಲಿಸಲಿ - ಆಮೀನ್.

## ಖದೀಜ ಸಾಹೀಬ

ಮಡಿಕೇರಿಯ ಜನಾಬ್ ಪಿ. ರಮ್ಲಾನ್ ಸಾಹೇಬರ ಪತ್ನಿ ಖದೀಜರವರು ದಿನಾಂಕ 30-06-2006ರಂದು ತನ್ನ 75ನೇ ವಯಸ್ಸಿನಲ್ಲಿ ಮಂಜೇಶ್ವರದಲ್ಲಿ ನಿಧನ ಹೊಂದಿದರು. ("ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್") ಅವರು ಮಂಜೇಶ್ವರದ ಜನಾಬ್ ಅಹ್ಮದ್ ಕುಞ್ಞಿ ಸಾಹೇಬರ ಪುತ್ರಿಯಾಗಿದ್ದರು. ಅವರು ಇಬ್ಬರು ಪುತ್ರರನ್ನೂ ಮೂವರು ಪುತ್ರಿಯರನ್ನೂ ಅಗಲಿ ಹೋಗಿದ್ದಾರೆ. ಅಲ್ಲಾಹನು ಅವರಿಗೆ ಮಗ್‌ಫಿರತನ್ನೂ ಜನ್ನತನ್ನೂ ಸಂಬಂಧಿಕರಿಗೆ ಸಹನೆಯನ್ನೂ ದಯಪಾಲಿಸಲಿ - ಆಮೀನ್.

# ಧರ್ಮದ ನಾಮದಲ್ಲಿ ರಕ್ತಪಾತ

❖ ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್

## ಅಧ್ಯಾಯ - 3

## ಮೌದೂದಿ ಸಿದ್ಧಾಂತದ ಖಂಡನೆ

ಹಿಂದುಗಳು ಮತ್ತು ಮುಸ್ಲಿಮರು ಭಾಗವಹಿಸಿದ ಖಿಲಾಫತ್ ಚಳುವಳಿ ಉದ್ದೇಶಿತ ಲಕ್ಷ್ಯವನ್ನು ಗಳಿಸದೆ ಪರಾಜಯ ಹೊಂದಿದ ನಂತರ 1920ರ ದಶಕದ ಆದ್ಯ ಭಾಗದಲ್ಲಿ ಹಿಂದುಗಳ ಪುನರುಜ್ಜೀವನ ಚಳುವಳಿಗಳು ಆಕ್ರಮಣಕಾರಿ ರೂಪಧಾರಣೆ ಮಾಡಿದುವು. 1914ರಲ್ಲಿ ಹರಿದ್ವಾರದಲ್ಲಿ ಪಂಡಿತ್ ಮದನ ಮೋಹನ ಮಾಳವಿಯರಿಂದ (1861-1946) ಸ್ಥಾಪಿತವಾದ ಹಿಂದೂ ಮಹಾಸಭೆಯು ಆರ್ಯಾ ಸಮಾಜದಿಂದ ಪ್ರಾರಂಭಿಸಲಾದ "ಶುದ್ಧಿ" ಚಳುವಳಿಯೊಂದಿಗೆ ಕೈಜೋಡಿಸಿತು. ಪಂಜಾಬ್, ಸಂಯುಕ್ತ ಸಂಸ್ಥಾನಗಳು (ಇಂದಿನ ಉತ್ತರ ಪ್ರದೇಶ), ದಕ್ಷಿಣ ಭಾರತ ಮತ್ತು ಭಾರತದ ಮತ್ತಿತರ ಭಾಗಗಳಲ್ಲಿರುವ ಮುಸ್ಲಿಮರನ್ನು ಹಿಂದೂ ಧರ್ಮಕ್ಕೆ ಮತಾಂತರಿಸುವುದು ಈ ಶುದ್ಧಿ ಚಳುವಳಿಯ ಉದ್ದೇಶವಾಗಿತ್ತು. ಮುಸ್ಲಿಮರು ತಮ್ಮ ಮಾಲಿನ್ಯವನ್ನು ತೊಳೆದು ಶುದ್ಧರಾಗಿ ಹಿಂದುಗಳಾಗಬೇಕೆಂದು ಹಿಂದೂ ಗುಂಪುಗಳು ಬಲಾತ್ಕಾರ ಮಾಡಲು ಪ್ರಾರಂಭಿಸಿದಾಗ ಜಾತೀಯ ದಂಗೆಗಳು ತಲೆದೋರಿದುವು. 1922ರಿಂದ1926 ತನಕ ಇನ್ನೂರಕ್ಕಿಂತಲೂ ಹೆಚ್ಚು ಹಿಂದೂ-ಮುಸ್ಲಿಮ್ ದಂಗೆಗಳು ವರದಿಯಾದುವು. ಇಸ್ಲಾಮಿನ ಪ್ರವಾದಿಯವರ(ಸ) ವಿರುದ್ಧ ಭಾಷಣಗಳ ಮತ್ತು ಬರೆಹಗಳ ಮೂಲಕ ಆಕ್ರಮಣಗಳು ವ್ಯಾಪಿಸಿದುವು. ಶುದ್ಧಿಗೆ ಸಂಬಂಧಿಸಿ ಬರೆದ ಲೇಖಕರು ಧಾರ್ಮಿಕ ಭಾವನೆಗಳಿಂದ ಪ್ರಚೋದಿತರಾಗಿ ಪ್ರವಾದಿಯವರ(ಸ) ಮೇಲೆ ನಿಂದೆಗಳ ಸುರಿಮಳೆ ಸುರಿಸಿದರು, ಪಂಡಿತ್ ಕಾಳೀಚರಣ ಶರ್ಮ ಎಂಬ ಆರ್ಯಾ ಸಮಾಜದ ಒಬ್ಬ ಪ್ರಚಾರಕ ತನ್ನ ಪುಸ್ತಕದಲ್ಲಿ ಇಸ್ಲಾಮಿನ ಪ್ರವಾದಿ ಅನೈತಿಕ ಸ್ವಭಾವ ಗುಣಗಳನ್ನು ಹೊಂದಿದ್ದು ತನ್ನ ಬಗ್ಗೆ ಚರಿತ್ರೆಯು ಅಭಿಪ್ರಾಯವನ್ನು 'ತಿದ್ದಲು' ಮಾತ್ರ ಮದುವೆಯಾದುದಾಗಿದೆ ಎಂದು ಬರೆದಿದ್ದಾರೆ. "ವಿಚಿತ್ರ ಜೀವನ" ಎಂದು ಹೆಸರಿಸಲಾದ ಆ ಪುಸ್ತಕದಲ್ಲಿ ಇಸ್ಲಾಮ್ ಖಡ್ಗದ ಮೂಲಕ ಪ್ರಸಾರಗೊಂಡಿತು ಎಂದು ಒತ್ತಿ ಹೇಳಲಾಗಿತ್ತು. ಪಂಡಿತ್ ಶರ್ಮ ಪ್ರಕಾರ ಎಲ್ಲಾ ಮುಸ್ಲಿಮರು ಲೂಟಿ, ಬೆಂಕಿ ಹಚ್ಚುವುದು ಮತ್ತು ಅತ್ಯಾಚಾರ ಮಾಡುವ ಉದ್ದೇಶ ಹೊಂದಿದವರಾಗಿದ್ದಾರೆ. 1924ರಲ್ಲಿ ರಾಜ್‌ಪಾಲನೆಂಬ ಲಾಹೋರಿನ ಪುಸ್ತಕ ವ್ಯಾಪಾರಿ ರಂಗೀಲ ರಸೂಲ್ (ಭೋಗಜೀವಿ ಪ್ರವಾದಿ) ಎಂಬ ಹೆಸರಿನಲ್ಲಿ ಅನಾಮಿಕನೊಬ್ಬನಿಂದ ಬರೆಸಲಾದ ಉರ್ದು ಪುಸ್ತಕವನ್ನು ಪ್ರಕಟಿಸಿದನು, ಆ ಪುಸ್ತಕದಲ್ಲಿ ಹೀಗೆ ಬರೆಯಲಾಗಿತ್ತು: "ಎಲ್ಲಾ ಧಾರ್ಮಿಕ ನೇತಾರರು ಕೆಲವು ಸಿದ್ಧಾಂತಗಳೊಂದಿಗೆ ಮತ್ತು ಚಿಹ್ನೆಗಳೊಂದಿಗೆ ಸಂಬಂಧ ಹೊಂದಿದ್ದಾರೆ. ಉದಾಹರಣೆಗೆ ಆರ್ಯಾ ಸಮಾಜದ ಸ್ಥಾಪಕರಾದ ಸ್ವಾಮಿ ದಯಾನಂದರು ಬ್ರಹ್ಮಚರ್ಯವನ್ನು ವೈಭವೀಕರಿಸಿದ್ದಾರೆ ಮತ್ತು ತನ್ನ ಸುಧಾರಣೆಗಳನ್ನು ವೇದಗಳಿಗೆ ನಿಕಟ ಸಂಬಂಧವಿರುವಂತೆ ರೂಪಿಸಿದ್ದಾರೆ. ಇಸ್ಲಾಮಿನ ಪ್ರವಾದಿಯ ಜೀವಿತ ಮತ್ತು ಅವರ ಧರ್ಮ ಸ್ತ್ರೀಯರೊಂದಿಗೆ ನಿಕಟ ಸಂಬಂಧ ಹೊಂದಿತು." ರಾಜ್‌ಪಾಲನನ್ನು ಇಬ್ಬರು ಮುಸ್ಲಿಮ್ ತರುಣರು ಕೊಂದು ಹಾಕಿದರು. ಇದರ ಫಲ ಸ್ವರೂಪವಾಗಿ ಹಿಂದೂ ಮುಸ್ಲಿಮ್ ದಂಗೆಗಳು ಪ್ರಾರಂಭವಾದುವು. ಇನ್ನೊಬ್ಬ ಹಿಂದುವು "ವರ್ತಮಾನ"ವೆಂಬ ಪತ್ರಿಕೆಯಲ್ಲಿ "ನರಕಕ್ಕೆ ಒಂದು ಯಾತ್ರೆ" ಎಂಬ ಶೀರ್ಷಿಕೆಯಲ್ಲಿ ಬರೆದ ಲೇಖನದಲ್ಲಿ ಪ್ರವಾದಿ(ಸ) ನರಕದಲ್ಲಿ ಅನುಭವಿಸುವ ಶಿಕ್ಷೆಗಳ ಕುರಿತು ಮತ್ತು ಅವರ 'ಪಾಪ'ಗಳ ಕುರಿತು ವಿವರಿಸಲಾಗಿತ್ತು.

ಅವಿಭಜಿತ ಭಾರತದ ಅಹ್ಮದಿ ಮುಸ್ಲಿಮರು ಶುದ್ಧಿ ಚಳುವಳಿ ವಿರುದ್ಧ ತಕ್ಕುದಾದ ರೀತಿಯಲ್ಲಿ ಪ್ರತಿಕ್ರಿಯೆ ನೀಡಿ ಆ ಚಳುವಳಿಯನ್ನು ನಿಷ್ಕ್ರಿಯಗೊಳಿಸಿದರು. ಅಹ್ಮದಿಯಾ ಜಮಾಅತಿನ ಅಂದಿನ ಖಲೀಫರಾಗಿದ್ದ ಮಿರ್ಝಾ ಬಶೀರುದ್ದೀನ್ ಮಹ್‌ಮೂದ್ ಅಹ್ಮದ್‌ರವರು(ರ) ಸಕಾರಾತ್ಮಕವಾದ ಒಂದು ಹೆಜ್ಜೆಯನ್ನು ಇರಿಸಿದರು. ಸರ್ವಧರ್ಮಗಳ ಸಮ್ಮೇಳನಗಳನ್ನು ಜರುಗಿಸಬೇಕೆಂದೂ ಅಲ್ಲಿ ಎಲ್ಲಾ ಧರ್ಮಗಳ ನೇತಾರರು ಒಟ್ಟಿಗೆ ಸೇರಿ ತಂತಮ್ಮ ಧರ್ಮಗಳ ತತ್ವಗಳನ್ನು ವಿವರಿಸಿ ಅಜ್ಞಾನ ಮತ್ತು ದ್ವೇಷದ ಗೋಡೆಗಳನ್ನು ಕೆಡವಿ ಹಾಕಬೇಕೆಂದೂ ಅವರು ನಿರ್ಧರಿಸಿದರು. ಅವರು ಈ ಬಗ್ಗೆ ಒಂದು ವಾರ್ಷಿಕ ಸಮ್ಮೇಳನದ ಏರ್ಪಾಡು ಮಾಡಿದರು. ಯೌಮೆ ಪೇಶ್‌ವಾಯಾನೆ ಮಝಾಹಿಬ್ (ಧರ್ಮಗಳ ಸ್ಥಾಪಕರ ದಿನಾಚರಣೆ) ಎಂದು ಅದನ್ನು ಕರೆಯಲಾಯಿತು. ಆ ದಿನ ಶ್ರೀ ಕೃಷ್ಣ ಅಥವಾ ಶ್ರೀ ಬುದ್ಧರ ಘನತೆಯ ಕುರಿತು ಒಬ್ಬ ಮುಸ್ಲಿಮ್ ಭಾಷಣ ಮಾಡುವರು. ಒಬ್ಬ ಹಿಂದುವು ಮುಹಮ್ಮದ್ ಪೈಗಂಬರರ ಕುರಿತು ಭಾಷಣ ಮಾಡುವರು. ಅವರ ವಿರುದ್ಧ ಅಪಪ್ರಚಾರಕರಿಂದ ಹರಡಲಾದ ತಪ್ಪು ಅಭಿಪ್ರಾಯಗಳನ್ನು ಸರಿಪಡಿಸಿ ಹೇಳುವರು ಎಂದು ತೀರ್ಮಾನಿಸಲಾಯಿತು.

ದ್ವೇಷ ಮತ್ತು ಸುಳ್ಳು ಪ್ರಚಾರದ ಆ ದಿನಗಳಲ್ಲಿ ಅಹ್ಮದಿಯರ ನಿಲುವು, ಮುಸ್ಲಿಮೇತರರಿಗೆ ಇಸ್ಲಾಮಿನ ಕುರಿತು ಸರಿಯಾದ ತಿಳುವಳಿಕೆ ನೀಡಬೇಕು ಮತ್ತು ಇಸ್ಲಾಮಿನ ಪ್ರವಾದಿ(ಸ) ಲೋಕಕ್ಕೆ ನೀಡಿದ ಪ್ರೀತಿ ಮತ್ತು ಶಾಂತಿಯ ಸಂದೇಶವನ್ನು ಜನರಿಗೆ ತಲುಪಿಸಬೇಕು ಎಂದಾಗಿತ್ತು. ದೋಷಾರೋಪದ ಮತ್ತು ಖಂಡನಾತ್ಮಕ ಭಾಷಣಗಳು ಒಬ್ಬ ಮತ ಪ್ರಚಾರಕನಿಗೆ ತನ್ನ ವಿಶ್ವಾಸವನ್ನು ಪ್ರಚಾರ ಮಾಡಲು ಸಹಾಯ ಮಾಡುವುದಿಲ್ಲ. ಅದಕ್ಕೆ ಬದಲಾಗಿ ಅವನು ತನ್ನ ಧರ್ಮದ ಉತ್ತಮ ಮೌಲ್ಯಗಳ ಕುರಿತು ಒತ್ತಿ ಹೇಳಬೇಕು. ಅಹ್ಮದಿಯಾ ಜಮಾಅತಿನ ಅಂದಿನ ಖಲೀಫರಾಗಿದ್ದ ಮಿರ್ಝಾ ಬಶೀರುದ್ದೀನ್ ಮಹ್‌ಮೂದ್ ಅಹ್ಮದ್‌ರವರು(ರ) ಭಾರತ ಸರಕಾರವನ್ನು ಧಾರ್ಮಿಕ ನೇತಾರರ ಗೌರವವನ್ನು

ಕಾಪಾಡಲು ಕಾನೂನನ್ನು ರೂಪಿಸಲು ಪ್ರೇರೇಪಿಸಿದರು. ಪಂಜಾಬ್ ಗವರ್ನರ್‌ರಾಗಿದ್ದ ವಿಲಿಯಮ್ ಹೈಲಿಯವರು ಈ ಬಗ್ಗೆ ತನಗೆ ಖಲೀಫರವರಿಂದ ದೊರೆತ ಮನವಿಯ ಪ್ರಕಾರ ಕೇಂದ್ರ ಸರಕಾರಕ್ಕೆ ಸಲಹೆ ನೀಡಿದರು. ಧಾರ್ಮಿಕ ಭಾವನೆಗಳಿಗೆ ತೀವ್ರ ಆಘಾತ ಉಂಟು ಮಾಡುವ ಸಾಹಿತ್ಯಗಳನ್ನು ನಿಷಿದ್ಧಗೊಳಿಸಲು ಅವರು ಸೂಚಿಸಿದರು. ಕೇಂದ್ರ ಸರಕಾರ ಅವರ ಸಲಹೆಯನ್ನು ಅಂಗೀಕರಿಸಿತು. ಇಂಡಿಯನ್ ಪೀನಲ್ ಕೋಡಿಗೆ 295A ಎಂಬ ಕಲಮು ಸೇರಿಸಲ್ಪಟ್ಟಿತು. ಯಾವುದೇ ಧಾರ್ಮಿಕ ಗುಂಪಿನ ನಂಬಿಕೆಗಳಿಗೆ ನೋವನ್ನುಂಟುಮಾಡುವ ರೀತಿಯಲ್ಲಿ ಅಪಮಾನಕರವಾಗಿ ವರ್ತಿಸುವುದು ಅಪರಾಧವೆಂದು ಅದರಲ್ಲಿ ಘೋಷಿಸಲಾಯಿತು. 1927ರಲ್ಲಿ ಈ ಕಾನೂನನ್ನು ಕೇಂದ್ರ ಶಾಸನ ಸಭೆ ಅಂಗೀಕರಿಸಿತು.

ಆ ಕಾಲದಲ್ಲಿ ಭಾರತದ ಮುಸ್ಲಿಮರು ಬಹಳ ಕೋಪಾವಿಷ್ಟರಾಗಿದ್ದರು. ಸುಂದರ ಲಿಪಿಗಾರನಾಗಿದ್ದ ಅಬ್ದುಲ್ ರಶೀದ್ ಎಂಬವನು ಪ್ರವಾದಿಯವರ(ಸ) ವಿರುದ್ಧ ದ್ವೇಷಾಸೂಯೆಭರಿತವಾದ ಆಕ್ರಮಣಗಳಿಂದ ಕೆರಳಿ "ಶುದ್ಧಿ" ಚಳುವಳಿಯ ನಾಯಕರಲ್ಲೊಬ್ಬರಾದ ಸ್ವಾಮೀ ಶ್ರದ್ಧಾನಂದರನ್ನು ಕೊಂದನು. ಅವನನ್ನು ಮರಣದಂಡನೆಗೆ ಗುರಿಮಾಡಲಾಯಿತು. ದೆಹಲಿಯ ಸಾವಿರಾರು ಮುಸ್ಲಿಮರು ದೆಹಲಿಯ ಜಿಲ್ಲಾ ಜೈಲಿಗೆ ಹೋಗಿ ಮರಣದಂಡನೆಗೆ ಗುರಿಯಾದ ಆತನ ಮೃತ ದೇಹವನ್ನು ಪಡೆದು ಆತನನ್ನು ಒಬ್ಬ ಶಹೀದ್ (ಹುತಾತ್ಮ) ಎಂದು ಘೋಷಿಸಿ ದಫನ್ ಮಾಡಿದರು. ಕೊಲೆಯನ್ನು ಈ ರೀತಿ ವೈಭವೀಕರಿಸಿದುದು ಹಿಂದುಗಳನ್ನು ರೊಚ್ಚಿಗೇಳುವಂತೆ ಮಾಡಿತು. ಅವರು ಇಸ್ಲಾಮನ್ನು ಹಿಂಸಾಚಾರದ ಧರ್ಮವೆಂದೂ ಅದು ಬಲಾತ್ಕಾರ ಮತ್ತು ಜಿಹಾದನ್ನು ಪ್ರೋತ್ಸಾಹಿಸುತ್ತದೆ; ಬುದ್ಧಿಯನ್ನಾಗಲೀ ಸತ್ ಸ್ವಭಾವಗಳನ್ನಾಗಲೀ ಅದು ಅವಲಂಬಿಸುವುದಿಲ್ಲವೆಂದೂ ಆಕ್ಷೇಪಿಸಿದರು. ಈ ಆಕ್ಷೇಪಗಳಿಗೆ ಆಗ ಜಮೀಅತ್ ಉಲ್‌ಮಾಯೆ ಹಿಂದ್ ವತಿಯಿಂದ ಪ್ರಕಟಿಸಲಾಗುತ್ತಿದ್ದ "ಅಲ್ ಜಮೀಅತ್" ಎಂಬ ಪತ್ರಿಕೆಯಲ್ಲಿ ಪತ್ರಕರ್ತನಾಗಿದ್ದ ಅಬುಲ್ ಆಲಾ ಮೌದೂದಿ ಎಂಬ ಯುವಕ ಲೇಖನಗಳ ಸರಣಿಯ ಮೂಲಕ ಉತ್ತರಿಸಿದರು. ಈ ಲೇಖನಗಳನ್ನು ಅನಂತರ "ಅಲ್ ಜಿಹಾದ್ ಫಿಲ್ ಇಸ್ಲಾಮ್" ಎಂಬ ಶೀರ್ಷಿಕೆಯಲ್ಲಿ ಪುಸ್ತಕವಾಗಿ ಪ್ರಕಟಿಸಲಾಯಿತು.

ಇಸ್ಲಾಮಿನ ಪ್ರವಾದಿ(ಸ) ಮಾಡಿದ ಯುದ್ಧಗಳು ತಮ್ಮ ಜನರ ರಕ್ಷಣೆಗಾಗಿ ಮಾಡಿದ ಪ್ರತಿರೋಧಕ ಸಮರಗಳಾಗಿದ್ದುವು ಎಂದು ಮೌದೂದಿಯವರು ತಮ್ಮ ಗ್ರಂಥದ ಪ್ರಥಮ ಭಾಗದಲ್ಲಿ ಮನಸ್ಸಿಗೆ ನಾಟುವ ರೀತಿಯಲ್ಲಿ ಸಾಬೀತುಗೊಳಿಸಿದ್ದರು. ಪ್ರವಾದಿ(ಸ) ಮಾಡಿದ ಯುದ್ಧಗಳು ಆತ್ಮಸಾಕ್ಷಿಯ ಸ್ವಾತಂತ್ರ್ಯವನ್ನು ಸ್ಥಾಪಿಸಲಿಕ್ಕಾಗಿ ಮಾಡಿದವುಗಳಾಗಿದ್ದುವು ಮತ್ತು ಇಸ್ಲಾಮ್ ಧರ್ಮದ ಶಾಂತಿಯುತ ಪ್ರಚಾರವನ್ನು ದಮನಿಸಲು ಪ್ರಯತ್ನಿಸಿದವರನ್ನು ಅವರು ವಿರೋಧಿಸಿದ್ದರು ಎಂದು ಪ್ರತಿಪಾದಿಸಲಾಗಿತ್ತು.

ಇಸ್ಲಾಮ್ ಧರ್ಮವು ಆತ್ಮಸಾಕ್ಷಿಯ ಸ್ವಾತಂತ್ರ್ಯವನ್ನು ನಿಶ್ಚಯವಾಗಿಯೂ ಸ್ಥಾಪಿಸಿದೆ ಎಂದು ತನ್ನ ಗ್ರಂಥದ ಓದುಗರಿಗೆ ಮನವರಿಕೆ ಮಾಡಿಕೊಟ್ಟ ನಂತರ ಮೌಲಾನ ಸಾಹೇಬರು ತನ್ನ ವಾದದ ಕುರಿತು ಸ್ವತಃ ಸಂಶಯ ಹೊಂದಿರುವುದನ್ನು ಸೂಚಿಸುವ ರೀತಿಯಲ್ಲಿ ಈ ಕೆಳಗಿನ ಅನುಬಂಧವನ್ನು ಸೇರಿಸಿದರು:

"ಆತ್ಮ ಸಾಕ್ಷಿಯ ಸ್ವಾತಂತ್ರ್ಯವು ವಿಶ್ವಾಸ ಮತ್ತು ಧರ್ಮಕ್ಕೆ ಮಾತ್ರ ಸೀಮಿತವಾಗಿದೆ. ಅದರ ಅರ್ಥ ಮನುಷ್ಯರಿಗೆ ಪಾಪ ಮಾಡುವ ಸ್ವಾತಂತ್ರ್ಯ ಇದೆ ಎಂದಲ್ಲ. ಧರ್ಮವನ್ನು ಪರಿವರ್ತನೆ ಮಾಡಲು ಬಲ ಪ್ರಯೋಗವನ್ನು ಇಸ್ಲಾಮ್ ಅನುಮತಿಸುವುದಿಲ್ಲ. ಆದರೆ ಕೆಟ್ಟ ಕೆಲಸ ಮಾಡುವುದನ್ನು ತಡೆಯಲು ಬಲವನ್ನು ಪ್ರಯೋಗಿಸಬಹುದು. ವಾಸ್ತವಿಕವಾಗಿ ಅದರ ವಿರುದ್ಧ ಬಲವನ್ನು ಪ್ರಯೋಗಿಸಲೇಬೇಕು. ಮುಸ್ಲಿಮೇತರ ದೇಶಗಳು ಮತ್ತು ಸಂಸ್ಕೃತಿಗಳು ಅನೈತಿಕ ಕೃತ್ಯಗಳನ್ನು ಮಾಡಲು ಮುಸ್ಲಿಮರು ಬಿಡಬಾರದು. ಈ ದೇಶಗಳನ್ನು ಪಾಪ ಕೃತ್ಯಗಳಿಂದ ವಿಮುಕ್ತವನ್ನಾಗಿ ಮಾಡಲು ಪ್ರಯೋಗಿಸುವ ಬಲವನ್ನು ಇಸ್ಲಾಮ್ ಧರ್ಮಕ್ಕೆ ಪರಿವರ್ತನೆ ಮಾಡಲು ಪ್ರಯೋಗಿಸುವ ಬಲದಿಂದ ಸ್ಪಷ್ಟವಾಗಿ ಬೇರೆಯಾಗಿ ಕಾಣಬೇಕು."

ಮೌಲಾನ ಮೌದೂದಿ ತನ್ನ ವಾದವನ್ನು ಸಾಬೀತುಗೊಳಿಸಲು ಪವಿತ್ರ ಖುರ್‌ಆನ್ ಮತ್ತು ಪೈಗಂಬರ್ ವಚನಗಳನ್ನು ಕುಟಿಲ ರೀತಿಯಲ್ಲಿ ವ್ಯಾಖ್ಯಾನಿಸಲು ತೊಡಗಿದರು. ಅವರು ಬಲಪ್ರಯೋಗವನ್ನು ಕೈಗೊಳ್ಳುವುದರ ಬಗ್ಗೆ ಸ್ವಲ್ಪ ಆಳವಾಗಿ ಪ್ರತಿಪಾದಿಸುತ್ತಾ ಪವಿತ್ರ ಖುರ್‌ಆನ್ ಅಧ್ಯಾಯ 9 ವಚನ 29ಕ್ಕೆ ಅದು ಅವತೀರ್ಣವಾದ ಸಂದರ್ಭವನ್ನು ಕಡೆಗಣಿಸಿ ತನಗೆ ಇಷ್ಟವಿರುವ ಅರ್ಥವನ್ನು ಹೀಗೆ ಸೂಚಿಸುತ್ತಾರೆ:

"'ಅವರು ಜಿಝಿಯಾ ಕೊಡುವ ತನಕ' ಎಂಬ ಶಬ್ದಗಳು ಯುದ್ಧದ ಉದ್ದೇಶವನ್ನು ಸ್ಪಷ್ಟಗೊಳಿಸುತ್ತದೆ (ಎಂದರೆ ಪಾಪದಿಂದ ತಡೆಯುವುದು). ಪವಿತ್ರ ಖುರ್‌ಆನಿನ ಈ ವಚನದಲ್ಲಿ 'ಅವರು ಇಸ್ಲಾಮ್ ಧರ್ಮವನ್ನು ಅಂಗೀಕರಿಸುವ ತನಕ' ಎಂದೇನಾದರೂ ಹೇಳಿರುತ್ತಿದ್ದರೆ ಧರ್ಮ ಪ್ರಚಾರಕ್ಕಾಗಿ ಬಲಪ್ರಯೋಗವನ್ನು ಇಸ್ಲಾಮ್ ಅನುಮತಿಸುತ್ತದೆ ಎಂದು ಹೇಳಬಹುದಾಗಿತ್ತು. ಆದರೆ 'ಅವರು ಜಿಝಿಯಾ ಕೊಡುವ ತನಕ' ಎಂಬ ಶಬ್ದಗಳು ಸ್ಪಷ್ಟವಾಗಿವೆ. ಅವರು ಜಿಝಿಯಾ ಕೊಡಲು ಸಮ್ಮತಿಸುವುದು ಯುದ್ಧವನ್ನು ಕೊನೆಗೊಳಿಸುತ್ತದೆ. ಅನಂತರ ಅವರ ಜೀವ ಮತ್ತು ಸ್ವತ್ತಿನ ಮೇಲೆ ಯಾವುದೇ ಆಕ್ರಮಣವನ್ನು ಅವರು ಇಸ್ಲಾಮ್ ಧರ್ಮವನ್ನು ಸ್ವೀಕರಿಸಿದರೂ ಸ್ವೀಕರಿಸದಿದ್ದರೂ ಮಾಡಲಾಗದು." (ಅಲ್‌ಜಿಹಾದ್ ಫಿಲ್‌ಇಸ್ಲಾಂ ಪುಟ 93)

ಇಸ್ಲಾಮ್ ಸಂಪೂರ್ಣವಾಗಿ ಆತ್ಮಸಾಕ್ಷಿಯ ಸ್ವಾತಂತ್ರ್ಯವನ್ನು ನೀಡುತ್ತದೆ ಮತ್ತು ಪ್ರವಾದಿ(ಸ) ಯುದ್ಧ ಹೂಡಿದುದು ಶತ್ರುಗಳು ಆ ಸ್ವಾತಂತ್ರ್ಯವನ್ನು ದಮನಿಸಲು ಪ್ರಯತ್ನಿಸಿದುದನ್ನು ತಡೆಯಲಿಕ್ಕಾಗಿತ್ತು ಎಂದು ಸಾಬೀತುಪಡಿಸಲು ಮೌಲಾನ ಮೌದೂದಿ ತನ್ನ ಗ್ರಂಥದ ಆರಂಭದ ಭಾಗದಲ್ಲಿ ಪ್ರತಿಪಾದಿಸಿದ್ದರು. ಅಮುಸ್ಲಿಮರ ಎರಡು ಆರೋಪಗಳಿಗೆ ಉತ್ತರವಾಗಿ ಅವರು ಹಾಗೆ ಬರೆದಿದ್ದರು. ವಾಸ್ತವಿಕವಾಗಿ ಇಸ್ಲಾಮ್ ಎರಡು ಸಿದ್ಧಾಂತಗಳನ್ನು ಹೊಂದಿದ್ದು ಇಸ್ಲಾಮ್ ಒಳಿತು ಮಾಡಲು ಜನರನ್ನು ಬಲವಂತ ಪಡಿಸುವುದು ಮತ್ತು ಕೆಡುಕಿನಿಂದ ಬಲವಂತವಾಗಿ ತಡೆಯುವುದು. ಇದಾಗಿತ್ತು ಆರೋಪಣೆ. ಒಳಿತು ಮಾಡಲು ಬಲಪ್ರಯೋಗಿಸುವುದು ಆತ್ಮ ಸಾಕ್ಷಿಯ ಸ್ವಾತಂತ್ರ್ಯಕ್ಕೆ ವಿರುದ್ಧವಾಗಿದೆ. ಆದುದರಿಂದ ಇಸ್ಲಾಮ್ ಹಾಗೆ ಮಾಡುವುದಿಲ್ಲ. ಆದರೆ ಅಮುಸ್ಲಿಮರು ಜಿಝಿಯಾ ಕೊಡಲು ಒಪ್ಪಿದರೆ ಮುಸ್ಲಿಮರು ಯುದ್ಧ ನಿಲ್ಲಿಸಬೇಕು ಎಂದು ಖುರ್‌ಆನಿನ ಉದ್ಧರಣೆ ಕೊಟ್ಟು ಬರೆದುದನ್ನು ಮೌಲಾನ ಇಲ್ಲಿ ಬೇಕೆಂದೇ ಮರೆತು ಬಿಡುತ್ತಾರೆ. ಕೆಡುಕನ್ನು ತಡೆಯಬೇಕೆಂಬ ಉದ್ದೇಶದಿಂದ ಮಾತ್ರ ಆರಂಭಿಸಿದ ಯುದ್ಧದಲ್ಲಿ ಶತ್ರು

ಕೆಡುಕು ಮಾಡುವುದಿಲ್ಲ ಎಂಬ ವಾಗ್ದಾನ ನೀಡದೆ 'ಜಿಝಿಯಾ' ನೀಡಲು ಮಾತ್ರ ಒಪ್ಪಿದರೆ ಹೇಗೆ ತಾನೆ ಜಯಗಳಿಸುವುದು? ಇಲ್ಲಿ ಮೌಲಾನರ ಉದ್ದೇಶ ಒಂದು ತಲೆಗಂದಾಯ ವಿಧಿಸುವುದಾಗಿದೆ. ಅದನ್ನು ವಸೂಲು ಮಾಡುವ ಒಪ್ಪಂದವನ್ನು ಅಂಗೀಕರಿಸಿದರೆ ಮತ್ತೆ ಇಸ್ಲಾಮಿನ ಎರಡನೇ ಸಿದ್ಧಾಂತವಾದ ಕೆಡುಕನ್ನು ನಿವಾರಿಸುವ ವಿಚಾರವನ್ನು ಅನುಕೂಲಕ್ಕಾಗಿ ಮರೆತು ಬಿಡಲಾಗುತ್ತದೆ. ಈ ತರ್ಕ ಶಾಸ್ತ್ರದ ಕೊನೆಯ ಭಾಗ ಮೌಲಾನ ಮೌದೂದಿಯ ಗ್ರಂಥರಚನೆಯ ಉದ್ದೇಶವನ್ನೇ ನಿಷ್ಫಲಗೊಳಿಸುತ್ತದೆ. ಅವರು ಹೇಳುತ್ತಾರೆ:

"ಉಪದೇಶ ಮತ್ತು ಪ್ರವಚನಗಳು ನಿಷ್ಪ್ರಯೋಜಕವಾದಾಗ ಪ್ರವಾದಿ(ಸ) ಕೈಯಲ್ಲಿ ಖಡ್ಗ ಎತ್ತಿಕೊಂಡರು... ಆಗ ಹೃದಯಗಳಿಂದ ಕ್ರಮೇಣ ಕೆಡುಕು ಮತ್ತು ಉದ್ಧಟತನದ ತುಕ್ಕು ನೀಗಲು ತೊಡಗಿತು. ಅವರ ಪ್ರಕೃತಿಯಿಂದ ಹಾನಿಕಾರಕ ಅಂಶಗಳು ತನ್ನಿಂತಾನೇ ಹೊರಟುಹೋದುವು. ಆತ್ಮಗಳ ಕಶ್ಮಲಗಳು ದೂರ ಸರಿದವು. ಇಷ್ಟು ಮಾತ್ರವಲ್ಲ, ಕಣ್ಣುಗಳಿಂದ ಪರದೆಗಳು ಸರಿದು ಸತ್ಯದ ಪ್ರಕಾಶವು ಸ್ಪಷ್ಟವಾಗಿ ಕಾಣಿಸಿತು. ಸತ್ಯವು ಪ್ರಕಟಗೊಂಡ ನಂತರವೂ ಅದರ ಮುಂದೆ ತಲೆಬಾಗುವುದನ್ನು ತಡೆಯುವಂತಹ ಅವರ ಕುತ್ತಿಗೆಗಳ ಗಡಸುತನ ಮತ್ತು ಅವರ ತಲೆಯಲ್ಲಿದ್ದ ಅಹಂಕಾರ ಬಾಕಿಯುಳಿಯಲಿಲ್ಲ.

"ಅರಬ್ ದೇಶದ ಹಾಗೆ ಬೇರೆ ದೇಶಗಳು ಸಹ ಇಸ್ಲಾಮ್ ಧರ್ಮವನ್ನು ಎಷ್ಟು ಬೇಗನೆ ಸ್ವೀಕರಿಸಿದವು ಎಂದರೆ ಒಂದು ನೂರು ವರ್ಷಗಳೊಳಗೆ ಲೋಕದ ನಾಲ್ಕನೆಯ ಒಂದು ಭಾಗ ಮುಸಲ್ಮಾನರದಾಯಿತು. ಅದಕ್ಕೆ ಕಾರಣವೇನೆಂದರೆ, ಹೃದಯಗಳ ಮೇಲೆ ಆವರಿಸಿದ್ದ ಪರದೆಗಳನ್ನು ಇಸ್ಲಾಮಿನ ಖಡ್ಗ ಹರಿದು ಹಾಕಿತು." (ಅಲ್ ಜಿಹಾದ್ ಫಿಲ್ ಇಸ್ಲಾಮ್ ಪುಟ 137-138)

ಇಸ್ಲಾಮ್ ಆತ್ಮಸಾಕ್ಷಿಯ ಸ್ವಾತಂತ್ರ್ಯವನ್ನು ಸ್ಥಾಪಿಸುತ್ತದೆ ಎಂದು ಮೌಲಾನ ಮೌದೂದಿ ಪೀಠಿಕಾ ರೂಪದಲ್ಲಿ ಹೇಳಿದುದನ್ನು ಮೇಲೆ ಬರೆದ ಅವರ ಹೇಳಿಕೆಯು ತಳ್ಳಿಹಾಕುತ್ತದೆ. ಅವರ ಹೇಳಿಕೆಯು ಇಸ್ಲಾಮಿನ ಚೈತನ್ಯಕ್ಕೆ ವಿರುದ್ಧವಾಗಿದೆ. ಒಂದು ತಪ್ಪು ಇನ್ನೊಂದು ತಪ್ಪಿಗೆ ಕೊಂಡೊಯ್ಯುತ್ತದೆ. ಕೊನೆಗೆ 137 ಪುಟಗಳ ವಿತಂಡ ವಾದದ ನಂತರ ಮೌಲಾನ ಮೌದೂದಿ ಹೀಗೆ ಘೋಷಿಸುತ್ತಾರೆ.

"ಇಸ್ಲಾಮ್ ಖಡ್ಗಬಲವನ್ನು ಪ್ರಯೋಗಿಸಿ ಜನರನ್ನು ಮುಸ್ಲಿಮರನ್ನಾಗಿ ಮಾಡುತ್ತದೆ ಎಂದು ಹೇಳುವುದು ತಪ್ಪಾಗಿರುವ ಹಾಗೆಯೇ ಇಸ್ಲಾಮಿನ ಪ್ರಚಾರದಲ್ಲಿ ಖಡ್ಗಕ್ಕೆ ಯಾವುದೇ ಪಾತ್ರವಿರಲಿಲ್ಲ ಒಂದು ಹೇಳುವುದು ಸಹ ತಪ್ಪಾಗಿದೆ." (ಅಲ್‌ಜಿಹಾದ್ ಫಿಲ್ ಇಸ್ಲಾಮ್ ಪುಟ 138)

ತನ್ನ ಗ್ರಂಥವನ್ನು ಬರೆಯಲು ಪ್ರಾರಂಭಿಸಿದುದು ಪ್ರವಾದಿ(ಸ) ಮಾಡಿದ ಯುದ್ಧಗಳು ಆತ್ಮ ರಕ್ಷಣೆಗಾಗಿತ್ತು ಎಂಬುದನ್ನು ಸಾಬೀತುಪಡಿಸಲಿಕ್ಕಾಗಿ ಎಂದು ಮೌಲಾನ ಮೌದೂದಿ ಘೋಷಿಸಿದ್ದರು. ಪ್ರವಾದಿ(ಸ) ಆತ್ಮ ಸಾಕ್ಷಿಯ ರಕ್ಷಣೆಗಾಗಿ ಹೋರಾಡಿದರು ಎಂದು ಗ್ರಂಥದ ಮೊದಲ ಭಾಗದಲ್ಲಿ ಬರೆದ ಮೌಲಾನ ಮೌದೂದಿ ತನ್ನ ಗ್ರಂಥವನ್ನು ಮುಕ್ತಾಯಗೊಳಿಸಿದುದು ಇಸ್ಲಾಮಿನ ಶತ್ರುಗಳೊಂದಿಗೆ ಕೈ ಜೋಡಿಸಿಕೊಂಡಾಗಿತ್ತು. ಹಾಗೆ ಮಾಡಿದುದರಿಂದ ಪೌರಸ್ತ್ಯ ಸಂಸ್ಕೃತಿ ವಿದ್ವಾಂಸರು (Orientalists) ಇಸ್ಲಾಮಿನ ವಿರುದ್ಧ ಆಕ್ರಮಣ ಮಾಡುವ ಬಾಗಿಲುಗಳನ್ನು ಅವರು ತೆರೆದಿರಿಸಿರುವರು. ಪಾಶ್ಚಿಮಾತ್ಯ ರೀತಿಯ ವಿದ್ಯಾಭ್ಯಾಸಗಳಿಸಿದ ಒಂದು ಚಿಕ್ಕ ಗುಂಪಿನ ವಾಚಾಳಿಗಳಾದ ಮುಸ್ಲಿಮರಲ್ಲಿ ಗೌರವವನ್ನು ಮೌಲಾನ ಮೌದೂದಿ ಪಡೆದಿರುವುದು ಓರಿಯೆಂಟಲಿಸ್ಟರಿಗೆ ಸಹಾಯಕವಾಗಿದೆ. ಅವರು ತಮ್ಮ ಜಿಹಾದ್ ವಿರೋಧಿ ವಾದಗಳಿಗೆ ಮೌಲಾನರವರ ಹಿರಿದ ಖಡ್ಗವನ್ನು ಬೀಸಿ " ಖಡ್ಗವು ಇಸ್ಲಾಮಿನ ಪ್ರಚಾರದಲ್ಲಿ ಪಾತ್ರ ವಹಿಸಿದೆ " ಎಂದು ಸಾಕ್ಷ್ಯಾಧಾರ ನೀಡುತ್ತಾರೆ.

ಪ್ರವಾದಿ(ಸ) ಮಕ್ಕದಿಂದ ಮದೀನಕ್ಕೆ ವಲಸೆಹೋದ ಸಂಭವ (ಹಿಜ್ರ) ಕಳೆದು ಎರಡು ವರ್ಷಗಳು ದಾಟಿ ಹೋಗುವುದಕ್ಕೆ ಮುಂಚಿತವಾಗಿಯೇ ಒಂದು ಸಾವಿರ ಸಂಖ್ಯೆಯ ಮಕ್ಕದ ಶತ್ರುಗಳು ಇಸ್ಲಾಮನ್ನು, ಅದರ ಪ್ರವಾದಿಯವರನ್ನು(ಸ) ಮತ್ತು ಅವರ ಶಿಷ್ಯರನ್ನು ನಾಶ ಮಾಡಬೇಕೆಂಬ ದೃಢ ನಿರ್ಧಾರದಿಂದ ಮದೀನದ ಕಡೆಗೆ ದಂಡೆತ್ತಿ ಬಂದುದರಿಂದ ಅವರನ್ನು ಪ್ರವಾದಿ(ಸ) ಮತ್ತು ಶಿಷ್ಯರು ಎದುರಿಸಬೇಕಾಯಿತು. 623ರ ಮಾರ್ಚ್ ದಿನಾಂಕ 17, (ರಮದಾನ್ ದಿನಾಂಕ 17, ಹಿಜರಿ ವರ್ಷ2) ಶುಕ್ರವಾರ ನಸುಕಿನ ಸಮಯದಲ್ಲಿ ಮಕ್ಕದ 700 ಒಂಟೆಗಳನ್ನೇರಿದ ಸೈನಿಕರು ಮತ್ತು 100 ಕುದುರೆ ಸವಾರರಾದ ಸೈನಿಕರು ಅಖಿನ್‌ಖಿಲ್ ಇಳಿಜಾರಿನಿಂದ ಬದ್ರ್ ಕಣಿವೆಗೆ ಇಳಿಯ ತೊಡಗಿದರು. ಆ ಸ್ಥಳ ಮದೀನದಿಂದ ಇಪ್ಪತ್ತು ಮೈಲು ದೂರದಲ್ಲಿತ್ತು. ಮಕ್ಕದವರನ್ನು ಎದುರಿಸಲು ಬರೇ 313 ಮುಸ್ಲಿಮರು ಸಿದ್ಧರಾದರು. ಅವರಲ್ಲಿ ಬರೇ ಎರಡು ಕುದುರೆಗಳಿದ್ದುವು. ಅವರಲ್ಲಿ ಆಯುಧಗಳ ಕೊರತೆ ಎಷ್ಟಿತೆಂದರೆ ಉಕ್ಕಾಶರವರ ಖಡ್ಗವು ಯುದ್ಧದಲ್ಲಿ ತುಂಡಾದಾಗ ಅದಕ್ಕೆ ಬದಲಿಯಾಗಿ ಅವರಿಗೆ ಮರದ ದೊಣ್ಣೆಯೊಂದನ್ನು ಮಾತ್ರ ಕೊಡಲು ಪ್ರವಾದಿಯವರಿಗೆ(ಸ) ಸಾಧ್ಯವಾಯಿತು. ಆ ದೊಣ್ಣೆಯನ್ನೇ ಉಕ್ಕಾಶರವರು ಬಳಸಿದರು. ಪ್ರವಾದಿ(ಸ) ಮತ್ತು ಸಂಗಡಿಗರ ಸ್ಥಿತಿ ಎಷ್ಟು ಗಾಬರಿದಾಯಕವಾಗಿತ್ತೆಂದರೆ ಪ್ರವಾದಿ(ಸ) ಅಲ್ಲಾಹನಿಗೆ ಹೀಗೆ ಮೊರೆಯಿಟ್ಟರು: **"ಮುಸ್ಲಿಮರ ಈ ಚಿಕ್ಕ ಗುಂಪು ಇಂದು ನಾಶಗೊಳಿಸಲ್ಪಟ್ಟರೆ ನಿನ್ನನ್ನು ಆರಾಧಿಸಲು ಬಾಕಿಯಾಗಿ ಯಾರೂ ಉಳಿದಿರಲಾರರು."**

ಮೋಂಟ್‌ಗೊಮರಿ ವಾಟ್ಟ್ ಸೂಚಿಸಿದ ಪ್ರಕಾರ "ಅಬೂ ಜಹಲನು ಮುಹಮ್ಮದರ ಸರ್ವನಾಶವನ್ನು ಒಮ್ಮೆಯೇ ಮಾಡಿ ಮುಗಿಸಲು ಪ್ರಾಯಶಃ ಆಶಿಸಿದ್ದನು."(1) ವಿಲ್ ಡ್ಯುರಾಂಟ್, ವಾಟ್ಟ್‌ರವರ ಅಭಿಪ್ರಾಯವನ್ನು ಅನುಮೋದಿಸಿ ಹೀಗೆ ಹೇಳುತ್ತಾರೆ: "ಮುಹಮ್ಮದರು ಅಲ್ಲಿ ಸೋತು ಹೋಗುತ್ತಿದ್ದರೆ ಅವರ ಸಕಲ ಚಟುವಟಿಕೆಗಳ ಅಂತ್ಯ ಅಲ್ಲೇ ಆಗಿ ಬಿಡುತ್ತಿತ್ತು." (2)

ಆದರೆ ಅಬೂ ಜಹಲನ ಆಶೆಗಳು ಈಡೇರಲಿಲ್ಲ. ಮಕ್ಕದ ಸುಸಜ್ಜಿತ ಮತ್ತು ಶ್ರೇಷ್ಠ ಸೈನಿಕರ ದಂಡನ್ನು ಮುಸ್ಲಿಮರು ಎದುರಿಸಿ ಅವರ ವಿರುದ್ಧ ಜಯಗಳಿಸಿದರು.

ಇಸ್ಲಾಮ್ ಧರ್ಮದ ಚರಿತ್ರೆಯು ಪ್ರವಾದಿಯವರ(ಸ) ಆ 313 ಶಿಷ್ಯರ ಹೆಸರುಗಳನ್ನು ಸಂರಕ್ಷಿಸಿದೆ. ಅವರು ಬದ್ರ್ ಕಣಿವೆಯಲ್ಲಿ ಇಸ್ಲಾಮ್ ಧರ್ಮದ ರಕ್ಷಣೆಗಾಗಿ ಹೋರಾಡಿದರು. ಈ ಮುನ್ನೂರಕ್ಕಿಂತಲೂ

---

1. W. MONTGOMERY WATT, Muhammad at Medina Page 15

2. WILL DURANT, The Story of Civilisation Vol IV The Age of Faith Page 168

ಹೆಚ್ಚಿನ ಸಂಖ್ಯೆಯ ಮುಸ್ಲಿಮರ ಇಸ್ಲಾಮ್ ಧರ್ಮ ಸ್ವೀಕಾರದಲ್ಲಿ ಖಡ್ಗ ವಹಿಸಿದ ಪಾತ್ರವೇನಾಗಿರಬಹುದೆಂದು ತಿಳಿಯುವುದು ಕುತೂಹಲಕರವಾಗಬಹುದು. ಅವರಲ್ಲಿ ಅಬೂಬಕರ್(ರ) ಉಮರ್(ರ) ಉಸ್ಮಾನ್(ರ) ಮತ್ತು ಅಲಿ(ರ) ಸೇರಿದ್ದರು. ಇವರು ಪ್ರವಾದಿಯವರ(ಸ) ನಿಧನದ ನಂತರ ಅವರ ಖಲೀಫರಾದರು. ಅವರ ಹೃದಯದಿಂದ 'ಕಿಲುಬನ್ನು' ಹೊರ ಹಾಕಿದುದು ಖಡ್ಗವಾಗಿತ್ತೆ? ಆ ಯುದ್ಧದಲ್ಲಿ ಔಫ್ ಬಿನ್ ಹಾರಿಸ್(ರ), ಉಮರ್ ಬಿನ್ ಸಾಲಿಮ್(ರ) ಮುಅವ್ವಿದ್(ರ) ಮತ್ತು ಬೇರೆ ಅನೇಕರು ಭಾಗವಹಿಸಿ ಹುತಾತ್ಮರಾದರು. ಈ ಜನರು ಹೇಗೆ ಇಸ್ಲಾಮ್ ಧರ್ಮಕ್ಕೆ ಪರಿವರ್ತನೆಗೊಂಡರು ಎಂಬುದರ ಕುರಿತು ವಿವರಗಳು ತಿಳಿಯದವುಗಳೇನೂ ಅಲ್ಲ. ಅವರ ಆತ್ಮಗಳ ಮಾಲಿನ್ಯಗಳು ಮತ್ತು ಅವರ ಹೃದಯಗಳ ಕೆಡುಕುಗಳು ಖಡ್ಗದ ಮೂಲಕ ಶುದ್ಧೀಕರಿಸಲ್ಪಟ್ಟುವು ಎಂದು ಹೇಳಲು ಯಾರಿಗಾದರೂ ಸಾಧ್ಯವಿದೆಯೇ?

ಇಸ್ಲಾಮ್ ಧರ್ಮ ಸಂರಕ್ಷಣೆಗಾಗಿ ಪರಾಕ್ರಮದಿಂದ ಹೋರಾಡಿದ ಗಣ್ಯರಾದ ಶಿಷ್ಯರು ಸಅದ್‌ಬಿನ್ ಅಬೀ ವಖ್ಖಾಸ್(ರ), ಅಬೂ ಉಬೈದ ಬಿನ್ ಅಲ್‌ಜರ್‍ರ(ರ) ಮತ್ತು ಖಾಲಿದ್ ಬಿನ್ ವಲೀದ್(ರ) ಆಗಿದ್ದರು. ಇವರಲ್ಲಿ ಯಾರನ್ನೂ ಖಡ್ಗದ ಮೂಲಕ ಬಲಾತ್ಕಾರದಿಂದ ಇಸ್ಲಾಮ್ ಧರ್ಮಾವಲಂಬಿಯಾಗಿ ಮಾಡಿರಲಿಲ್ಲ. ನೂರಾರು ಮುಹಾಜಿರ್‌ಗಳು (ಮಕ್ಕದಿಂದ ಮದೀನಕ್ಕೆ ವಲಸೆ ಹೋದವರು) ಮತ್ತು ಸಾವಿರಾರು ಅನ್‌ಸಾರ್‌ಗಳು (ಮದೀನದ ನಿವಾಸಿಗಳು) ಇಸ್ಲಾಮಿಗೆ ಧರ್ಮಾಂತರಗೊಳಿಸಲ್ಪಟ್ಟರು. ಮದೀನದ ನಿವಾಸಿಗಳು ಪ್ರವಾದಿಯವರಿಗೆ(ಸ) ಆಶ್ರಯವನ್ನು ನೀಡಿ ಅವರನ್ನು ಮಕ್ಕದ ಜನರ ಉಪದ್ರಗಳಿಂದ ರಕ್ಷಿಸಿದರು. ಈ ಎಲ್ಲಾ ಜನರ ಧರ್ಮ ಪರಿವರ್ತನೆಯಲ್ಲಿ ಖಡ್ಗವು ಯಾವುದೇ ಪಾತ್ರ ವಹಿಸಲಿಲ್ಲ. ಇಸ್ಲಾಮ್ ಧರ್ಮಕ್ಕೆ ಪರಿವರ್ತನೆಗೊಂಡ ಈ ಜನರು ಇಸ್ಲಾಮ್ ಧರ್ಮದ ಫಲಗಳೂ ಮಾನವ ವರ್ಗಕ್ಕೆ ಅಭಿಮಾನವಾಗಿರುವವರೂ ಪರಮ ಸತ್ಯದ ಮಾರ್ಗದಲ್ಲಿರುವ ಕೈಮರಗಳೂ ಆಗಿದ್ದಾರೆ. ಅವರ ಹೃದಯಗಳು ಖಡ್ಗದಿಂದ ಶುದ್ಧೀಕರಿಸಲ್ಪಟ್ಟವು ಮತ್ತು "(ಅವರ) ಧರ್ಮ ಪರಿವರ್ತನೆಯಲ್ಲಿ ಖಡ್ಗವು ಯಾವುದೇ ಪಾತ್ರವಹಿಸಿಲ್ಲ ಎಂದು ಹೇಳುವುದು ಸಹ ತಪ್ಪಾಗಿದೆ" ಎಂದು ಅವರ ಬಗ್ಗೆ ಹೇಳುವುದಕ್ಕಿಂತಲೂ ಹೆಚ್ಚು ಅಪಮಾನಕರವಾದ ಹೇಳಿಕೆ ಬೇರೆ ಏನಿದೆ?

ಇಸ್ಲಾಮ್ ಧರ್ಮದ ಆಗಮನಕ್ಕೆ ಮೊದಲು ಈ ಜನರ ಸ್ಥಿತಿ ಹೇಗಿತ್ತು? ಅಂದಿನ ಅರಬ್ ದೇಶ ಕೇವಲ ಒಂದು ರಾಜಕೀಯ ಘಟಕವಾಗಿ ಅಸ್ತಿತ್ವದಲ್ಲಿತ್ತು. ವಿಲ್.ಡ್ಯುರಾಂಟ್ ಹೀಗೆ ಹೇಳುತ್ತಾರೆ: "ಗ್ರೀಕರು ನಿಷ್ಕಾಳಜಿಯಿಂದ ಹೆಸರಿಸಿದ ಭೂಖಂಡಗಳ ಪೈಕಿ ಈ ಪ್ರದೇಶದ ಜನರನ್ನು ಸರಕೆನೋಯಿ (ಸರಾಸಿನ್ಸ್) ಎಂದು ಕರೆದರು. ಅದನ್ನು ಅರಬಿ ಪದ ಶರ್‌ಖಿಯ್ಯುನ್ (ಪೂರ್ವ ದೇಶದವರು) ಎಂಬ ಪದದಿಂದ ರಚಿಸಲಾಯಿತು." ಅದಕ್ಕೆ ಮೊದಲು ಅವರನ್ನು ಸ್ಕೀನೈಟ್ ಅರಬಿಗಳು (Scenite Arab) ಎಂದು ಕರೆಯಲಾಗಿತ್ತು. ಅದರ ಅರ್ಥ ಡೇರೆ ನಿವಾಸಿ ಅರಬಿಗಳೆಂದು. ಗ್ರೀಕ್ ಭಾಷೆಯಲ್ಲಿ ಸ್ಕೀನ್ ಅಂದರೆ ಡೇರೆ ಎಂದು ಅರ್ಥ. ಅವರು ಬಂಜರು ಪ್ರದೇಶದಲ್ಲಿ ವಾಸಿಸುತ್ತಿದ್ದರು. ಅವರ ವಿವಿಧ ಗೋತ್ರಗಳ ಮಧ್ಯೆ ಸಂಪರ್ಕಗಳ ಕೊರತೆಯಿದ್ದುದರಿಂದ ಪ್ರತಿಯೊಂದು ಗೋತ್ರವು ಸ್ವಯಂಪೂರ್ಣವಾಗಿತ್ತು. ಕ್ರಿಸ್ತಪೂರ್ವ ಎರಡು ಸಾವಿರ ವರ್ಷಗಳ ಹಿಂದೆ ಅರಬಿಗಳು ಒಂಟೆಯನ್ನು ಪಳಗಿಸಿ ತಮ್ಮ ಮರುಭೂಮಿ ಜೀವಿತಕ್ಕೆ ಆಸರೆಯನ್ನಾಗಿ ಮಾಡಿದ್ದರು. ಒಂಟೆಯ ಹಾಲನ್ನು ಅವರು ಆಹಾರವಾಗಿಯೂ ಅದರ ಮೂತ್ರವನ್ನು ರೋಗ ಚಿಕಿತ್ಸೆಗಾಗಿಯೂ ಬಳಸುತ್ತಿದ್ದರು. ಅದರ ಮಾಂಸ ಮೃದುವಾಗಿತ್ತು. ಅದರ ಕೂದಲು ಮತ್ತು ಚರ್ಮ ಗುಡಾರಗಳಿಗಾಗಿಯೂ ಉಡುಗೆಗಳಿಗಾಗಿಯೂ ಬಳಸಲಾಗುತ್ತಿತ್ತು. ಅದರ ಸೆಗಣಿಯನ್ನು ಇಂಧನವಾಗಿ ಬಳಸಲಾಗುತ್ತಿತ್ತು. ಚಳಿಗಾಲದಲ್ಲಿ ನೀರು ಕುಡಿಯದೆ ಅದು ಇಪ್ಪತ್ತೈದು ದಿನಗಳಷ್ಟು ಕಾಲ ಮತ್ತು ಬೇಸಗೆಯಲ್ಲಿ ಐದು ದಿನಗಳ ಕಾಲ ಜೀವಿಸಿರಬಹುದಾಗಿತ್ತು. ಒಂಟೆಗಳನ್ನು ಅಲೆಮಾರಿ ಜನರ ಚಿಕ್ಕ ಗುಂಪುಗಳು ಹಿಂಬಾಲಿಸುತ್ತಿದ್ದವು. ಅವು ಅವರ ಮುಖ್ಯ ಜೀವನಾಧಾರವಾಗಿದ್ದವು. ಅಲೋಯಿ ಸ್ಪೆಂಗರ್ ಇಸ್ಲಾಮ್ ಧರ್ಮಸ್ಥಾಪನೆಗೆ ಹಿಂದಿನ ಅರಬಿಗಳನ್ನು "ಒಂಟೆಗಳ ಪರೋಪಜೀವಿ" ಎಂದು ಸಂಕ್ಷಿಪ್ತವಾಗಿ ವಿವರಿಸಿರುವರು.

ವಿಲ್ ಡ್ಯುರಾಂಟ್ ಹೀಗೆ ಹೇಳುತ್ತಾರೆ:

"ತನ್ನ ಗೋತ್ರದ ಹೊರತು ಬೇರೆ ಯಾವುದಾದರೂ ಗುಂಪಿಗೆ ನಿಷ್ಠೆಯ ಆವಶ್ಯಕತೆಯನ್ನು ಅರಬಿಯು ಮನವರಿಕೆ ಮಾಡಿಕೊಂಡಿರಲಿಲ್ಲ. ಅವನ ನಿಷ್ಠೆಯ ತೀವ್ರತೆಯು ಅದರ ವಿಸ್ತಾರಕ್ಕೆ ಅನುಸಾರವಾಗಿ ಹಿಮ್ಮುಖವಾಗಿ ವ್ಯತ್ಯಾಸಗೊಳ್ಳುತ್ತಿತ್ತು. ನಾಗರಿಕ ಜನರು ತಮ್ಮ ದೇಶ, ಧರ್ಮ ಮತ್ತು ಜನಾಂಗಕ್ಕಾಗಿ ಮಾತ್ರ ಮಾಡುವ ಕೆಲಸಗಳನ್ನು ಅವರು ತಮ್ಮ ಗೋತ್ರಕ್ಕಾಗಿ ಮಾಡುತ್ತಿದ್ದರು. ಅವರು ತಮ್ಮ ಗೋತ್ರಕ್ಕಾಗಿ ಸುಳ್ಳು ಹೇಳುತ್ತಿದ್ದರು, ಕದಿಯುತ್ತಿದ್ದರು, ಕೊಲ್ಲುತ್ತಿದ್ದರು ಮತ್ತು ಸಾಯುತ್ತಿದ್ದರು." (Will Durant, The Story of Civilisation)

ಅರಬಿಗಳು ಯಾವುದೇ ಲಿಖಿತ ನಿಯಮಗಳಿಗೆ ಬದ್ಧರಾಗಿರಲಿಲ್ಲ ನಿಯಮಗಳನ್ನು ಜಾರಿಗೊಳಿಸುವ ಆಡಳಿತೆಯ ವ್ಯವಸ್ಥೆಯೂ ಅಲ್ಲಿರಲಿಲ್ಲ.

ಪುತ್ರಿಯರ ಜನನ ಕಾಲದಲ್ಲಿ ಅರಬಿಗಳು ಶೋಕಾಚರಣೆ ಮಾಡುತ್ತಿದ್ದರು ಮತ್ತು ನಾಚಿಕೆಯಿಂದ ಮುಖಗಳನ್ನು ಮರೆ ಮಾಡುತ್ತಿದ್ದರು. ಕೆಲವು ಸಲ ಪುತ್ರಿಯರನ್ನು ಹುಟ್ಟಿದ ಕೂಡಲೇ ಕೊಲ್ಲಲಾಗುತ್ತಿತ್ತು. ಹೆಣ್ಣು ಮಕ್ಕಳು ಜೀವಂತವಾಗಿ ಉಳಿದರೆ ಅವರ ಸಹಜ ರೂಪಲಾವಣ್ಯಗಳು ಅವರ ಪತಿಯ ಅಥವಾ ಪ್ರೇಮಿಯ ಪ್ರೇಮವನ್ನು ಕೆಲವರ್ಷಗಳ ಕಾಲಗಳಿಸಲು ಶಕ್ತವಾಗುತ್ತಿತ್ತು. ಅವರ ಗೌರವವನ್ನು ಕಾಪಾಡಲು ಅವರ ಪತಿ ಅಥವಾ ಪ್ರೇಮಿ ಭೂಮಿಯ ಅಂಚಿನ ತನಕ ಹೋಗಲು ಸಹ ಸಿದ್ಧರಾಗುತ್ತಿದ್ದರು. ಆದರೆ ಮಹಿಳೆಯರಿಗೆ ಕುಟುಂಬದ ಸ್ವತ್ತಿನ ಒಂದು ಭಾಗ ಎಂಬುದಕ್ಕಿಂತ ಹೆಚ್ಚಿನ ಸ್ಥಾನ ಇರಲಿಲ್ಲ. ಅವರು ತಮ್ಮ ಪಿತ ಅಥವಾ ಸುತನ ಆಸ್ತಿಯ ಭಾಗವಾಗಿದ್ದರು. ಬೇರೆ ಸೊತ್ತುಗಳೊಂದಿಗೆ ಅವರನ್ನು ಸಹ ಮೃತ್ಯು ಪತ್ರದ ಮೂಲಕ ಹಂಚಲಾಗುತ್ತಿತ್ತು. ಅವರು ತಮ್ಮ ಪಿತ, ಪತಿ ಮತ್ತು ಸಹೋದರರ ದಾಸಿಯರಾಗಿದ್ದರು ಮತ್ತು ಅಪೂರ್ವ ಸಂದರ್ಭಗಳಲ್ಲಿ ಮಾತ್ರ ಅವರ ಪ್ರೀತಿಗೆ ಪಾತ್ರರಾಗಿದ್ದರು.

ಮರಣಾನಂತರ ಜೀವಿತದ ಕುರಿತು ಅರಬಿಗಳು ಚಿಂತಿಸುತ್ತಲೇ ಇರಲಿಲ್ಲ. ಅವರು ನರಬಲಿ ಕೊಡುತ್ತಿದ್ದರು ಮತ್ತು 'ಪವಿತ್ರ' ಕಲ್ಲುಗಳನ್ನು ಆರಾಧಿಸುತ್ತಿದ್ದರು. ಕಲ್ಲುಗಳ ಪೂಜೆಯ ಕೇಂದ್ರವು ಮಕ್ಕ ಆಗಿತ್ತು. ಇಸ್ಲಾಮ್ ಧರ್ಮ ಸ್ಥಾಪನೆಯ ಮೊದಲು ಕಅ್‌ಬದ ಒಳಗೆ ವಿವಿಧ ದೇವರುಗಳನ್ನು ಪ್ರತಿನಿಧೀಕರಿಸುವ ಹಲವು ವಿಗ್ರಹಗಳಿದ್ದುವು. ಮಕ್ಕದ

ಹಿರಿಯ ದೈವ ಹುಬಲ್ ವಿಗ್ರಹ ಬೆಲೆಬಾಳುವ ಶಿಲೆಯಿಂದ ರಚಿಸಿದ್ದಾಗಿತ್ತು. ಲಾತ್, ಮನಾತ್ ಮತ್ತು ಉಝ್ಝಾ ವಿಗ್ರಹಗಳು ಹಿಜಾಝ್‌ನಲ್ಲಿ ಇದ್ದುವು ಮತ್ತು ಅವುಗಳನ್ನು ದೈವ ಪುತ್ರಿಯರೆಂದು ಗೌರವಿಸಲಾಗುತ್ತಿತ್ತು.

ಉತ್ತಮ ದೇಹ ದಾರ್ಢ್ಯವನ್ನು ಹೊಂದಿದ ಬಲಶಾಲಿ ಅರಬಿಗಳು ಕೆಲವು ಖರ್ಜೂರ ಹಣ್ಣುಗಳನ್ನು ತಿಂದು ಮತ್ತು ಒಂಟೆಯ ಹಾಲನ್ನು ಕುಡಿದು ಜೀವಿಸಬಲ್ಲವರಾಗಿದ್ದರು. ಖರ್ಜೂರದ ಮರಗಳಿಂದ ಒಂದು ಮದ್ಯವನ್ನು ಅವರು ಇಳಿಸುತ್ತಿದ್ದರು ಮತ್ತು ಆ ಮದ್ಯವು ಅವರನ್ನು ಭಾವನಾತ್ಮಕ ಕಾವ್ಯ ರಚನೆ ಮತ್ತು ಪ್ರೇಮದ ಜಗತ್ತಿಗೆ ಕೊಂಡೊಯ್ಯುತ್ತಿತ್ತು. ಪ್ರೀತಿಸುವ ಮತ್ತು ಹೋರಾಡುವ ಪ್ರಕ್ರಿಯೆಗಳು ಒಂದರ ನಂತರ ಇನ್ನೊಂದಾಗಿ ಅವರ ಜೀವಿತದಲ್ಲಿ ಪಾತ್ರ ವಹಿಸುತ್ತಿದ್ದುವು. ಆ ಅಪಮಾನ ಮತ್ತು ನೋವಿಗೆ ಕೂಡಲೇ ಪ್ರತೀಕಾರ ಮಾಡಲು ತನ್ನ ಪರವಾಗಿ ಮಾತ್ರವಲ್ಲ, ತನ್ನ ಗೋತ್ರದ ಪರವಾಗಿ ಪ್ರತಿಯೊಬ್ಬ ಅರಬಿ ಸಿದ್ಧನಾಗುತ್ತಿದ್ದನು.

ಕಣ್ಣಿಗೆ ಪ್ರತಿಯಾಗಿ ಕಣ್ಣು, ಹಲ್ಲಿಗೆ ಪ್ರತಿಯಾಗಿ ಹಲ್ಲು ಎಂಬುದೇ ನಿಯಮವಾಗಿತ್ತು. ಪ್ರತೀಕಾರ ಮಾಡಬೇಕಾದ ವ್ಯಕ್ತಿ ಪ್ರತೀಕಾರ ಮಾಡದೆ ಹಿಂದೆ ಸರಿದರೆ ಮತ್ತು ತನಗೆ ನೋವುಂಟುಮಾಡಿದವನನ್ನು ಕೊಲ್ಲದಿದ್ದರೆ ಎಂದೂ ಮುಕ್ತಾಯವಾಗದ ಹೀನೈಸುವಿಕೆಯು ಆತನನ್ನು ಹಿಂಬಾಲಿಸುತ್ತಿತ್ತು. ಅರಬಿಯ ಜೀವಿತದ ಬಹಳ ದೊಡ್ಡದಾದೊಂದು ಭಾಗ ತನ್ನ ಗೋತ್ರಕ್ಕಾಗಿ ಮಾಡಿದ ಪ್ರತೀಕಾರಕ್ಕಾಗಿ ವಿನಿಯೋಗಿಸಲ್ಪಡುತ್ತಿತ್ತು. (ಅರಬಿ ಪದ 'ಸಾರ್' ಈ ವಿಧದ ಪ್ರತೀಕಾರಕ್ಕೆ ಬಳಸಲಾಗುತ್ತಿತ್ತು.) ಇಸ್ಲಾಮಿನ ಆಗಮನದ ಹಿಂದಿನ ಕಾಲದ ಅರಬ್ ದೇಶದ ಚರಿತ್ರೆಯಲ್ಲಿ ಅರಬಿಗಳು ಪರಸ್ಪರ ಹೋರಾಡಿದ ಕಾಲವನ್ನು ಅಯ್ಯಾಮುಲ್ ಅರಬ್ (ಅರಬಿಗಳ ದಿನಗಳು) ಎಂಬ ಹೆಸರಿನಲ್ಲಿ ಕರೆಯಲಾಗುತ್ತಿದೆ. ಬೇರೆ ಬೇರೆ ದಿನಗಳು ಬೇರೆ ಬೇರೆ ಹೆಸರುಗಳಲ್ಲಿ ಕರೆಯಲ್ಪಡುತ್ತವೆ. ಉದಾಹರಣೆಗಳು: ಯೌಮುಲ್ ಬುಅತ್, ಯೌಮುಲ್ ಫಿಜಾರ್. ಗೋತ್ರಗಳ ನಡುವೆ ನಡೆದ ಹೋರಾಟಗಳು ಹೆಚ್ಚಾಗಿ ಜಾನುವಾರುಗಳು, ಭೂಮಿ ಮತ್ತು ನೀರ ಝರಿಗಳಿಗೆ ಸಂಬಂಧಿಸಿದ ವಿವಾದಗಳ ಕಾರಣದಿಂದಾಗಿತ್ತು. ಹೆಚ್ಚು ಪ್ರಸಿದ್ಧವಾದ ಹೋರಾಟಗಳಲ್ಲಿ ಒಂದು ಬನೂ ಬಕ್ರ್ ಮತ್ತು ಅವರ ಸಂಬಂಧಿಗಳೇ ಆದ ಬನೂ ತಗ್‌ಲಿಬ್‌ಗಳ ನಡುವೆ ನಡೆದ ಯುದ್ಧವಾಗಿತ್ತು. ಬನೂ ಬಕ್ರ್ ಗೋತ್ರಕ್ಕೆ ಸೇರಿದ ವೃದ್ಧೆ ಬಾಸೂಸ್ ಒಂದು ಹೆಣ್ಣು ಒಂಟೆಯನ್ನು ಸಾಕುತ್ತಿದ್ದಳು. ಬನೂ ತಗ್‌ಲಿಬ್ ಗೋತ್ರದ ಮುಖಂಡನು ಆ ಒಂಟೆಯನ್ನು ಗಾಯಗೊಳಿಸಿದ್ದನು.... ಇದರ ಫಲ ಸ್ವರೂಪವಾಗಿ ಆರಂಭವಾದ ಯುದ್ಧವು ನಲ್ವತ್ತು ವರ್ಷಗಳ ಕಾಲ ಮುಂದುವರಿಯಿತು. ಆ ಎರಡು ಗೋತ್ರಗಳು ಪರಸ್ಪರ ಹೋರಾಡಿ ಪರಸ್ಪರ ನಾಶ ನಷ್ಟಗಳನ್ನು ಉಂಟುಮಾಡಿದ ನಂತರ ಆ ಯುದ್ಧವು ಕೊನೆಗೊಂಡಿತು. ಇನ್ನೊಂದು ಯುದ್ಧವು ದಾಹಿಸ್ ಮತ್ತು ಅಲ್‌ಗಬ್ರಾ ದಿನವೆಂದು ಕರೆಯಲ್ಪಡುತ್ತದೆ. ದಾಹಿಸ್ ಎಂಬ ಗಂಡು ಕುದುರೆ ಮತ್ತು ಅಲ್‌ಗಬ್ರಾ ಎಂಬ ಹೆಣ್ಣು ಕುದುರೆಗೆ ಸಂಬಂಧಿಸಿ ನಡೆದ ರೇಸ್‌ನಲ್ಲಿ ಇಬ್ಬರು ಗೋತ್ರ ಪ್ರಮುಖರು ಅನೀತಿಯಿಂದ ವರ್ತಿಸಿದರು ಎಂಬ ವಿವಾದಕ್ಕೆ ಸಂಬಂಧಿಸಿ ಈ ಯುದ್ಧವು ಸ್ಫೋಟಿಸಿತು. ಬಾಸೂಸ್‌ಳಿಗೆ ಸಂಬಂಧಿಸಿದ ಘರ್ಷಣೆಯ ಮುಕ್ತಾಯವಾದ ಕೂಡಲೇ ಈ ಯುದ್ಧವು ಪ್ರಾರಂಭಗೊಂಡು ಅನೇಕ ದಶಕಗಳ ಕಾಲ ಮುಂದುವರಿಯಿತು.

ಹಝ್ರತ್ ಮುಹಮ್ಮದ್‌ರವರು(ಸ) ಪಾಲನೆ ಪೋಷಣೆ ಪಡೆದ ಸಮಾಜವು ಮೇಲೆ ವಿವರಿಸಿದಂತಹದ್ದಾಗಿತ್ತು. ದೌರ್ಜನ್ಯ ಪೀಡಿತರಾದ ಪ್ರವಾದಿಯವರು(ಸ) ಬೋಧಿಸಿದ ಧರ್ಮವನ್ನು ಅಂಗೀಕರಿಸುವ ಪ್ರಥಮ ಸುಯೋಗವನ್ನು ದೇವನು ಈ ಜನರಿಗೆ ದಯಪಾಲಿಸಿದನು.

ಇಂತಹ ಉಗ್ರ ಮನೋಭಾವದ ಯುದ್ಧ ಪ್ರಿಯ ಜನರನ್ನು, ಯುದ್ಧೋನ್ಮತ್ತರಾಗಿ ಸದಾ ಸಿದ್ಧರಾಗಿರುವ ಜನರನ್ನು ಬಲಾತ್ಕಾರದಿಂದ ಧರ್ಮ ಪರಿವರ್ತನೆಗೆ ಗುರಿಪಡಿಸಲಾಯಿತೆಂದು ಆರೋಪಿಸುವುದು ನಿಜವಾದ ಚರಿತ್ರೆಯನ್ನು ನಿರಾಕರಿಸುವುದಕ್ಕೆ ಸಮವಾಗಿದೆ. ಅದಲ್ಲದೆ, ಇದು ಬದ್ರ್ ಯುದ್ಧದಲ್ಲಿ ಇಸ್ಲಾಮ್ ಧರ್ಮದ ರಕ್ಷಣೆಗಾಗಿ ತಮ್ಮ ಜೀವಗಳನ್ನು ಬಲಿಗೊಡಲು ಮುಂದಾದ ಆ ಪ್ರಥಮ ಸತ್ಯ ವಿಶ್ವಾಸಿಗಳ ವಿಶ್ವಾಸದ ಹಿರಿಮೆಯನ್ನು ಹೀನೈಸುವಂತಹದ್ದಾಗಿದೆ.

ಉಸೈದ್ ಬಿನ್ ಹುದೈರ್(ರ), ಸಅದ್ ಬಿನ್ ಖೈತಮ(ರ), ಅಸದ್ ಬಿನ್ ಝುರಾಹ(ರ), ಅಬ್ದುಲ್ಲಾ ಬಿನ್ ರವಾಹ್(ರ), ಸಅದ್ ಬಿನ್ ಉಬಾದ್(ರ), ಮುಂದಿರ್ ಬಿನ್ ಆಮಿರ್(ರ), ಬರಾ ಬಿನ್ ಮರೂರ್(ರ), ಉಬಾದ ಬಿನ್ ಅಸ್ಸಮೀ(ರ), ರಫೀ ಬಿನ್ ಮಾಲಿಕ್(ರ) ಮತ್ತು ಅನೇಕ ಅನ್‌ಸಾರ್‌ಗಳು (ಮದೀನದ ನಿವಾಸಿಗಳು) ಇಸ್ಲಾಮ್ ಧರ್ಮ ಸ್ವೀಕರಿಸಲು ಮದೀನದಿಂದ ಹೊರಟು ದೀರ್ಘ ಪ್ರಯಾಣ ಮಾಡಿ ಮಕ್ಕವನ್ನು ತಲಪಿದ್ದರು. ಈ ಜನರು ಇಸ್ಲಾಮ್ ಧರ್ಮವನ್ನು ಸ್ವೀಕರಿಸಿದುದರಲ್ಲಿ ಖಡ್ಗವು ಯಾವುದಾದರೊಂದು ಪಾತ್ರ ವಹಿಸಿದ್ದಿತೆಂದು ಸೂಕ್ಷ್ಮವಾಗಿ ಸಹ ಸೂಚಿಸುವುದು ಚಾರಿತ್ರಿಕ ಸತ್ಯವನ್ನು ನಿರಾಕರಿಸುವುದಕ್ಕೆ ಸಮವಾಗಿದೆ.

(ಮುಂದುವರಿಯುವುದು)

**"ಇನ್ಸಾನಿಯತ್ ಝಿಂದಾಬಾದ್"**
**"ಮಾನವೀಯತೆ ಚಿರಕಾಲ ಬಾಳಲಿ."**

*Read*

**The Review of Religions**

**Annual Subscription: Rs 100/-**
Write to: The Manager
The Review of Religions,
Qadian- 143516 (Punjab)

*Read*

**BADR**
Urdu Weekly

**Annual Subscription: Rs 250/-**
Write to: The Manager
The BADR Weekly
QADIAN - 143516 (Punjab)

*Read*

**ANSARULLAH**
Urdu & Hindi Quarterly

**Annual Subscription: Rs 60/-**
Write to: The Manager
ANSARULLAH
QADIAN - 143516 (Punjab)

*Read*

**MISHKAT**
Urdu Monthly

**Annual Subscription: Rs 120/-**
Write to: The Manager
MISHKAT
Qadian- 143516 (Punjab)

*Read*

**SATHYADOOTHAN**
Malayalam Weekly

**Annual Subscription: Rs 100/-**
Write to: The Manager
The SATHYADHOOTHAN Monthly
G.H. Road, Kozhikode
(Kerala)

*Read*

**SATHYAMITHRAM**
Malayalam Monthly

**Annual Subscription: Rs 60/-**
Write to: The Manager
SATHYAMITHRAM
Thavakkara, Kannur, (Kerala)

## Statement about ownership and other particulars about the Newspaper Yugarashmi Quarterly

(Form IV See Rule 8)

| | | |
|---|---|---|
| 1. | Place of Publication | : Mangalore |
| 2. | Period of its publication | : Quarterly |
| 3. | Printer's Name | : Muhammad Yusuf |
| | Whether citizen of India? | : Yes |
| | Address | 10-23-1008/1, 1st Floor, Ansari Road, Bunder, Mangalore - 575 001 |
| 4. | Publisher's Name | : Muhammad Yusuf |
| | Whether citizen of India? | : Yes |
| | Address | : 10-23-1008/1, 1st Floor, Ansari Road, Bunder, Mangalore - 575 001 |
| 5. | Editor's Name | : Muhammad Yusuf |
| | Whether citizen of India? | : Yes |
| | Address | : 10-23-1008/1, 1st Floor, Ansari Road, Bunder, Mangalore - 575 001 |
| 6. | Name and address of individuals who own the newspaper and partners or shareholders holding more than one percent of the capital | Jamath Ahmadiyya 10-23-1008/1, 1st Floor, Ansari Road, Bunder, Mangalore - 575 001 |

I, Muhammad Yusuf hereby declare that the particulars given above are true to the best of my knowledge and belief.

Sd/-
**Muhammad Yusuf**

Date : 1-12-2006

ದೇವಾಸ್ತಿತ್ವವನ್ನು ರುಜುಗೊಳಿಸುವ, ಧರ್ಮಗಳ ಆವಶ್ಯಕತೆಯನ್ನು ಸಾರುವ, ಆಧ್ಯಾತ್ಮಿಕ ಜ್ಞಾನವನ್ನು ಜನರ ಹೃದಯಗಳಲ್ಲಿ ಮೂಡಿಸುವ ಒಂದು ಉತ್ಕೃಷ್ಟ ತ್ರೈಮಾಸ ಪತ್ರಿಕೆ

# ಯುಗರಶ್ಮಿ

ಯಥಾರ್ಥ ಇಸ್ಲಾಂ ಮತ್ತು ಅಹ್ಮದಿಯಾ ಸಂಘಟನೆಯ ಸೇವೆಗಾಗಿ ಮೀಸಲಾಗಿರಿಸಿದ "ಯುಗರಶ್ಮಿ" ತ್ರೈಮಾಸಿಕವು ವಿವಿಧ ಧರ್ಮಗಳ ತುಲನಾತ್ಮಕ ಪಠನಾಸಕ್ತರಿಗೆ ಒಂದು ಉತ್ತಮ ಪತ್ರಿಕೆಯಾಗಿದೆ.

ದೇವಾಸ್ತಿತ್ವ, ಇತರ ಧರ್ಮ ಮತ್ತು ಧರ್ಮಾಚಾರ್ಯರ ಕುರಿತು ಇಸ್ಲಾಮಿನ ವೀಕ್ಷಣೆ, ಕೋಮು ಸೌಹಾರ್ದದ ಮಾರ್ಗಗಳು, ಇಸ್ಲಾಮಿನ ತತ್ವೋಪದೇಶಗಳು, ಮಾನವ ಕುಲದ ಏಳಿಗೆಗೆ ಇಸ್ಲಾಮಿನ ಕೊಡುಗೆ, ಇಂದಿನ ಆಧ್ಯಾತ್ಮಿಕ ಅಧಃಪತನ ಮತ್ತು ಪುನರುಜ್ಜೀವನ ಮಾರ್ಗಗಳು ಮೊದಲಾದ ವಿಷಯಗಳ ಕುರಿತು ಲೇಖನ ಪರಾಮರ್ಶೆಗಳನ್ನು ಈ ಪತ್ರಿಕೆಯ ಪ್ರತಿ ಸಂಚಿಕೆಯಲ್ಲೂ ಕಾಣಬಹುದು.

ಬಿಡಿ ಪ್ರತಿ : ರೂ.5-00 ವಾರ್ಷಿಕ ಚಂದಾ : ರೂ.20-00 ಅಂಚೆ ಮೂಲಕ: ರೂ.30-00

ವ್ಯವಹರಿಸಿರಿ : The Editor, **YUGARASHMI** Kannada Quarterly
10-23-1008/1, 1st Floor, Ansari Road, Bunder, Mangalore - 575 001

Registered with the Registrar of Newspapers for India No. R.N. 27354/75
YUGARASHMI Kannada Quarterly, December- 2006

ದಿನಂಪ್ರತಿ 24 ಗಂಟೆಗಳ ಕಾಲ ಪ್ರಸಾರಗೊಳ್ಳುತ್ತಿರುವ

ಏಕೈಕ ಇಸ್ಲಾಮೀ ಟಿ.ವಿ. ಚ್ಯಾನೆಲ್

ಮುಸ್ಲಿಂ ಟೆಲಿವಿಶನ್ ಅಹ್ಮದಿಯಾ
ಇಂಟರ್‌ನೇಶನಲ್

Muslim TV Ahmadiyya International

# THE FIRST ISLAMIC SATELLITE CHANNEL

**BROADCASTING ROUND THE CLOCK**

SATELLITE : ASIASAT 3S
POSITION : 105.5° EAST
FREQUENCY : 3760 MHZ
MIN. DISH SIZE : 1.8 METRE

POLARISATION : HORIZONTAL
SYMBOL RATE : 2600 MBPS
FEC : 7/8

E-Mail : info@alislam.org    Website : http:www.alislam.org/mta

ಅಹ್ಮದಿಯಾ ಮುಸ್ಲಿಂ ಜಮಾಅತಿನ ವತಿಯಿಂದ
ಪ್ರಕಟಿಸಲ್ಪಟ್ಟ

# ಪವಿತ್ರ ಖುರ್‌ಆನ್

## ಕನ್ನಡ ಭಾಷಾಂತರ

ಬೆಲೆ : ರೂ. 200/-

ದೊರೆಯುವ ವಿಳಾಸ :

AHMADIYA MUSLIM MISSION
No.1, 3rd Cross Road,
Wilson Garden,
Bangalore - 560 027
Phone : 080 - 22246133

NAZARAT NASHR-O-ISHAAT
Sadr Anjuman Ahmadiyya
QADIAN - 143516
(PUNJAB)

Edited and Published by Muhammad Yusuf on behalf of Jamath Ahmadiyya at 10-23-1008/1, Ist Floor, Ansari Road, Mangalore - 575 001.
Printed at Karavali Printers, Azizuddin Road, Mangalore on behalf of Jubilee Printing Press, Mangalore.
Typeset at View Graphics, Car street, Mangalore - 575 001